

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ


ಫೆಬ್ರವರಿ 21 ಮಂಗಳವಾರ 2023

ಸಂಪುಟ: 43 | ಸಂಚಿಕೆ: 303 | ಪುಟಗಳು: 10

ದೂರವಾಣಿ: 2496520, 2496521, 2496526, 2496527, 2496528,
ಜಾಹೀರಾತು: 2496522, 2496523, ನಗರ ಕಚೇರಿಗಳು: ಕೆ.ಆರ್. ಸರ್ಕಲ್,
ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com
website: www.mysurumithra.com

₹4



ಮೈಸೂರು ಸಮಗ್ರ ಅಭಿವೃದ್ಧಿಗೆ ಬಜೆಟ್‌ನಲ್ಲಿ ಭಾರೀ ಅನುದಾನ

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಕಳಕಳಿ ಕೊಂಡಾಡಿದ ಸಂಸದ ಪ್ರತಾಪಸಿಂಹ

■ಪುಟ–5

ಸಿದ್ದರಾಮಯ್ಯ ಕಾಲದ ಹಗರಣಗಳು

ಲೋಕಾಯುಕ್ತ ತನಿಖೆ

● ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಪ್ರಕಟ ● ನಮ್ಮ ಮೇಲೆ ಅನಗತ್ಯ ಆರೋಪ ಮಾಡಿ ಜನರ ದಿಕ್ಕೆಡಿಸುವ ಯತ್ನಕ್ಕೆ ಪ್ರತಿತಂತ್ರವಿದು ● ವಿಧಾನಸಭೆಯಲ್ಲಿ ರಾಜ್ಯಪಾಲರ ಭಾಷಣದ ಮೇಲಿನ ಚರ್ಚೆಗೆ ಉತ್ತರಿಸುವ ವೇಳೆ ಈ ಆದೇಶ ನೀಡಿದ ಸಿಎಂ ● ಸಂಕಷ್ಟ ಕಾಲದಲ್ಲಿ ಪರಿಸ್ಥಿತಿ ಯಶಸ್ವಿ ನಿರ್ವಹಣೆ ಜೊತೆಗೆ ತೆರಿಗೆ ಸಂಗ್ರಹಣೆಯಲ್ಲೂ ಸಾಧನೆ ಸಮರ್ಥನೆ

ಬೆಂಗಳೂರು, ಫೆ.20(ಕೆಎಂಶಿ)– ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಆಡಳಿತದಲ್ಲಿ ನಡೆದಿರುವ ಹಗರಣಗಳನ್ನು ತನಿಖೆಗಾಗಿ ಲೋಕಾಯುಕ್ತಕ್ಕೆ ವಹಿಸಲಾಗುವುದು ಎಂದು ಸಿಎಂ ಬಸವರಾಜ ಬೊಮ್ಮಾಯಿ ವಿಧಾನಸಭೆಯಲ್ಲಿ ತಿಳಿಸಿದ್ದಾರೆ.

ವಿಧಾನಸಭಾ ಚುನಾವಣೆ ಸಮೀಪಿಸುತ್ತಿದ್ದಂತೆ ಕಾಂಗ್ರೆಸ್ ಮತ್ತು ಬಿಜೆಪಿ ಪಕ್ಷದ ಮುಖಂಡರುಗಳು ಸದನದ ಹೊರಗೆ ಭ್ರಷ್ಟಾಚಾರದ ಆರೋಪ–ಪ್ರತ್ಯಾರೋಪಗಳನ್ನು ಮಾಡಿ ಸಾರ್ವಜನಿಕರನ್ನು ದಿಕ್ಕೆಡಿಸುವ ಬೆನ್ನಲ್ಲೇ ಮುಖ್ಯಮಂತ್ರಿಯವರು ಕಾಂಗ್ರೆಸ್ ನಾಯಕರು ಮಾಡಿರುವ ಭ್ರಷ್ಟಾಚಾರಗಳಿಗೆ ಸಂಬಂಧಿಸಿದಂತೆ ಸದನದಲ್ಲೇ ತನಿಖೆಗೆ ಆದೇಶ ಮಾಡಿದ್ದಾರೆ. ರಾಜ್ಯಪಾಲರ ಭಾಷಣದ ಮೇಲಿನ ಚರ್ಚೆಗೆ ಉತ್ತರಿಸಿದ ಮುಖ್ಯಮಂತ್ರಿ ಅವರು, ಸಿದ್ದರಾಮಯ್ಯ ಆಡಳಿತ



ಅವಧಿಯಲ್ಲಿ ಆ ಪಕ್ಷದ ಸಚಿವರು, ಶಾಸಕರು ಮತ್ತು ಮುಖಂಡರ ಮೇಲೆ ಅಲ್ಲದೆ ಸ್ವತಃ ಅಂದಿನ ಮುಖ್ಯಮಂತ್ರಿಗಳ ವಿರುದ್ಧವೇ ಎಸಿಬಿಯಲ್ಲಿ ದೂರು ದಾಖಲಾಗಿದ್ದವು. ಅವುಗಳಲ್ಲಿ ಕೆಲವು ತನಿಖೆ ನಡೆಸಿ, ಬಿ ರಿಪೋರ್ಟ್ ಹಾಕಲಾಗಿತ್ತು.

▶ 8ನೇ ಪುಟಕ್ಕೆ

ಜಲಜೀವನ ಮಿಷನ್‌ನಡಿ ವರ್ಷದಲ್ಲಿ 25 ಲಕ್ಷ ಮನೆಗೆ ನಲ್ಲಿ ನೀರು ಪೂರೈಕೆ

ಬೆಂಗಳೂರು, ಫೆ.20(ಕೆಎಂಶಿ)– ಜಲ ಜೀವನ ಮಿಷನ್ ಯೋಜನೆಯಡಿ ಮುಂದಿನ ವರ್ಷ ರಾಜ್ಯದ 25 ಲಕ್ಷ ಮನೆಗಳಿಗೆ ನಲ್ಲಿ ಮೂಲಕ ನೀರು ಒದಗಿಸಲು ಅನುಮೋದಿಸಲಾಗಿದೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ವಿಧಾನಸಭೆಗೆ ತಿಳಿಸಿದರು. ರಾಜ್ಯಪಾಲರ ಭಾಷಣದ ಮೇಲಿನ ಚರ್ಚೆಗೆ ಉತ್ತರಿಸಿದ ಮುಖ್ಯ ಮಂತ್ರಿನಲ್ಲಿ ಮೂಲಕ ಮನೆಗಳಿಗೆ ನೀರು ಒದಗಿಸುವ ಯೋಜನೆಗೆ ಬಜೆಟ್ ಅನುದಾನ ಒದಗಿಸಲಾಗಿದೆ.

▶ 8ನೇ ಪುಟಕ್ಕೆ

ಹಳೇ ಉಂಡುವಾಡಿ ಬಳಿ ಕಾವೇರಿ ನದಿಯಿಂದ ಮೈಸೂರು ನಗರ, ಚಾಮುಂಡೇಶ್ವರಿಯ 139, ಹುಣಸೂರಿನ 277 ಗ್ರಾಮಗಳಿಗೆ ಕುಡಿಯುವ ನೀರು

593 ಕೋಟಿ ರೂ. ವಿಸ್ತೃತ ಯೋಜನೆಗೆ ಸಂಪುಟ ಅಸ್ತು



ಮೈಸೂರು, ಫೆ. 20– ಹಳೇ ಉಂಡುವಾಡಿ ಗ್ರಾಮದ ಬಳಿ ಕಾವೇರಿ ನದಿ ಮೂಲದಿಂದ ಮೈಸೂರು ನಗರ, ಚಾಮುಂಡೇಶ್ವರಿ ಕ್ಷೇತ್ರದ 139 ಹಾಗೂ ಹುಣಸೂರು ತಾಲೂಕಿನ 277 ಗ್ರಾಮಗಳಿಗೆ ಕುಡಿಯುವ ನೀರು ಸರಬರಾಜು ಮಾಡುವ 593 ಕೋಟಿ ರೂ. ವೆಚ್ಚದ ಯೋಜನೆಗೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅಧ್ಯಕ್ಷತೆಯಲ್ಲಿ ಇಂದು ನಡೆದ ಸಂಪುಟ ಸಭೆ ಒಪ್ಪಿಗೆ ನೀಡಿದೆ ಎಂದು ಮೈಸೂರು–ಕೊಡಗು ಸಂಸದ ಪ್ರತಾಪ್ ಸಿಂಹ ತಿಳಿಸಿದ್ದಾರೆ.

ಈ ಸಂಬಂಧ 'ಮೈಸೂರು ಮಿತ್ರ'ನೊಂದಿಗೆ ಮಾತನಾಡಿದ ಅವರು, ಮೈಸೂರು ನಗರ ಮತ್ತು ಚಾಮುಂಡೇಶ್ವರಿ ಕ್ಷೇತ್ರದ 92 ಗ್ರಾಮಗಳಿಗೆ ಬಹು ಗ್ರಾಮ ಕುಡಿಯುವ ನೀರು ಯೋಜನೆಯಡಿ ಈ ಹಿಂದೆ 545 ಕೋಟಿ ರೂ.ಗಳ ಅಂದಾಜು ಪಟ್ಟಿಯನ್ನು ಸರ್ಕಾರಕ್ಕೆ ಸಲ್ಲಿಸಲಾಗಿತ್ತು ಎಂದ ಅವರು, ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ. ದೇವೇಗೌಡರ ಪ್ರಯತ್ನದಿಂದ ಈ ಯೋಜನೆಗೆ 2019ರ ಫೆಬ್ರವರಿ 21ರಲ್ಲಿ 350 ಕೋಟಿ ರೂ.ಗಳಿಗೆ ಮೀರದಂತೆ ಮೊದಲನೇ ಹಂತವಾಗಿ ಆಡಳಿತಾತ್ಮಕ ಅನುಮೋದನೆ ನೀಡಲಾಗಿತ್ತು. 2020ರ ಜುಲೈ 17ರಂದು ತಾಂತ್ರಿಕ ಮಂಜೂರಾತಿಯನ್ನು ನೀಡಲಾಗಿತ್ತು ಎಂದು ಅವರು ಹೇಳಿದರು. ಆದರೆ, ಸರ್ಕಾರದಿಂದ ಮಂಜೂರಾತಿ ದೊರೆತಿದ್ದ 350 ಕೋಟಿ ರೂ. ವೆಚ್ಚದಲ್ಲಿ ಮೈಸೂರು ನಗರಕ್ಕೆ ಮಾತ್ರ ನೀರು ಸರಬರಾಜು ಮಾಡಲು ಸಾಧ್ಯವಾಗುತ್ತಿತ್ತೇ ಹೊರತು, ಚಾಮುಂಡೇಶ್ವರಿ ಕ್ಷೇತ್ರದ ಗ್ರಾಮಗಳಿಗೆ ನೀರೊದಗಿಸಲು ಆಗುತ್ತಿರಲಿಲ್ಲ. ಈ ಹಿನ್ನೆಲೆಯಲ್ಲಿ

▶ 6ನೇ ಪುಟಕ್ಕೆ

▶▶ ಮೈಸೂರು ನಗರ, ಚಾಮುಂಡೇಶ್ವರಿ ಕ್ಷೇತ್ರದ 139 ಗ್ರಾಮ ಮತ್ತು ಹುಣಸೂರು ತಾಲೂಕಿನ 277 ಗ್ರಾಮಗಳಿಗೆ ಕುಡಿಯುವ ನೀರೊದಗಿಸುವ ಯೋಜನೆಗೆ 593 ಕೋಟಿ ರೂ. ಮಂಜೂರಾತಿ ನೀಡಿದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಸಹಕರಿಸಿದ ನಗರಾಭಿವೃದ್ಧಿ ಸಚಿವ ಭೈರತಿ ಬಸವರಾಜ್, ಕರ್ನಾಟಕ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಅಧ್ಯಕ್ಷ ರಾಜೂಗೌಡ ಅವರಿಗೆ ಮೈಸೂರು ನಗರ, ಚಾಮುಂಡೇಶ್ವರಿ ಕ್ಷೇತ್ರ ಹಾಗೂ ಹುಣಸೂರು ತಾಲೂಕಿನ ಜನತೆಯ ಪರವಾಗಿ ಧನ್ಯವಾದಗಳನ್ನು ಅರ್ಪಿಸುತ್ತಿದ್ದೇನೆ.



– ಪ್ರತಾಪ್ ಸಿಂಹ, ಸಂಸದ



ಅಶೋಕ ರಸ್ತೆ, ಮೈಸೂರು. ಫೋ: 0821–2521926,
ದೇವಸ್ಥಾನದ ರಸ್ತೆ, ವಿ.ವಿ.ಮೊಹಲ್ಲಾ, ಮೈಸೂರು.
ಫೋ: 0821–2411926
ಎಂಜಿಎಸ್ ರಸ್ತೆ, ಬಸ್‌ಸ್ಟ್ಯಾಂಡ್ ಎದುರು,
ನಂಜನಗೂಡು. ಫೋ: 08221–200926

SDJ GOLD
ನೀವು ಗಿರವಿ ಇಟ್ಟು ಬಿಡಿಸಿಕೊಳ್ಳಲಾಗದ ಚಿನ್ನವನ್ನು ನಾವೇ ಹಣಕೊಟ್ಟು ಬಿಡಿಸಿ ಉಳಿದ ಹಣ ತಕ್ಷಣ ಕೊಡುತ್ತೇವೆ.
ಒಂದು ಗ್ರಾಂ ಚಿನ್ನಕ್ಕೆ 5850
8884304444

GOLD COMPANY
ಗಿರವಿ ಚಿನ್ನಾಭರಣ ಖರೀದಿ
ಒಂದು ಗ್ರಾಂ ಚಿನ್ನಕ್ಕೆ 5700
ನೀವು ಗಿರವಿ ಇಟ್ಟು ಬಿಡಿಸಿಕೊಳ್ಳಲಾಗದ ಚಿನ್ನ ಆಭರಣಗಳನ್ನು ನಾವೇ ಬಿಡಿಸಿ ಇಂದಿನ ಬೆಲೆಗೆ ತೆಗೆದುಕೊಳ್ಳುತ್ತೇವೆ
ಕೂಡಲೇ ಸಂಪರ್ಕಿಸಿ.
9964522225

ಮುಂದುವರೆದ ರೋಹಿಣಿ–ರೂಪಾ ಹಾದಿ ರಂಪಾಟ

ಸಿಎಂ ಸೂಚನೆಯಂತೆ ಇಬ್ಬರಿಗೂ ನೋಟೀಸ್ ನೀಡಿ ವಿವರಣೆ ಪಡೆದ ಮುಖ್ಯ ಕಾರ್ಯದರ್ಶಿ

● ಸಿಎಸ್ ಬಳಿ ಇಬ್ಬರೂ ಅಧಿಕಾರಿಗಳೂ ಪರಸ್ಪರ ಆರೋಪಗಳ ಸುರಿಮಳೆ ● ನಂತರವೂ ಮಾಧ್ಯಮಗಳ ಮುಂದೆ ಆರೋಪ–ಪ್ರತ್ಯಾರೋಪ ● ವಿಷಯ ಗಂಭೀರವಾಗಿ ಪರಿಗಣಿಸಿರುವ ಮುಖ್ಯಮಂತ್ರಿಗಳು; ಯಾವುದೇ ಸಂದರ್ಭ ಶಿಸ್ತು ಕ್ರಮ ಸಂಭವ





ಬೆಂಗಳೂರು, ಫೆ.20 (ಕೆಎಂಶಿ)– ಸರ್ಕಾರಕ್ಕೆ ಅಗೌರವ ಹಾಗೂ ಮುಜುಗರ ಉಂಟಾಗುವ ರೀತಿಯಲ್ಲಿ ಹಾದಿಬೀದಿಯಲ್ಲಿ ಪರಸ್ಪರ ಹೇಳಿಕೆ ನೀಡುತ್ತಿರುವ ಇಬ್ಬರು ಹಿರಿಯ ಅಧಿಕಾರಿಗಳಿಗೆ ನೋಟಿಸ್ ಜಾರಿ ಮಾಡಿ, ಅವರಿಂದ ತುರ್ತು ವಿವರಣೆಯನ್ನು ಪಡೆಯಲಾಗಿದೆ.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಆದೇಶದಂತೆ ರಾಜ್ಯದ ಮುಖ್ಯಕಾರ್ಯದರ್ಶಿಯವರು ಐಎಎಸ್ ಅಧಿಕಾರಿ ರೋಹಿಣಿ ಸಿಂಧೂರಿ ಹಾಗೂ ಐಪಿಎಸ್ ಅಧಿಕಾರಿ ಡಿ. ರೂಪಾ ಅವರನ್ನು ತಮ್ಮ ಕಚೇರಿಗೆ ಕರೆಸಿಕೊಂಡು ವಿವರಣೆ ಪಡೆದಿದ್ದಾರೆ. ಇಬ್ಬರೂ ಹಿರಿಯ ಅಧಿಕಾರಿಗಳು ನೀಡಿರುವ ವಿವರಣೆಯನ್ನು ತುಲನೆ ಮಾಡಿ, ಮುಖ್ಯಕಾರ್ಯದರ್ಶಿಯವರು ಸರ್ಕಾರಕ್ಕೆ ಯಾವುದೇ ಸಂದರ್ಭದಲ್ಲಿ ವರದಿ ನೀಡಲಿದ್ದಾರೆ. ಈ ಇಬ್ಬರೂ ಅಧಿಕಾರಿಗಳ ಜಗಳ ಬೀದಿಗೆ ಬಂದು, ಸರ್ಕಾರದ

▶ 6ನೇ ಪುಟಕ್ಕೆ

ಕೆಳಸೇತುವೆಗೆ ಒತ್ತಾಯಿಸಿ ಮಂಡ್ಯ ಬಳಿ ಎಕ್ಸ್‌ಪ್ರೆಸ್ ವೇ ತಡೆ

● ಮೈಸೂರು–ಬೆಂಗಳೂರು ದಶಪಥ ಹೆದ್ದಾರಿ ಸಂಚಾರ ನಾಲ್ಕು ಗಂಟೆ ಬಂದ್ ● ಧರಣಿ ನಿರತ ರೈತರು, ಗ್ರಾಮಸ್ಥರ ತೆರವಿಗೆ ಪೊಲೀಸರ ಲಾಠಿ ಪ್ರಹಾರ ● ಹೆದ್ದಾರಿ ಪ್ರಾಧಿಕಾರದಿಂದ ಬೇಡಿಕೆ ಈಡೇರಿಸುವ ಫ್ಯಾಕ್ಸ್ ಸಂದೇಶ: ಹೋರಾಟ ಸ್ಥಗಿತ

ಮಂಡ್ಯ, ಫೆ.20(ಮೋಹನ್‌ರಾಜ್)– ಮೈಸೂರು–ಬೆಂಗಳೂರು ವಿಶ್ವದರ್ಜೆಯ ದಶಪಥ ಹೆದ್ದಾರಿ ವಿಷಯದಲ್ಲಿ ಮಂಡ್ಯ ಹಾಗೂ ರಾಮನಗರ ಜಿಲ್ಲೆಯ ಜನರಲ್ಲಿ ಅಪಸ್ವರ ಕೇಳಿ ಬರುತ್ತಲೇ ಇದ್ದು, ಹಲವು ಬಾರಿ ರಸ್ತೆ ಪಕ್ಕದ ಗ್ರಾಮಸ್ಥರು ಹೋರಾಟ ನಡೆಸಿದ್ದರು. ಈಗ ರಸ್ತೆ ಉದ್ಘಾಟನೆಗೆ ಕೇವಲ ಒಂದು ತಿಂಗಳು ಬಾಕಿ ಇರುವಾಗ ಮಂಡ್ಯ ತಾಲೂಕಿನ ಹನಕೆರೆ ಬಳಿ ಕೆಳ ಸೇತುವೆ (ಅಂಡರ್ ಪಾಸ್) ನಿರ್ಮಾಣಕ್ಕೆ ಆಗ್ರಹಿಸಿ 3 ಗ್ರಾಪಂ ವ್ಯಾಪ್ತಿಯ 35 ಗ್ರಾಮಗಳ ಗ್ರಾಮಸ್ಥರು ಹಾಗೂ ರೈತ ಸಂಘದ ಕಾರ್ಯಕರ್ತರು ಹೆದ್ದಾರಿ ತಡೆ ನಡೆಸಿದ ಪರಿಣಾಮ ಹೆದ್ದಾರಿ ಸಂಚಾರ 4 ಗಂಟೆ ಅಸ್ತವ್ಯಸ್ಥಗೊಂಡಿತ್ತು.

ಮೈಸೂರು–ಬೆಂಗಳೂರು ಹೆದ್ದಾರಿ 275ರ ಹನಕೆರೆ ಬಳಿ ಕೆಳ ಸೇತುವೆ ನಿರ್ಮಿಸದ ಪರಿಣಾಮ, ಹನಕೆರೆ, ಗೌಡಗೆರೆ, ಕನ್ನಲಿ ಗ್ರಾಪಂ ವ್ಯಾಪ್ತಿಯ 35 ಗ್ರಾಮಗಳ ಜನರು ತೀವ್ರ ತೊಂದರೆಗೀಡಾಗುತ್ತಿದ್ದು, ಅಂಡರ್ ಪಾಸ್ ಹಾದು ಹೋಗಲು ಒಂದು ಕಿಲೋ ಮೀಟರ್ ಬಳಸಿ ಬರಬೇಕಾದ ಪರಿಸ್ಥಿತಿ ಇದ್ದು, ಅವೈಜ್ಞಾನಿಕ ಅಂಡರ್ ಪಾಸ್ ವಿರುದ್ಧ ರೈತರು ಹಾಗೂ ಗ್ರಾಮಸ್ಥರು ಹೆದ್ದಾರಿ ಅಭಿವೃದ್ಧಿ ಪ್ರಾಧಿಕಾರಕ್ಕೆ ಎಷ್ಟೇ ಮನವಿ ಮಾಡಿದರೂ, ಸಾಧ್ಯವಾಗದ ಹಿನ್ನಲೆಯಲ್ಲಿ ಸೋಮವಾರ ರೊಚ್ಚಿಗೆದ್ದು ರಸ್ತೆ ತಡೆದು ಪ್ರತಿಭಟನೆ ನಡೆಸಿದರು.



ಸೋಮವಾರ ಬೆಳಗ್ಗೆ 7 ಗಂಟೆಗೆ ಹನಕೆರೆ ಬಳಿ ಆಗಮಿಸಿದ ಮೂರು ಗ್ರಾಪಂನ 35 ಗ್ರಾಮಗಳ ಗ್ರಾಮಸ್ಥರಿಗೆ ರೈತ ಸಂಘ ಸಾಥ್ ನೀಡಿತು. ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್‌ವೇನಲ್ಲಿ ಪ್ರತಿಭಟನೆ ನಡೆಸಲು ಬೆಳಗ್ಗೆ 8.30ರ ಹೊತ್ತಿಗೆ ಶಾಮಿಯಾನ ಹಾಕಿ, ಜಾನುವಾರುಗಳು, ಎತ್ತಿನಗಾಡಿ ಕಟ್ಟಿ ರಸ್ತೆ ತಡೆ ಆರಂಭಿಸಿದರು. ಸುತ್ತ ಮುತ್ತಲ ಗ್ರಾಮಸ್ಥರು ಭಾಗವಹಿಸಿದ್ದರಿಂದ ಸಾವಿರಾರು ಮಂದಿ ಪ್ರತಿಭಟನೆಯಲ್ಲಿ ಪಾಲ್ಗೊಂಡರು. ಹನಕೆರೆಯಿಂದ 600 ಮೀಟರ್ ದೂರದಲ್ಲಿ ಕೆಳ ಸೇತುವೆ ನಿರ್ಮಾಣ ಮಾಡಿರುವುದರಿಂದ 35ಕ್ಕೂ ಹೆಚ್ಚು ಗ್ರಾಮಸ್ಥರು ಸುತ್ತಿ ಬಳಸಿ ಓಡಾಡಬೇಕಾಗಿ ಬಂದಿದೆ. ಈ ಹಿಂದೆ ಕೆಳ ಸೇತುವೆ ಮಾಡಿಸುವಂತೆ ಜನಪ್ರತಿನಿಧಿಗಳ ಗಮನಕ್ಕೆ ತಂದಿದ್ದರೂ ನಿರ್ಲಕ್ಷ್ಯ ವಹಿಸಿದ್ದಾರೆ ಎಂದು ಪ್ರತಿಭಟನಾಕಾರರು ದೂರಿದರು. ಕೆಳ ಸೇತುವೆ ಸೂಕ್ತ

▶ 6ನೇ ಪುಟಕ್ಕೆ



ನನ್ನ ವಿಧಾನಸೌಧದ 3ನೇ ಮಹಡಿಗೇರಿಸಿ!

● ಸಿದ್ದರಾಮಯ್ಯ ತವರೂರಲ್ಲೇ 'ಮುಖ್ಯಮಂತ್ರಿ' ಮಂತ್ರ ಜಪಿಸಿದ ಡಿ.ಕೆ.ಶಿವಕುಮಾರ್

● ಬನ್ನೂರಲ್ಲಿ ಪ್ರಜಾಧ್ವನಿ ಯಾತ್ರೆ ಸಮಾವೇಶದಲ್ಲಿ ಬಿಜೆಪಿ ವಿರುದ್ಧ ವಾಗ್ದಾಳಿ



ತಿ.ನರಸೀಪುರ, ಫೆ.20– ನಲವತ್ತು ಪರ್ಸೆಂಟ್ ಕಮಿಷನ್ ಕೊಡಬೇಕಿರುವುದರಿಂದ ಅಭಿವೃದ್ಧಿ ಕಾಮಗಾರಿಗಳ ಎಸ್ಟಿಮೇಟನ್ನೇ 200 ಪರ್ಸೆಂಟ್‌ಗೆ ಏರಿಸಿರುವ ಭ್ರಷ್ಟ ಬಿಜೆಪಿ ಸರ್ಕಾರವನ್ನು ವಿಧಾನಸೌಧದಿಂದ ಓಡಿಸಿ, ಜನರ ಕೆಲಸ ಮಾಡುವ ಕಾಂಗ್ರೆಸ್ ಪಕ್ಷವನ್ನು ಮತ್ತೆ ಅಧಿಕಾರಕ್ಕೆ ತನ್ನಿ, ನಾನು ವಿಧಾನಸೌಧದ ಮೂರನೇ ಮಹಡಿಯಲ್ಲಿ ಕೂರಲು ಸಾರ್ವತ್ರಿಕ ಚುನಾವಣೆಯಲ್ಲಿ ನನ್ನ ಕೈ ಬಲಪಡಿಸಿ ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಬನ್ನೂರು ಭಾಗದ ಜನತೆಯಲ್ಲಿ ಮನವಿ ಮಾಡಿದರು.

ತಾಲೂಕಿನ ಬನ್ನೂರು ಪಟ್ಟಣದಲ್ಲಿ ಸೋಮವಾರ ನಡೆದ ಪ್ರಜಾಧ್ವನಿ ಯಾತ್ರೆ ಸಮಾವೇಶವನ್ನು ನಗಾರಿ ಬಾರಿಸುವ ಮೂಲಕ ಉದ್ಘಾಟಿಸಿ ಮಾತನಾಡಿದ ಅವರು, ಮುಂಬರುವ ಚುನಾವಣೆಯಲ್ಲಿ ನರಸೀಪುರದಲ್ಲಿ ಮಹದೇವಪ್ಪ ಅಥವಾ ಸುನೀಲ್ ಬೋಸ್ ಅಭ್ಯರ್ಥಿಯಲ್ಲ. ಸಿದ್ದರಾಮಯ್ಯ ಮತ್ತು ನಾನು ಅಭ್ಯರ್ಥಿ ಎಂಬುದು ಅರಿವಿರಲಿ. ನಿಮ್ಮ ಮನೆಯ ಮಗ, ಸಹೋದರನಾದ ನಾನು ಚುನಾವಣೆಗೆ ನಿಂತಿದ್ದೇನೆ ಎಂಬ ಭಾವನೆಯಿರಲಿ ಎಂದರು.

ಕೇಂದ್ರ ಹಾಗೂ ರಾಜ್ಯದಲ್ಲಿ ಅಧಿಕಾರದಲ್ಲಿರುವ ಬಿಜೆಪಿ ಸರ್ಕಾರ ನೀಡಿದ್ದ ಯಾವೊಂದು ಭರವಸೆ ಈಡೇರಿಸಿಲ್ಲ. ಪ್ರಧಾನಿ ಮೋದಿ ಸ್ವಿಸ್ ಬ್ಯಾಂಕ್‌ನಲ್ಲಿರುವ ಕಪ್ಪು ಹಣ ತಂದು ಯಾವೊಬ್ಬರ ಖಾತೆಗೂ ಹಾಕಲೇ ಇಲ್ಲ. ರೈತರ ಆದಾಯ ದುಪ್ಪಟ್ಟು ಮಾಡುತ್ತೇನೆ ಎಂದು ಕೃಷಿ ವೆಚ್ಚವನ್ನು 2 ಪಟ್ಟು ಹೆಚ್ಚಿಸಿದರು. ಕೊರೊನಾ ಕಷ್ಟ ಕಾಲದಲ್ಲಿ ಜನರ ಕೈ ಹಿಡಿಯಲಿಲ್ಲ. ಕೊರೊನಾ ಆವರಿಸಿದ 2 ವರ್ಷಗಳ ಕಾಲದಲ್ಲಿ ಯಾರೊಬ್ಬರ ಕಷ್ಟಕ್ಕೂ ಸ್ಪಂದಿಸದೆ ಚಪ್ಪಾಳೆ ತಟ್ಟಿ, ದೀಪ ಹಚ್ಚಿ ಎನ್ನುತ್ತಲೇ 21 ದಿನದೊಳಗೆ ಕೊರೊನಾವನ್ನೇ ನಿರ್ನಾಮ ಮಾಡುತ್ತೇನೆ ಎಂದು

▶ 8ನೇ ಪುಟಕ್ಕೆ


"ಗೌಡ್ರು, ಕುಮಾರಣ್ಣರ ಕೊಡುಗೆ ಏನು ಹೇಳಿ!?

ಪ್ರಧಾನಿಯಾಗಿದ್ದ ಹೆಚ್.ಡಿ.ದೇವೇಗೌಡರು, 2 ಬಾರಿ ಸಿಎಂ ಆಗಿದ್ದ ಕುಮಾರಣ್ಣರ ಕೊಡುಗೆ ಏನೆಂಬುದನ್ನು ಜನ ಹೇಳಬೇಕು. ಪಂಚವಾರ್ಷಿಕ ಯೋಜನೆ ನೆಹರು, ಉಳುವವನಿಗೆ ಭೂ ಒಡೆತನ ಇಂದಿರಾ ಗಾಂಧಿ, ತಂತ್ರಜ್ಞಾನವನ್ನು ರಾಜೀವ್ ಗಾಂಧಿ, ಉದ್ಯೋಗ ಖಾತರಿ ಯೋಜನೆ ಮನಮೋಹನ್ ಸಿಂಗ್ ಹಾಗೂ ಅನ್ನಭಾಗ್ಯ ಯೋಜನೆಯನ್ನು ಸಿದ್ದರಾಮಯ್ಯ ಕೊಡುಗೆಯಾಗಿ ನೀಡಿರುವಂತೆ ದೊಡ್ಡ ಗೌಡರು ಹಾಗೂ ಕುಮಾರಣ್ಣನ ಕೊಡುಗೆ ಏನೆಂಬುದನ್ನು ಜನರೇ ಹೇಳಬೇಕು.

– ಡಿ.ಕೆ.ಶಿವಕುಮಾರ್, ಕೆಪಿಸಿಸಿ ಅಧ್ಯಕ್ಷ.

" ಕಾಂಗ್ರೆಸ್ ಜನರ ಹಿತ ಕಾಪಾಡುವ ಪಕ್ಷ. ನಮ್ಮ ತಂದೆಯರಿಗೆ ಕ್ಷೇತ್ರದಲ್ಲಿ ಕೆಲಸ ಮಾಡುವ ಅವಕಾಶ ಕೊಟ್ಟಿದ್ದರಿಂದ ನಿಮ್ಮ ನಿರೀಕ್ಷೆಗೆ ತಕ್ಕಂತೆ ಅಭಿವೃದ್ಧಿಗೆ ಒತ್ತು ಕೊಟ್ಟು ಕೆಲಸ ಮಾಡಲಾಗಿದೆ. ಕಳೆದ ಚುನಾವಣೆಯಲ್ಲಿ ನಮಗೆ ಹಿನ್ನಡೆಯಾಯಿತಾದರೂ ನಾವು ಕ್ಷೇತ್ರ ಮರೆಯದೇ ಜನರ ಕಷ್ಟ ಸುಖಗಳಿಗೆ ಸ್ಪಂದಿಸುವ ಕೆಲಸ ಮಾಡುತ್ತಾ ಬಂದಿದ್ದೇವೆ. ಕ್ಷೇತ್ರದ ಜನತೆ ಇಲ್ಲಿ ಮತ್ತೆ ಕಾಂಗ್ರೆಸ್ ಅಭ್ಯರ್ಥಿ ಗೆಲುವಿಗಾಗಿ ಹಂಬಲಿಸುತ್ತಿದ್ದಾರೆ. ಇನ್ನೇನು ಕೆಲವೇ ದಿನಗಳಲ್ಲಿ ಚುನಾವಣೆ ಘೋಷಣೆಯಾಗಲಿದ್ದು, ಪಕ್ಷದ ಕಾರ್ಯಕರ್ತರು ಒಗ್ಗೂಡಿ ಪಕ್ಷದ ಅಭ್ಯರ್ಥಿ ಗೆಲುವಿಗೆ ಶ್ರಮಿಸೋಣ.

– ಸುನೀಲ್ ಬೋಸ್, ಕಾಂಗ್ರೆಸ್ ಟಿಕೆಟ್ ಆಕಾಂಕ್ಷಿ.



ಹಿನಕಲ್ ನನ್ನೇಶ್ವರ ದೇವಾಲಯದಲ್ಲಿ ಶಿವರಾತ್ರಿ ಆಚರಣೆ



ಮೈಸೂರು, ಫೆ. 20–ಹಿನಕಲ್‌ನ ನನ್ನೇಶ್ವರ ದೇವಾಲಯದಲ್ಲಿ ಶಿವರಾತ್ರಿ ಹಬ್ಬದ ಅಂಗವಾಗಿ ನಡೆದ ವಿಶೇಷ ಪೂಜೆಯಲ್ಲಿ ಸಾವಿರಾರು ಭಕ್ತರು ಭಾಗವಹಿಸಿ ನನ್ನೇಶ್ವರನ ದರ್ಶನ ಪಡೆದರು. ಶನಿವಾರ ಬೆಳಗ್ಗೆ 5 ಗಂಟೆಯಿಂದಲೇ ಪ್ರಾರಂಭವಾದ ಪೂಜೆ ರಾತ್ರಿಯೆಲ್ಲಾ ನಡೆಯಿತು. ಭಕ್ತಾದಿಗಳು ಸಾಲುಗಟ್ಟಿ ನಿಂತು ದೇವರ ಕೃಪೆಗೆ ಪಾತ್ರರಾದರು. ರಾತ್ರಿ ಆರ್.ಟಿ.ಓ. ಸುರೇಶ್ ಸಹಾಯಾರ್ಥ ಮಹೇಂದ್ರ ತಂಡದವರಿಂದ ಭಕ್ತಿಗೀತೆಗಳ ಗೀತಗಾಯನ ಕಾರ್ಯಕ್ರಮ ನಡೆಯಿತು. ಬ್ರಹ್ಮಕುಮಾರಿ ಆಶ್ರಮದ ಸಂಚಾಲಕರಾದ ಅಕ್ಕಸಂಧ್ಯಾ ಅವರಿಂದ ಶಿವನನ್ನು ಕುರಿತ ಪ್ರವಚನ ನಡೆಯಿತು. ದೇವಸ್ಥಾನಕ್ಕೆ ಬಂದ ಭಕ್ತಾಧಿಗಳಿಗೆಲ್ಲಾ ಬೆಳಗ್ಗೆ ತಿಂಡಿ, ರಾತ್ರಿ ಲಾಡುಗಳನ್ನು ಪ್ರಸಾದವಾಗಿ ನೀಡಲಾಯಿತು.

ಸಮಾರಂಭದಲ್ಲಿ ಮೈಮುಲ್ ಮಾಜಿ ಅಧ್ಯಕ್ಷ ಮಾವಿನಹಳ್ಳಿ ಸಿದ್ದೇಗೌಡ, ಜಿ.ಪಂ. ಮಾಜಿ ಸದಸ್ಯರಾದ ರಾಕೇಶ್‌ಪಾಪಣ್ಣ, ಬೀರಿಹುಂಡಿ ಬಸವಣ್ಣ, ಯರಗನಹಳ್ಳಿ ಮಾದೇಗೌಡ, ಗ್ರಾ.ಪಂ. ಮಾಜಿ ಉಪಾಧ್ಯಕ್ಷ ಹೊನ್ನಪ್ಪ, ಉದಯ್, ರಾಜಣ್ಣ, ಬೈರನಾಯ್ಕ, ಕೆಂಪನಾಯ್ಕ, ವಿಲ್ ದೇವಣ್ಣ, ಶಿವಕುಮಾರ್, ನಾಗೇಶ್, ರಘು, ತಮ್ಮಡಗೇರಿ ಬೀದಿಯ ರಾಜು, ಹೇಮ್‌ಕುಮಾರ್, ಟೈಲರ್ ಮಹಾದೇವ್, ಕೀತಿ, ನವೀನ್ ಹಾಜರಿದ್ದರು. ಬಸವರಾಜು ಸ್ವಾಗತಿಸಿದರು.

ಭಗವಂತನ ಧ್ಯಾನವೇ ನಿಜವಾದ ಉಪವಾಸ

ಮಹಾಶಿವರಾತ್ರಿಯಲ್ಲಿ ಪಂಡಿತ್ ಅನಿರುದ್ಧಾಚಾರ್ಯ ಪಾಂಡುರಂಗಿ ಅಭಿಮತ



ಮೈಸೂರು, ಫೆ. 20–ಮನಸ್ಸು ದುರ್ಬುದ್ಧಿಯ ಸುಳಿಗೆ ಸಿಲುಕದ ಹಾಗೆ ಬುದ್ಧಿಯಿಂದ ಭಗವಂತನ ಧ್ಯಾನ ಮಾಡುವುದೇ ನಿಜವಾದ ಉಪವಾಸವಾಗಬೇಕು ಎಂದು ಶ್ರೀ ಉತ್ತರಾದಿ ಮಠದ ವ್ಯವಸ್ಥಾಪಕರಾದ ಪಂಡಿತ್ ಅನಿರುದ್ಧಾಚಾರ್ಯ ಪಾಂಡುರಂಗಿ ಹೇಳಿದರು. ಇಲ್ಲಿನ ಶ್ರೀ ಉತ್ತರಾದಿ ಮಠದಲ್ಲಿ ಶಿವರಾತ್ರಿ ಅಂಗವಾಗಿ ನಡೆದ ಸಾಮೂಹಿಕ ರುದ್ರಭಿಷೇಕ, ರುದ್ರ ನಮಕ, ಸಾಮೂಹಿಕ ಚಮಕ ಪಾರಾಯಣ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. ಭಗವಂತನ ನೆನಪಿನಲ್ಲಿಯೇ ಮಗ್ನರಾಗಿ ಅರಿವು ಪಡೆದು ಆನಂದ ಅನುಭವಿಸಬೇಕು. ಸುಜ್ಞಾನದ ಬೆಳಕಿನಲ್ಲಿ ಬದುಕು ಬೆಳಗಬೇಕು. ಆ ದಿಸೆಯಲ್ಲಿ ನಾವೆಲ್ಲರೂ ಕಾರ್ಯಪ್ರವೃತ್ತರಾಗಬೇಕು. ಪಾಪಗಳನ್ನು ಹರಣ ಮಾಡುವ ಪರಮಾತ್ಮ ಸಾರ್ವಕಾಲಿಕ, ಸರ್ವಶಕ್ತನಾಗಿದ್ದಾನೆ. ಅವನ ನೆನಪಿನಲ್ಲಿ ತಲ್ಲೀನರಾಗಬೇಕು. ಲೌಕಿಕ, ಅಲೌಕಿಕ ಜೀವನದಲ್ಲಿ ತಿಳಿದೋ, ತಿಳಿಯದೆ ಮಾಡುವ ತಪ್ಪುಗಳಿಂದ ಕಾಡುವ ಪಾಪಪ್ರಜ್ಞೆಯಿಂದ ಪಾರಾಗಲು ಎಲ್ಲರೂ ಮುಂದಾಗಬೇಕು ಎಂದು ಸಲಹೆ ನೀಡಿದರು.

ಮೈಸೂರು ನಗರ ಮತ್ತು ಜಿಲ್ಲಾ ಬ್ರಾಹ್ಮಣ ಸಂಘದ ಅಧ್ಯಕ್ಷ ಡಿ.ಟಿ.ಪ್ರಕಾಶ್, ಸಮಾಜ ಸೇವಕರಾದ ಕೆ.ರಘುರಾಮ ವಾಜಪೇಯಿ, ಕಾಂಗ್ರೆಸ್ ಮುಖಂಡರಾದ ಎನ್.ಎಂ.ನವೀನ್‌ಕುಮಾರ್, ನಗರಪಾಲಿಕೆ ಸದಸ್ಯರಾದ ಪ್ರಮೀಳಾ ಭರತ್, ಶ್ರೀ ಗುರು ರಾಘವೇಂದ್ರ ಸೇವಾ ಟ್ರಸ್ಟ್ ಅಧ್ಯಕ್ಷರಾದ ಎಸ್.ಬಿ.ವಾಸುದೇವಮೂರ್ತಿ, ವಿದ್ವಾನ್ ವಿಜಯ ವಿಠಲಾಚಾರ್ಯ ಕಾಡ್ಲೂರು, ಹಾಗೂ ಇನ್ನಿತರರು ಭಾಗವಹಿಸಿದ್ದರು.

ಮಂಚೇಗೌಡನಕೊಪ್ಪಲು ಗ್ರಾಮದೇವತೆ ಶ್ರೀ ಹಿರಿಯಮ್ಮ, ಶ್ರೀ ಕುಂಬಳದೇವಿ ಅಮ್ಮನವರ ಜಾತ್ರಾ ಮಹೋತ್ಸವ

ಮೈಸೂರು, ಫೆ. 20–ಮೈಸೂರಿನ ಮಂಚೇಗೌಡನಕೊಪ್ಪಲು ಗ್ರಾಮ ದೇವತೆಯರಾದ



ಶ್ರೀ ಹಿರಿಯಮ್ಮ, ಶ್ರೀ ಕುಂಬಳದೇವಿ ಅಮ್ಮನವರ 12ನೇ ಜಾತ್ರಾ ಮಹೋತ್ಸವ ಫೆ. 23ರ ಗುರುವಾರ ನೆರವೇರಲಿದೆ. ಅಂದು ಸಂಜೆ 4 ಗಂಟೆಗೆ ಚೌಟ್ರಿ ಸರ್ಕಲ್ ಅರಿಲಮ್ಮನವ ದೇವಸ್ಥಾನದ ಕೊಳದಿಂದ ಮಂಚೇಗೌಡನಕೊಪ್ಪಲಿನ ಕುಂಬಳ ದೇವಮ್ಮ ದೇವಸ್ಥಾನದವರೆಗೆ ಶ್ರೀ ಹಿರಿಯಮ್ಮ, ಶ್ರೀ ಕುಂಬಳದೇವಿ ಅಮ್ಮನವರು, ಮಂಟೇಸ್ವಾಮಿ ಬಸಪ್ಪನವರು ಹಾಗೂ ಬೇವನಹಳ್ಳಿ ಸಿದ್ದಪ್ಪಾಜಿ ಬಸಪ್ಪನವರ ಮೆರವಣಿಗೆ ಏರ್ಪಡಿಸಲಾಗಿದೆ. ಫೆ. 24 ರಂದು ಮಧ್ಯಾಹ್ನ 12 ಗಂಟೆಗೆ ಕುಂಬಳದೇವಮ್ಮ ದೇವಸ್ಥಾನದ ಹತ್ತಿರವಿರುವ ಭೂಪೇಗೌಡರ ಛತ್ರದಲ್ಲಿ ಅನ್ನಸಂತರ್ಪಣೆ ಏರ್ಪಡಿಸಲಾಗಿದೆ. ಈ ಉತ್ಸವದಲ್ಲಿ ಭಕ್ತಾದಿಗಳು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಳ್ಳಬೇಕೆಂದು ದಿವಂಗತ ಕೆಂಪೇಗೌಡರ ಗುಡ್ಡಪ್ಪನವರ ಮಗ ಪೈ. ನಾರಾಯಣ ಗುಡ್ಡಪ್ಪನವರು ಕೋರಿದ್ದಾರೆ.

'ಟಿಪ್ಪು ನಿಜಕನಸುಗಳು' 50ನೇ ಪ್ರದರ್ಶನದತ್ತ

ಯಶಸ್ವಿಯಾಗಿ ಪ್ರದರ್ಶನಗೊಳ್ಳುತ್ತಿರುವ ನಾಟಕ




ಮೈಸೂರು, ಫೆ.20(ಎಂಕೆ)– ರಂಗಾಯಣ ನಿರ್ದೇಶಕ ಅಡ್ಡಂಡ ಸಿ.ಕಾರ್ಯಪ್ಪ ನಿರ್ದೇಶನ 'ಟಿಪ್ಪು ನಿಜಕನಸುಗಳು' ನಾಟಕ ಪ್ರದರ್ಶನದ 3ನೇ ಹಂತದ ಪ್ರವಾಸ ಕೈಗೊಳ್ಳಲಾಗಿದ್ದು, ನಾಟಕವೂ 50ನೇ ಪ್ರದರ್ಶನದತ್ತ ಸಾಗುತ್ತಿದೆ.

ಮೊದಲ ಪ್ರದರ್ಶನದಿಂದಲೂ ಭಾರೀ ಚರ್ಚೆ, ವಿವಾದಗಳಿಗೆ ಕಾರಣವಾಗಿದ್ದ 'ಟಿಪ್ಪು ನಿಜಕನಸುಗಳು' ನಾಟಕ ಪ್ರದರ್ಶನ ಯಾವುದೇ ವಿಘ್ನಗಳಿಲ್ಲದೆ ರಾಜ್ಯದೆಲ್ಲೆಡೆ 2ನೇ ಹಂತದ ಪ್ರವಾಸ ಮುಗಿಸಿದ್ದು, ಈಗ 3ನೇ ಹಂತದ ಪ್ರವಾಸಕ್ಕೆ ಸಜ್ಜಾಗಿದೆ.

ಫೆ.23 ರಂದು ತೀರ್ಥಹಳ್ಳಿಯ ಶಾಂತವೇರಿ ಗೋಪಾಲಗೌಡ ರಂಗಮಂದಿರ, ಫೆ.25 ರಂದು ಕುಶಾಲನಗರದ ಕಲಾಭವನ, ಫೆ.27 ಮತ್ತು 28 ರಂದು ಚಿಕ್ಕಮಗಳೂರಿನ ಕುವೆಂಪು ರಂಗಮಂದಿರ, ಮಾ.2 ರಂದು ತುಮಕೂರಿನ ಗುಬ್ಬಿವೀರಣ್ಣ ರಂಗಮಂದಿರ, ಮಾ.7 ರಂದು ಕೋಲಾರದ ಟಿ.ಚನ್ನಯ್ಯ ರಂಗಮಂದಿರ, ಮಾ.9 ರಂದು ಚಾಮರಾಜನಗರದ ಡಾ.ರಾಜ್‌ಕುಮಾರ್ ರಂಗಭವನ ಹಾಗೂ ಮಾ.12 ರಂದು ಮತ್ತೆ ರಂಗಾಯಣದ ಭೂಮಿಗೀತ ವೇದಿಕೆಯಲ್ಲಿ 'ಟಿಪ್ಪು ನಿಜಕನಸುಗಳು' ನಾಟಕ ಪ್ರದರ್ಶನಗೊಳ್ಳಲಿದೆ.

ಶ್ರೀರಂಗಪಟ್ಟಣದಲ್ಲಿ ಪ್ರದರ್ಶನ: 3ನೇ ಹಂತದ ಬಳಿಕ ಅಂದರೆ ಮಾ.12ರ ಬಳಿಕ ಶ್ರೀರಂಗಪಟ್ಟಣದಲ್ಲಿ 49ನೇ ನಾಟಕ ಪ್ರದರ್ಶನಕ್ಕೆ ಸ್ಥಳ ಗುರ್ತಿಸುವ ಕಾರ್ಯ ನಡೆಯುತ್ತಿದೆ. ಇದುವರೆಗೂ ನಡೆದಿರುವ ಎಲ್ಲಾ ಪ್ರದರ್ಶನಗಳು ಭರ್ತಿಯಾಗಿದ್ದು, ರಂಗ ಪ್ರೇಕ್ಷಕರ ಭಾರೀ ಬೆಂಬಲ ವ್ಯಕ್ತವಾಗಿದೆ ಎಂದು ರಂಗಾಯಣ ನಿರ್ದೇಶಕ ಅಡ್ಡಂಡ ಸಿ.ಕಾರ್ಯಪ್ಪ 'ಮೈಸೂರು ಮಿತ್ರ'ನಿಗೆ ತಿಳಿಸಿದರು.

> **ರಂಗಭೂಮಿಗೆ ಜಯ...**
> **'ಟಿಪ್ಪು ನಿಜಕನಸುಗಳು' ನಾಟಕದ 2ನೇ ಹಂತದ ಪ್ರದರ್ಶನದ ವೇಳೆಯೇ ಪುಸ್ತಕ ಮಾರಾಟ ಮಾಡದಂತೆ ನ್ಯಾಯಾಲಯದಲ್ಲಿ ಪ್ರಕರಣ ದಾಖಲಿಸಿದ್ದವರು ತಮ್ಮ ಕೇಸ್ ವಾಪಸ್ ತೆಗೆದುಕೊಂಡಿದ್ದಾರೆ. ಈ ಮೂಲಕ ನಮಗೆ ಪೂರ್ಣವಾದ ಜಯ ದೊರೆತಿದೆ. ಓಟ್ ಬ್ಯಾಂಕ್‌ಗಾಗಿ ಟಿಪ್ಪುವಿನ ಸುತ್ತ ಹೊದಿಸಿದ್ದ ಸುಳ್ಳು ಕವಚ ಕಳಚಿ ಬಿದ್ದಿದೆ. ಇದರಿಂದ ಎಲ್ಲರೂ ಮೌನಕ್ಕೆ ಜಾರಿದ್ದಾರೆ. ಕಲಬುರ್ಗಿಯ ಒಂದೇ ವೇದಿಕೆಯಲ್ಲಿ 300 ಮಂದಿ ಮಠಾಧೀಶರು ನಾಟಕ ವೀಕ್ಷಣೆ ಮಾಡಿದ್ದಾರೆ. ಒಟ್ಟಾರೆಯಾಗಿ ರಂಗಭೂಮಿಗೆ ಜಯ ಸಿಕ್ಕಂತಾಗಿದೆ**
>
> 
>
> –ಅಡ್ಡಂಡ ಸಿ.ಕಾರ್ಯಪ್ಪ, ರಂಗಾಯಣ ನಿರ್ದೇಶಕ

50ನೇ ಪ್ರದರ್ಶನ ಭೂಮಿಗೀತದಲ್ಲಿ: ಮಾ.19ರಂದು ರಂಗಾಯಣದ ಭೂಮಿಗೀತ ರಂಗಮಂದಿರದಲ್ಲಿ 'ಟಿಪ್ಪು ನಿಜಕನಸುಗಳು' ನಾಟಕದ 50ನೇ ಪ್ರದರ್ಶನ ನಡೆಯಲಿದೆ. ಅದಕ್ಕೂ ಮುನ್ನ ಅಂದರೆ ಮಾ.12 ಮತ್ತು 19ರ ನಡುವೆ ಶ್ರೀ ರಂಗಪಟ್ಟಣದಲ್ಲಿ 49ನೇ ಪ್ರದರ್ಶನವನ್ನು ಆಯೋಜಿಸಲಾಗುವುದು. 'ಟಿಪ್ಪು ನಿಜಕನಸುಗಳು' ನಾಟಕ ಪ್ರದರ್ಶನಗೊಂಡರೆ ಕೋಮುಗಲಬೆಗಳಾಗುತ್ತವೆ ಎಂದು ಸಾರಲಾಗಿತ್ತು. ಆದರೆ ಇದುವರೆಗೂ ಯಾವುದೇ ರೀತಿಯ ಸಣ್ಣ ವಿಘ್ನಗಳು ಬಂದಿಲ್ಲ. ರಾಜ್ಯದೆಲ್ಲೆಡೆ ಯಶಸ್ವಿ ಹಾಗೂ ಭರ್ತಿ ಪ್ರದರ್ಶನ ಕಂಡಿದೆ. ಎಲ್ಲಿಯೂ ಟಿಕೆಟ್‌ಗಳನ್ನು ಉಚಿತವಾಗಿ ನೀಡಿಲ್ಲ ಎಂದು ಹರ್ಷ ವ್ಯಕ್ತಪಡಿಸಿದರು.

ಶ್ರೀ ರಾಮಕೃಷ್ಣ ಪರಮಹಂಸರ 188ನೇ ಜಯಂತಿ ಪ್ರಯುಕ್ತ

ಇಂದಿನಿಂದ 26ರವರೆಗೆ ಆಧ್ಯಾತ್ಮಿಕ ಚಿಂತನ–ಮಂಥನ ಕಾರ್ಯಕ್ರಮ

ಫೆ.26ರಂದು ಶ್ರೀ ರಾಮಕೃಷ್ಣ ಪರಮಹಂಸರ ಜಾತ್ರಾ ಮಹೋತ್ಸವ



ಮೈಸೂರು,ಫೆ.20(ಪಿಎಂ)– ಮೈಸೂರಿನ ಶ್ರೀ ರಾಮಕೃಷ್ಣ ಆಶ್ರಮ, ಶ್ರೀ ರಾಮಕೃಷ್ಣ ಜಾತ್ರೋತ್ಸವ ಸಮಿತಿ ಹಾಗೂ ಶ್ರೀ ರಾಮಕೃಷ್ಣ ಸೇವಾ ಸಂಘದ ಸಂಯುಕ್ತಾಶ್ರಯದಲ್ಲಿ ಶ್ರೀ ರಾಮಕೃಷ್ಣ ಪರಮಹಂಸರ 188ನೇ ಜಯಂತಿ ಪ್ರಯುಕ್ತ ಫೆ.21ರಿಂದ 26ರವರೆಗೆ ಆಧ್ಯಾತ್ಮಿಕ ಚಿಂತನ–ಮಂಥನ ಕಾರ್ಯಕ್ರಮ ನಡೆಯಲಿದ್ದು, ಫೆ.26ರಂದು ಶ್ರೀ ರಾಮಕೃಷ್ಣ ಪರಮಹಂಸರ ಜಾತ್ರಾ ಮಹೋತ್ಸವ ಜರುಗಲಿದೆ ಎಂದು ವಿಧಾನ ಪರಿಷತ್ ಮಾಜಿ ಸದಸ್ಯರೂ ಆದ ಶ್ರೀ ರಾಮಕೃಷ್ಣ ಜಾತ್ರೋತ್ಸವ ಸಮಿತಿ ಕಾರ್ಯಾಧ್ಯಕ್ಷ ಡಿ.ಮಾದೇಗೌಡ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಮೈಸೂರಿನ ರಾಮಕೃಷ್ಣನಗರದ ಶ್ರೀ ರಾಮಕೃಷ್ಣ ಪರಮಹಂಸ ವೃತ್ತದಲ್ಲಿ ನಾಳೆಯಿಂದ ಫೆ.25ರವರೆಗೆ ಪ್ರತಿದಿನ ಸಂಜೆ 5ರಿಂದ ರಾತ್ರಿ 8ರವರೆಗೆ ಆಧ್ಯಾತ್ಮಿಕ ಚಿಂತನ–ಮಂಥನ ಕಾರ್ಯಕ್ರಮ ಜರುಗಲಿದೆ. ಫೆ.21ರಂದು ಸಂಜೆ 5ಕ್ಕೆ ಪದ್ಮಿನಿ ವಲ್ಲಭ ಭಜನಾ ತಂಡದಿಂದ ಭಜನಾ ಕಾರ್ಯಕ್ರಮ ನಡೆಯಲಿದ್ದು, ಸಂಜೆ 6ಕ್ಕೆ 'ವಿವೇಕಾನಂದರ ಸಾಹಿತ್ಯದಲ್ಲಿ ಆಧ್ಯಾತ್ಮ' ಕುರಿತು ಹಿರಿಯ ಸಾಹಿತಿ ಡಾ.ಸಿ.ಪಿ.ಕೃಷ್ಣಕುಮಾರ್ (ಸಿಪಿಕೆ) ಉಪನ್ಯಾಸ ನೀಡಲಿದ್ದಾರೆ. ಸಂಜೆ 7ಕ್ಕೆ ವಿವೇಕ ಜಾಗೃತಿ ಬಳಗದಿಂದ ಗಾಯನ ನಡೆಯಲಿದ್ದು, ವಿಧಾನ ಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ ಅಧ್ಯಕ್ಷತೆ ವಹಿಸಲಿದ್ದಾರೆ. ಕರ್ನಾಟಕ ಮೃಗಾಲಯ ಪ್ರಾಧಿಕಾರದ ಅಧ್ಯಕ್ಷ ಎಂ.ಶಿವಕುಮಾರ್ ಅತಿಥಿಯಾಗಿ ಭಾಗವಹಿಸಲಿದ್ದಾರೆ ಎಂದು ಹೇಳಿದರು.

ಅದೇ ರೀತಿಯಲ್ಲಿ ಫೆ.22ರಂದು ವೇದವ್ಯಾಸ ಭಜನಾ ಮಂಡಳಿಯಿಂದ ಭಜನೆ, ದೇವಯ್ಯ ಮತ್ತು ತಂಡದವರಿಂದ ಯೋಗ ಪ್ರದರ್ಶನ ನಡೆಯಲಿದ್ದು, 'ವಚನ ಸಾಹಿತ್ಯದಲ್ಲಿ ಆಧ್ಯಾತ್ಮ' ಕುರಿತು ಆಧ್ಯಾತ್ಮಿಕ ಚಿಂತಕ ಶಂಕರ ದೇವನೂರು ಪ್ರವಚನ ನೀಡಲಿದ್ದಾರೆ. ನಂತರ ರಾಜರಾಜೇಶ್ವರಿ ತಂಡದಿಂದ ಗಾಯನ ಕಾರ್ಯಕ್ರಮವಿದೆ. ವಿಧಾನ ಪರಿಷತ್ ಸದಸ್ಯ ಡಾ.ಡಿ. ತಿಮ್ಮಯ್ಯ ಅಧ್ಯಕ್ಷತೆ ವಹಿಸಲಿದ್ದು, ಮೈಸೂರು ಅರಗು ಮತ್ತು ಬಣ್ಣ ಕಾರ್ಖಾನೆ ಅಧ್ಯಕ್ಷ ರಘು ಆರ್.ಕೌಟಿಲ್ಯ ಅತಿಥಿಯಾಗಿ ಪಾಲ್ಗೊಳ್ಳಲಿದ್ದಾರೆ ಎಂದರು.

ಫೆ.23ರಂದು ಚಿತ್ಕಲ ಮಹಿಳಾ ಸಂಘದಿಂದ ಭಜನಾ ಕಾರ್ಯಕ್ರಮ ನಡೆಯಲಿದ್ದು, ಬಳಿಕ ಪತಂಜಲಿ ಯೋಗ ಶಿಕ್ಷಣ ಸಮಿತಿಯಿಂದ ಯೋಗಾಸನ ಪ್ರದರ್ಶನ ಜರುಗಲಿದೆ. ನಂತರ 'ಕುವೆಂಪು ಸಾಹಿತ್ಯದಲ್ಲಿ ದರ್ಶನ' ಕುರಿತು ಸಾಹಿತಿ ಪ್ರೊ.ಸಿ.ನಾಗಣ್ಣ ಉಪನ್ಯಾಸ ನೀಡಲಿದ್ದಾರೆ. ಬಳಿಕ ಶ್ರೀದೇವಿ ಮತ್ತು ತಂಡ, ಪ್ರಾಣೇಶ್ ಹುಲ್ಕೆರೆಕೊಪ್ಪಲು ಅವರಿಂದ ಗಾಯನ ಕಾರ್ಯಕ್ರಮ ನಡೆಯಲಿದೆ. ವಿಧಾನ ಪರಿಷತ್ ಸದಸ್ಯ ಮರಿತಿಬ್ಬೇಗೌಡ ಅಧ್ಯಕ್ಷತೆ ವಹಿಸಲಿದ್ದು, ಕರ್ನಾಟಕ ವಸ್ತು ಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಮಿರ್ಲೆ ಶ್ರೀನಿವಾಸಗೌಡ ಅತಿಥಿಯಾಗಿ ಭಾಗವಹಿಸಲಿದ್ದಾರೆ ಎಂದು ತಿಳಿಸಿದರು.

ಫೆ24ರಂದು ಮೀನಾಕ್ಷಿ ಮತ್ತು ತಂಡದಿಂದ ಭಜನಾ ಕಾರ್ಯಕ್ರಮ ನಡೆಯಲಿದ್ದು, ಬಳಿಕ 'ಆಧ್ಯಾತ್ಮಿಕ ಆರೋಗ್ಯ' ಕುರಿತು ಹೃದಯ ತಜ್ಞ ಡಾ.ಎಸ್.ಪಿ. ಯೋಗಣ್ಣ ಮಾತನಾಡಲಿದ್ದಾರೆ. ನಂತರ ಚಾಮುಂಡೇಶ್ವರಿ ಭಜನಾ ತಂಡ, ಸ್ನೇಹ ಭಜನಾ ಮಂಡಳಿಯಿಂದ ಗಾಯನ ಕಾರ್ಯಕ್ರಮ ನಡೆಯಲಿದೆ. ವಿಧಾನ ಪರಿಷತ್ ಸದಸ್ಯ ಎ.ಹೆಚ್.ವಿಶ್ವನಾಥ್ ಅಧ್ಯಕ್ಷತೆ ವಹಿಸಲಿದ್ದು, ಶಾಸಕ ಹರ್ಷವರ್ಧನ್ ಅತಿಥಿಯಾಗಿ ಪಾಲ್ಗೊಳ್ಳಲಿದ್ದಾರೆ ಎಂದರು.

ಡಾ.ಸಿ.ಎನ್.ಮಂಜುನಾಥ್‌ರಿಂದ ಉಪನ್ಯಾಸ: ಫೆ.25ರಂದು ಶ್ರೀಪ್ರಸನ್ನ ಗಣಪತಿ ಭಜನಾ ಮಂಡಳಿಯಿಂದ ಭಜನಾ ಕಾರ್ಯಕ್ರಮ ನಡೆಯಲಿದ್ದು, ಬಳಿಕ ಪತಂಜಲಿ ಯೋಗ ಶಿಕ್ಷಣ ಸಮಿತಿಯಿಂದ ಯೋಗ ಪ್ರದರ್ಶನ ಜರುಗಲಿದೆ. ನಂತರ 'ಜೀವನ ಶೈಲಿಯ ಕಾಯಿಲೆಗಳು' ಕುರಿತು ಖ್ಯಾತ ಹೃದ್ರೋಗ ತಜ್ಞರೂ ಆದ ಜಯದೇವ ಆಸ್ಪತ್ರೆ ನಿರ್ದೇಶಕ ಡಾ.ಸಿ.ಎನ್.ಮಂಜುನಾಥ್ ಮಾತನಾಡಲಿದ್ದಾರೆ. ಬಳಿಕ ರಂಜನಿ ಗಾನ ಕಲಾ ಶಾಲೆ, ಬಲಮುರಿ ವಿನಾಯಕ ಗಾನಲಹರಿ ತಂಡಗಳಿಂದ ಗಾಯನ ಕಾರ್ಯಕ್ರಮ ನಡೆಯಲಿದೆ. ವಿಧಾನ ಪರಿಷತ್ ಸದಸ್ಯ ಮಧು ಜಿ.ಮಾದೇಗೌಡ ಅಧ್ಯಕ್ಷತೆ ವಹಿಸಲಿದ್ದು, ವಿಧಾನ ಪರಿಷತ್ ಸದಸ್ಯ ಎ.ಹೆಚ್.ವಿಶ್ವನಾಥ್ ಅತಿಥಿಯಾಗಿ ಭಾಗವಹಿಸಲಿದ್ದಾರೆ ಎಂದು ತಿಳಿಸಿದರು.

ಸಮಿತಿ ಅಧ್ಯಕ್ಷ ಡಾ.ಎಸ್.ಪಿ.ಯೋಗಣ್ಣ ಮಾತನಾಡಿ, ಇದು ಆಧ್ಯಾತ್ಮಿಕ ಜಾತ್ರೆ. ರಾಮಕೃಷ್ಣಪರಮಹಂಸರು, ಸ್ವಾಮಿ ವಿವೇಕನಂದರ ವಿಚಾರಧಾರೆಗಳನ್ನು ಮೈಸೂರು ನಗರದ ಜನತೆಗೆ ತಲುಪಿಸುವುದು ಈ ಉತ್ಸವದ ಉದ್ದೇಶ. ಭವಿಷ್ಯದಲ್ಲಿ ಈ ಉತ್ಸವ ಆಧ್ಯಾತ್ಮಿಕ ದಸರಾವಾಗಿ ಬೆಳೆಯಬೇಕೆಂಬುದು ನಮ್ಮ ಆಶಯ ಎಂದರು.


ಫೆ.26ರಂದು ಜಾತ್ರೆ: ಫೆ.26ರಂದು ಸಂಜೆ 5ಕ್ಕೆ ಶ್ರೀರಾಮಕೃಷ್ಣ ಪರಮಹಂಸರ ವೃತ್ತದಲ್ಲಿ ಶ್ರೀ ರಾಮಕೃಷ್ಣ ಪರಮಹಂಸರ ಜಾತ್ರಾ ಮಹೋತ್ಸವ ಜರುಗಲಿದೆ. ವಿವೇಕಾನಂದ ವೃತ್ತದಿಂದ ವಿವೇಕಾನಂದ ರಥ, ಶಾರದಾದೇವಿನಗರದಿಂದ ಶಾರದಾದೇವಿ ರಥ, ರಾಮಕೃಷ್ಣನಗರದಿಂದ ರಾಮಕೃಷ್ಣ ಪರಮಹಂಸ ರಥ, ನಿವೇದಿತಾನಗರದಿಂದ ನಿವೇದಿತಾ ರಥಗಳು ಮೆರವಣಿಗೆ ಮೂಲಕ ರಾಮಕೃಷ್ಣ ಪರಮಹಂಸ ವೃತ್ತದಲ್ಲಿ ಸಮಾಗಮಗೊಳ್ಳಲಿವೆ. ಇದಕ್ಕೂ ಮುನ್ನ ಅಂದು ಸಂಜೆ 4ಕ್ಕೆ ರಾಮಕೃಷ್ಣ ವೃತ್ತದಲ್ಲಿ ಧಾರ್ಮಿಕ ಸಭೆ ಆಯೋಜಿಸಿದ್ದು, ಶ್ರೀ ರಾಮಕೃಷ್ಣ ಆಶ್ರಮದ ಅಧ್ಯಕ್ಷ ಸ್ವಾಮಿ ಮುಕ್ತಿದಾನಂದಜಿ ಮಹಾರಾಜ್ ಅಧ್ಯಕ್ಷತೆ ವಹಿಸಲಿದ್ದಾರೆ ಎಂದು ತಿಳಿಸಿದರು.

ಸುತ್ತೂರು ಮಠದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಆದಿಚುಂಚನಗಿರಿ ಮಠದ ಡಾ. ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ, ಮೈಸೂರು ಶಾಖಾ ಮಠದ ಶ್ರೀ ಸೋಮೇಶ್ವರನಾಥ ಸ್ವಾಮೀಜಿ, ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮದ ಕಿರಿಯ ಶ್ರೀಗಳಾದ ಶ್ರೀ ದತ್ತ ವಿಜಯಾನಂದ ತೀರ್ಥ ಸ್ವಾಮೀಜಿ, ತುಮಕೂರು ಶ್ರೀ ರಾಮಕೃಷ್ಣ ವಿವೇಕಾನಂದ ಆಶ್ರಮದ ಅಧ್ಯಕ್ಷ ಶ್ರೀ ಸ್ವಾಮಿ ವೀರೇಶಾನಂದ ಸರಸ್ವತಿ, ಅಮೃತಾನಂದಮಯಿ ಮಠದ ಶ್ರೀ ಆತ್ಮನಿರತಾಮೃತ ಚೈತನ್ಯ, ಮೈಸೂರಿನ ಅರೆಬಿಕ್ ಪ್ರಾಧ್ಯಾಪಕ ಮೌಲಾನಾ ಮುಫ್ತಿ ಸೈಯದ್ ತಾಜುದ್ದೀನ್ ಅವರು ಧಾರ್ಮಿಕ ಸಭೆಯಲ್ಲಿ ಪಾಲ್ಗೊಳ್ಳಲಿದ್ದು, ಮೇಯರ್ ಶಿವಕುಮಾರ್ ಸೇರಿದಂತೆ ಶಾಸಕರು, ಸಂಸದರು ಅತಿಥಿಗಳಾಗಿ ಭಾಗವಹಿಸಲಿದ್ದಾರೆ ಎಂದು ಹೇಳಿದರು. ಸಮಿತಿ ಕಾರ್ಯದರ್ಶಿ ಎಂ.ದೊರೆರಾಜ್, ಶ್ರೀ ರಾಮಕೃಷ್ಣ ಸೇವಾ ಸಂಘದ ಉಪಾಧ್ಯಕ್ಷ ಕೆ.ಕೆಂಪಲಿಂಗರಾಜು, ನಿವೃತ್ತ ಶಿಕ್ಷಕ ಪ್ರಕಾಶ್ ಗೋಷ್ಠಿಯಲ್ಲಿದ್ದರು.

> **ಸರ್ವಧರ್ಮ ಸಮನ್ವಯದ ಸಂದೇಶ ಸಾರುವ ಉದ್ದೇಶ**
>
> ಪ್ರತಿ ಮನೆ–ಮನಕ್ಕೂ ಶ್ರೀ ರಾಮಕೃಷ್ಣ ಪರಮಹಂಸರು, ಸ್ವಾಮಿ ವಿವೇಕಾನಂದರ ಸಾಹಿತ್ಯ–ತತ್ವಾದರ್ಶಗಳು ತಲುಪಿಸುವುದು ಈ ಜಾತ್ರಾ ಮಹೋತ್ಸವದ ಉದ್ದೇಶ. ಈ ನಮ್ಮ ಮಹನೀಯರು ಸರ್ವಧರ್ಮ ಸಮನ್ವಯತೆ ಬೋಧಿಸಿದ್ದು, ಮೈಸೂರು ನಗರವು ರಾಷ್ಟ್ರಕವಿ ಕುವೆಂಪು ವಾಣಿಯಂತೆ ಸರ್ವಧರ್ಮಗಳ ಶಾಂತಿಯ ತೋಟ ಆಗಬೇಕು. ಈ ನಿಟ್ಟಿನಲ್ಲಿ ದಸರಾದಷ್ಟೇ ವೈಭವಯುತ ಒಂದು ಪರಂಪರೆ ಹುಟ್ಟು ಹಾಕಲು 2018ರಲ್ಲಿ ಮೊಟ್ಟ ಮೊದಲಿಗೆ ಈ ಜಾತ್ರಾ ಮಹೋತ್ಸವ ನಡೆಸಲಾಯಿತು. 2019ರಲ್ಲಿ ಎರಡನೇ ಜಾತ್ರೆ ನಡೆಯಿತು. ಬಳಿಕ ಕೋವಿಡ್ ಕಾರಣಕ್ಕೆ ಮೂರು ವರ್ಷಗಳು ಜಾತ್ರೆ ನಡೆಸಲು ಸಾಧ್ಯವಾಗಲಿಲ್ಲ. ಇದೀಗ 2023ರಲ್ಲಿ 3ನೇ ಜಾತ್ರಾ ಮಹೋತ್ಸವ ನಡೆಸುತ್ತಿದ್ದೇವೆ.
>
> –ಡಿ.ಮಾದೇಗೌಡ

ಬನ್ನೂರು ರಾಜು 'ಬೆವರಿನ ಬೆಲೆ' ಕೃತಿಗೆ ರಾಜ್ಯ ಕಸಾಪ ದತ್ತಿ ಪ್ರಶಸ್ತಿ





ಮೈಸೂರು, ಫೆ. 20–ರಾಜ್ಯ ಕನ್ನಡ ಸಾಹಿತ್ಯ ಪರಿಷತ್ತು ಕೊಡಮಾಡುವ ಪ್ರಸ್ತುತ ಸಾಲಿನ 'ಶ್ರೀ ಸಾರಂಗಿ ವೆಂಕಟರಾಮಯ್ಯ ಶ್ರೀನಿವಾಸರಾವ್ ದತ್ತಿ ಪ್ರಶಸ್ತಿ' ಯು ಸಾಹಿತಿ ಹಾಗೂ ಪತ್ರಕರ್ತ ಬನ್ನೂರು ಕೆ.ರಾಜು ಅವರ 'ಬೆವರಿನ ಬೆಲೆ' ಮಕ್ಕಳ ಕಥಾ ಸಂಕಲನಕ್ಕೆ ಲಭಿಸಿದೆ ಎಂದು ಕನ್ನಡ ಸಾಹಿತ್ಯ ಪರಿಷತ್ತಿನ ರಾಜ್ಯಾಧ್ಯಕ್ಷ ನಾಡೋಜ ಡಾ.ಮಹೇಶ್ ಜೋಶಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಪ್ರಶಸ್ತಿ ಪ್ರದಾನ ಸಮಾರಂಭವು ಮಾರ್ಚ್12ರಂದು ಭಾನುವಾರ ಬೆಂಗಳೂರಿನ ಕೇಂದ್ರ ಕನ್ನಡ ಸಾಹಿತ್ಯ ಪರಿಷತ್ತಿನ ಆವರಣದಲ್ಲಿನ ಶ್ರೀಕೃಷ್ಣರಾಜ ಪರಿಷನ್ಮಂದಿರದಲ್ಲಿ ನಡೆಯಲಿದೆ. 'ಬೆವರಿನ ಬೆಲೆ' ಮಕ್ಕಳ ಕಥಾ ಸಂಕಲನವು ಮಕ್ಕಳು ಮಾತ್ರವಲ್ಲದೆ ಹಿರಿಯರೂ ಸೇರಿದಂತೆ ಪ್ರತಿಯೊಬ್ಬರ ಅರಿವಿನ ಪರಿಧಿಯನ್ನು ವಿಸ್ತಾರ ಗೊಳಿಸುವ ವಿಶಿಷ್ಟ ಕೃತಿಯಾಗಿದ್ದು ಭಾಷೆಯಿಂದ ಹಿಡಿದು ಕಥಾವಸ್ತುವಿನ ಆಯ್ಕೆಯ ತನಕ ಬಹು ವೈವಿಧ್ಯಮಯವಾಗಿದೆ.

ಬನ್ನೂರು ರಾಜು ಅವರು ಕಥೆ,ಕಾದಂಬರಿ,ಕಾವ್ಯ, ನಾಟಕ, ವಚನ, ವಿಮರ್ಶೆ, ಪ್ರಬಂಧ, ನುಡಿಚಿತ್ರ, ಅಂಕಣ ಬರಹ, ಮುಕ್ತಕ ಸಾಹಿತ್ಯ, ಸಂಪಾದನೆ, ಸಂಶೋಧನೆ ಸೇರಿದಂತೆ ಬಹುತೇಕ ಸಾಹಿತ್ಯದ ಎಲ್ಲಾ ಪ್ರಕಾರಗಳಲ್ಲೂ ಕೃಷಿ ಮಾಡಿದ್ದು ನೂರಕ್ಕೂ ಹೆಚ್ಚು ಕೃತಿಗಳನ್ನು ನಾಡಿಗೆ ನೀಡಿದ್ದಾರೆ. ಜೊತೆಗೆ ಆರು ಸಾವಿರಕ್ಕೂ ಹೆಚ್ಚು ಬಿಡಿ ಲೇಖನಗಳನ್ನು ಬರೆದಿದ್ದಾರೆ.

ಇವರ ಸಾಹಿತ್ಯ ಮತ್ತು ಸಾಮಾಜಿಕ ಸೇವೆಗೆ ಅಮೆರಿಕನ್ ಬಯಾಗ್ರಫಿಕಲ್ ಇನ್ಸ್ಟಿಟ್ಯೂಟ್ (ಎಬಿಐ – ಯು ಎಸ್‌ಎ) ನ 1999 ನೇ ಸಾಲಿನ ಮ್ಯಾನ್ ಆಫ್ ದಿ ಇಯರ್ ಅಂತಾ ರಾಷ್ಟ್ರೀಯ ಪ್ರಶಸ್ತಿ, 1992 ರಲ್ಲಿ ಕೇಂದ್ರ ಮಾನವ ಸಂಪನ್ಮೂಲ ಇಲಾಖೆಯ ಪ್ರಶಸ್ತಿ, 1994 ರಲ್ಲಿ ಕರ್ನಾಟಕ ಸರ್ಕಾರದ ಬಹುಭಾಷಾ ದಸರಾ ಕವಿ ಸಮ್ಮೇಳನದ ಆಹ್ವಾನಿತ ಕವಿಯ ವಿಶೇಷ ಪುರಸ್ಕಾರ ಸೇರಿದಂತೆ ಡಾ.ಕೆ.ಶಿವರಾಮ ಕಾರಂತ ಪ್ರಶಸ್ತಿ, ವಿಶ್ವ ಮಾನವ ಕುವೆಂಪು ಸಾಹಿತ್ಯ ಪ್ರಶಸ್ತಿ, ಗಾಂಧಿವಾದಿ ನಂಜುಂಡಯ್ಯ ಪ್ರಶಸ್ತಿ, ಶ್ರೀ ಬಸವೇಶ್ವರ ಸದ್ಭಾವನಾ ಪ್ರಶಸ್ತಿ, ಮುಳ್ಳೂರು ನಾಗರಾಜು ಕಾವ್ಯ ಪ್ರಶಸ್ತಿ, ಎಚ್ಚೆಸ್ಕೆ ಸಾಹಿತ್ಯ ಪ್ರಶಸ್ತಿ, ಮೈಸೂರು ಜಿಲ್ಲಾಡಳಿತದ ರಾಜ್ಯೋತ್ಸವ ಪ್ರಶಸ್ತಿ ಹೀಗೆ ಇವರಿಗೆ ಅನೇಕ ಪ್ರತಿಷ್ಠಿತ ಪ್ರಶಸ್ತಿ–ಪುರಸ್ಕಾರ, ಸನ್ಮಾನ–ಗೌರವಗಳು ಸಂದಿವೆ.

ರಂಗಭೂಮಿ ಕಲೆ ಉಳಿವಿಗೆ ಗ್ರಾಮೀಣ ಜನರು ಕಾರಣ: ಕೆ.ಮರೀಗೌಡ




ಮೈಸೂರು, ಫೆ.20–ಭಾರತದಲ್ಲಿ ರಂಗಭೂಮಿ ಕಲೆ ಉಳಿದಿರುವುದಕ್ಕೆ ಗ್ರಾಮೀಣ ಜನರು ಕಾರಣರಾಗಿದ್ದಾರೆ ಎಂದು ಜಿಲ್ಲಾ ಪಂಚಾಯಿತಿ ಮಾಜಿ ಅಧ್ಯಕ್ಷ ಕೆ. ಮರೀಗೌಡ ತಿಳಿಸಿದರು.

ಮೈಸೂರು ತಾಲೂಕು, ಹಳೆಕಾಮನಕೊಪ್ಪಲು ಗ್ರಾಮದ ಶ್ರೀ ಭಕ್ತ ಕನಕದಾಸ ಕೃಪಾಪೋಷಿತ ನಾಟಕ ಮಂಡಳಿಯ ವತಿಯಿಂದ ಶಿವರಾತ್ರಿ ಹಬ್ಬದ ಅಂಗವಾಗಿ ಕಾಂಗ್ರೆಸ್ ಮುಖಂಡ ಕರೀಗೌಡರ ಅಧ್ಯಕ್ಷತೆಯಲ್ಲಿ ನಡೆದ "ಶನಿಪ್ರಭಾವ" ನಾಟಕದ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದ ಅವರು, ರೈತರಿಗೆ ಸಂಕ್ರಾತಿ ಹಬ್ಬ ಆಚರಿಸಿದ ನಂತರ ಬೇಸಿಗೆಯಲ್ಲಿ ಯಾವುದೇ ಕೆಲಸಗಳಿರುವುದಿಲ್ಲ ಆ ಸಮಯದಲ್ಲಿ ಮನರಂಜನೆಗಾಗಿ ಪೌರಾಣಿಕ, ಸಾಮಾಜಿಕ ನಾಟಕಗಳನ್ನು ಕಲಿತು ನೆಂಟರನ್ನೆಲ್ಲಾ ಕರೆದು ಹಬ್ಬವನ್ನೇ ಆಚರಣೆ ಮಾಡಿದಂತೆ ನಾಟಕಗಳನ್ನು ಪ್ರದರ್ಶನ ಮಾಡಿ ಸಂಭ್ರಮಿಸುತ್ತಾರೆ ಇಂತಹ ಕಲಾವಿದರಿಂದಲೇ ಇಂದು ಭಾರತದಲ್ಲಿ ಕಲೆ ಸಂಸ್ಕೃತಿ, ಜಾನಪದ ಕಲೆಗಳು ಇನ್ನೂ ಜೀವಂತವಾಗಿವೆ. ಆದ್ದರಿಂದ ಸರ್ಕಾರ ರಂಗಭೂಮಿ ಕಲೆಯನ್ನು ಬೆಳೆಸುವುದರ ಜೊತೆಗೆ ಕಲಾವಿದರನ್ನು ಪ್ರೋತ್ಸಾಯಿಸಬೇಕು ಎಂದರು.

ಸಮಾರಂಭದಲ್ಲಿ ಮೈಮುಲ್ ಮಾಜಿ ಅಧ್ಯಕ್ಷ ಮಾವಿನಹಳ್ಳಿ ಸಿದ್ದೇಗೌಡ, ಜಿ.ಪಂ. ಮಾಜಿ ಸದಸ್ಯರಾದ ಬೀರಿಹುಂಡಿ ಬಸವಣ್ಣ, ಅರುಣ್‌ಕುಮಾರ್, ರಾಕೇಶ್ ಪಾಪಣ್ಣ, ನಾಗವಾಲ ಗ್ರಾ.ಪಂ. ಅಧ್ಯಕ್ಷ ನರೇಂದ್ರ, ಗ್ರಾ.ಪಂ. ಸದಸ್ಯರಾದ ಹಳೆಕಾಮನ ಕೊಪ್ಪಲು, ಕರೀಗೌಡ, ಮಟನ್‌ಬಸವೇಗೌಡ, ಸ್ವಾಮಿ, ಕರಕನಹಳ್ಳಿ ಮಂಜು, ರಮೇಶ್, ಸೆಂಟ್ರಿಂಗ್ ರವಿಕುಮಾರ್, ಭಾಗ್ಯರಮೇಶ್, ಇಲವಾಲ ಸುರೇಶ್, ಶಿವೇಗೌಡ, ಯಜಮಾನ ನಾಗರಾಜ್, ಬೈರೇಗೌಡ, ಶಿವಲಿಂಗೇಗೌಡ, ದೊಡ್ಡಸ್ವಾಮಿ, ವಕೀಲ ನಾಗೇಶ್, ಲಿಂಗದೇವರ ಕೊಪ್ಪಲು ಮಂಜು, ಜಗದೀಶ್, ಗಾಂಧಿಕುಮಾರ್, ದಳಪತಿ ಮಹಾದೇವ್, ಸೆಂಟ್ರಿಂಗ್ ಮಂಜು, ಯಜಮಾನ್ ಬೋರೇಗೌಡ, ಶಿವಕುಮಾರ್, ಸಾವಿತ್ರಿ ನಾಗರಾಜ್, ಸೀಗಳ್ಳಿ ನಾಗರಾಜು, ಟಿ. ರಾಜು ಹಾಜರಿದ್ದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

21.2.2023 ಮಂಗಳವಾರ, ಮಳೆ ನಕ್ಷತ್ರ: ಶತಭಿಷ, 19.02.2023ರಿಂದ 04.03.2023
ಶ್ರೀ ಶುಭಕೃತ ನಾಮ ಸಂವತ್ಸರ, ಉತ್ತರಾಯಣ, ಶಿಶಿರ ಋತು, ಮಾಘ ಮಾಸ, ಶುಕ್ಲ ಪಕ್ಷ,
ತಿಥಿ: ಪಾಡ್ಯ, ನಕ್ಷತ್ರ: ಶತಭಿಷ, ರಾಹುಕಾಲ: ಮಧ್ಯಾಹ್ನ 3 ರಿಂದ 4.30ರವರೆಗೆ

■ **ಮೈಸೂರು ವಿಶ್ವವಿದ್ಯಾನಿಲಯ ಲಲಿತ ಕಲಾ ಕಾಲೇಜು, ಶ್ರೀ ಗುಬ್ಬಿ ವೀರಣ್ಣ ಪೀಠ :** ಮೂರು ದಿನಗಳ ರಂಗ ಸಹೃದಯ ಕಾರ್ಯಾಗಾರ, ಉದ್ಘಾಟನೆ : ಮೈಸೂರು ವಿವಿ ಕುಲಸಚಿವರಾದ ಶ್ರೀಮತಿ ವಿ.ಆರ್. ಶೈಲಜಾ, ಮುಖ್ಯ ಅತಿಥಿಗಳು : ಪ್ರಾಧ್ಯಾಪಕ ಡಾ. ಕೃಷ್ಣಮೂರ್ತಿ ಚಂದರ್, ಉಪಸ್ಥಿತರು : ವಿವಿ ಲಲಿತ ಕಲಾ ಕಾಲೇಜು ಪ್ರಾಂಶುಪಾಲ ಪ್ರೊ. ಅನಿಟ ವಿಮ್ಲ ಬ್ರ್ಯಾಗ್ಸ್, ರಂಗಕರ್ಮಿ ಹೆಚ್.ಎಸ್. ಉಮೇಶ್, ಸ್ಥಳ: ಲಲಿತ ಕಲಾ ರಂಗ ಮಂದಿರ, ಮಾನಸಗಂಗೋತ್ರಿ, ಬೆಳಗ್ಗೆ 10.30ಕ್ಕೆ.

■ **ಅಭಿವೃದ್ಧಿ :** ಸಿಲ್ಕ್ ಇಂಡಿಯಾ–2023 ಪ್ರದರ್ಶನ ಮತ್ತು ಮಾರಾಟ, ಸ್ಥಳ: ಹೋಟೆಲ್ ಸದರನ್ ಸ್ಟಾರ್, ವಿನೋಬಾ ರಸ್ತೆ, ಬೆಳಗ್ಗೆ 10.30 ರಿಂದ.

■ **ಸಾರ್ವಜನಿಕ ಶಿಕ್ಷಣ ಇಲಾಖೆ (ಬೆಂಗಳೂರು), ಜಿಲ್ಲಾಡಳಿತ ಮತ್ತು ಜಿಲ್ಲಾ ಪಂಚಾಯಿತಿ (ಮೈಸೂರು), ಉಪನಿರ್ದೇಶಕರ ಕಚೇರಿ ಸಾರ್ವಜನಿಕ ಶಿಕ್ಷಣ ಇಲಾಖೆ (ಮೈಸೂರು) :** ರಾಜ್ಯ ಮಟ್ಟದ ಅಥ್ಲೆಟಿಕ್ಸ್ ಕ್ರೀಡಾಕೂಟ, ಸ್ಥಳ: ಚಾಮುಂಡಿ ವಿಹಾರ ಕ್ರೀಡಾಂಗಣ, ನಜರ್‌ಬಾದ್, ಬೆಳಗ್ಗೆಯಿಂದ.

■ **ಪ್ರಜಾಪಿತ ಬ್ರಹ್ಮಕುಮಾರಿ ಈಶ್ವರೀಯ ವಿಶ್ವವಿದ್ಯಾಲಯ :** ಹಿಮಾಚ್ಛಾದಿತ ಕೈಲಾಸ ಪರ್ವತದ ಮೇಲೆ 21 ಅಡಿ ಎತ್ತರದ ಅತ್ಯಾಕರ್ಷಕ ರುದ್ರಾಕ್ಷಿ ಶಿವಲಿಂಗ 3ಡಿ ಮಾದರಿಯಲ್ಲಿ, ಸ್ಥಳ: ಲಲಿತ ಮಹಲ್ ಅರಮನೆ ಮೈದಾನ, ಆಲನಹಳ್ಳಿ.

■ **ಶರಣ ಸಾಹಿತ್ಯ ಪರಿಷತ್ತು, ಮೈಸೂರು ನಗರ ಘಟಕ :** ವಿದ್ಯಾರ್ಥಿಗಳಿಂದ ವಚನ ವಾಚನ ಮತ್ತು ವ್ಯಾಖ್ಯಾನ, ಸಾನ್ನಿಧ್ಯ : ಶ್ರೀ ಚಿದಾನಂದ ಸ್ವಾಮೀಜಿ, ಉದ್ಘಾಟನೆ : ಡಾ. ಎಸ್.ಬಿ.ಎಂ. ಪ್ರಸನ್ನ, ವಚನ ಸಾಹಿತ್ಯ ಮಾತುಕತೆ ಕುರಿತು ಸಾಹಿತಿ ವಿ.ಮ. ಜಗದೀಶ್ ಅವರಿಂದ ಉಪನ್ಯಾಸ, ಬಹುಮಾನ ವಿತರಣೆ : ಶ್ರೀ ನಟರಾಜ ಪ್ರತಿಷ್ಠಾನ ಆಡಳಿತಾಧಿಕಾರಿ ಡಾ. ಎಸ್. ಶಿವರಾಜಪ್ಪ, ಅಧ್ಯಕ್ಷತೆ : ಪರಿಷತ್ ಅಧ್ಯಕ್ಷ ಮ.ಗು. ಸದಾನಂದಯ್ಯ, ಉಪಸ್ಥಿತರು : ಶ್ರೀಮತಿ ಸತ್ಯ ಸುಲೋಚನ, ಸ್ಥಳ: ಶ್ರೀ ನಟರಾಜ ಸಭಾ ಭವನ, ಶ್ರೀ ಹೊಸಮಠ, ಶಂಕರ ಮಠದ ರಸ್ತೆ, ಬೆಳಗ್ಗೆ 10.30ಕ್ಕೆ.

■ **ಡಾ. ರಾಜ್‌ಕುಮಾರ್ ಮ್ಯೂಸಿಕಲ್ ಗ್ರೂಪ್ :** ಗಾನ ಸರಸ್ವತಿ ವಾಣಿ ಜಯರಾಂ ಸ್ಮರಣಾರ್ಥ ನನ್ನ ನಮನ ಗೀತೋತ್ಸವ, ಸಾನ್ನಿಧ್ಯ : ಶ್ರೀ ಇಳೈ ಆಳ್ವಾರ್ ಸ್ವಾಮೀಜಿ, ಉಪಸ್ಥಿತರು : ಎಸ್.ಎ. ಶ್ರೀನಿವಾಸ್, ಲಕ್ಷ್ಮಿ ಗೋವಿಂದರಾಜ್, ಸಮಾಜ ಸೇವಕ ಡಾ. ಕೆ. ರಘುರಾಂ ವಾಜಪೇಯಿ, ರವಿಗೌಡ, ಡಾ. ವೈ.ಡಿ. ರಾಜಣ್ಣ, ಸ್ಥಳ: ನಾದಬ್ರಹ್ಮ ಸಂಗೀತ ಸಭಾ, ಸಂಜೆ 5.30ಕ್ಕೆ.

■ **ಶ್ರೀರಾಮಕೃಷ್ಣ ಆಶ್ರಮ, ಶ್ರೀ ರಾಮಕೃಷ್ಣ ಸೇವಾ ಸಂಘ, ಶ್ರೀ ರಾಮಕೃಷ್ಣ ಜಾತ್ರೋತ್ಸವ ಸಮಿತಿ :** ಆಧ್ಯಾತ್ಮಿಕ ಚಿಂತನ ಮಥನ ಕಾರ್ಯಕ್ರಮ, ಸಂಜೆ 5 ರಿಂದ ಪದ್ಮಿನಿ ವಲ್ಲಭ ಭಜನಾ ತಂಡದಿಂದ ಭಜನೆ, ಹಿರಿಯ ಸಾಹಿತಿ ಡಾ. ಸಿ.ಪಿ. ಕೃಷ್ಣಕುಮಾರ್ ಅವರಿಂದ ವಿವೇಕಾನಂದರ ಸಾಹಿತ್ಯದಲ್ಲಿ ಆಧ್ಯಾತ್ಮ ಕುರಿತು ಉಪನ್ಯಾಸ, ವಿವೇಕ ಜಾಗೃತಿ ಬಳಗದಿಂದ ಹಾಡುಗಾರಿಕೆ, ಅಧ್ಯಕ್ಷತೆ : ವಿಧಾನ ಪರಿಷತ್ ಸದಸ್ಯ ಸಿ.ಎನ್. ಮಂಜೇಗೌಡ, ಮುಖ್ಯ ಅತಿಥಿಗಳು : ಕರ್ನಾಟಕ ಮೃಗಾಲಯ ಪ್ರಾಧಿಕಾರ ಅಧ್ಯಕ್ಷ ಎಂ.ಶಿವಕುಮಾರ್, ಸ್ಥಳ: ರಾಮಕೃಷ್ಣ ಪರಮಹಂಸ ವೃತ್ತ, ರಾಮಕೃಷ್ಣನಗರ.

■ **ಶ್ರೀರಾಮಕೃಷ್ಣ ಆಶ್ರಮ:** ಭಗವಾನ್ ಶ್ರೀರಾಮಕೃಷ್ಣ ಪರಮಹಂಸರ 188ನೇ ಜನ್ಮ ದಿನೋತ್ಸವ, ಆಶ್ರಮದ ವಾರ್ಷಿಕೋತ್ಸವ, ಬೆಳಗ್ಗೆ 5.15ರಿಂದ ವೇದಮಂತ್ರಗಳ ಪಠಣ, 5.30ಕ್ಕೆ ಮಂಗಳಾರತಿ, ಭಜನೆ, 7.30ಕ್ಕೆ ವಿಶೇಷ ಪೂಜೆ, 8ಕ್ಕೆ ವಿಷ್ಣುಸಹಸ್ರನಾಮ ಪಾರಾಯಣ, 9ಕ್ಕೆ ಭಜನೆ, 10.30ಕ್ಕೆ ಗ್ರಂಥವಾಚನ, 10.45ಕ್ಕೆ ಮಹಾಮಂಗಳಾರತಿ, 11ಕ್ಕೆ ಹೋಮ, ಮಧ್ಯಾಹ್ನ 12ಕ್ಕೆ ಪ್ರಸಾದ ವಿನಿಯೋಗ, ಸಂಜೆ 4.30ಕ್ಕೆ ಶ್ರೀ ಶಾರದಾ ಸಂವಿತ್ ಭಜನಾ ಮಂಡಳಿಯವರಿಂದ ಭಜನೆ, ಸಂಜೆ 6ಕ್ಕೆ ಭಗವಾನ್ ಶ್ರೀರಾಮಕೃಷ್ಣರ ಜೀವನ ಮತ್ತು ಸಂದೇಶ ಕುರಿತು ಪ್ರವಚನ, ರಾ. 7ಕ್ಕೆ ಸಂಧ್ಯಾರತಿ, ವಿಶೇಷ ಭಜನೆ, ಸ್ಥಳ: ಶ್ರೀರಾಮಕೃಷ್ಣ ಆಶ್ರಮ, ಯಾದವಗಿರಿ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಶ್ರದ್ಧೆಯ ಶಿಲ್ಪ–ಮೈಸೂರು ಸುತ್ತಲಿನ ದೇಗುಲಗಳ ಪರಿಚಯ, ಪ್ರಸ್ತುತಿ–ಡಾ. ಟಿ.ಎಸ್. ಗೋಪಾಲ್, 6.40 ಅರಿವಿನ ಶಿಖರ– ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಕಾರ್ಯಕ್ರಮ ಸರಣಿ, ಗಾಯನ–ನಿತಿನ್ ರಾಜಾರಾಂ ಶಾಸ್ತ್ರಿ, ಸದಾಶಿವ ಪಾಟೀಲ್, ಎಂ.ಡಿ.ಸುಮತಿ ಮುರಾರಿ, ವ್ಯಾಖ್ಯಾನ–ಡಾ. ಪ್ರದೀಪ್ ಕುಮಾರ್ ಹೆಬ್ರಿ, 6.50 ರೈತರಿಗೆ ಸಲಹೆ, 7.15 ಕಾದಂಬರಿ ವಿಹಾರ–ದೂರ ಸರಿದರು ಕಾದಂಬರಿಯ ಪ್ರಸ್ತುತಿ – ಉಮೇಶ್.ಎಸ್., 8.45 ಕರೆಗೊಂದು ಗೀತೆ, 10.00 ಅವಧರಿಸು ಬಾ ಅಮರನಾರೇಯಣ– ಕಾರ್ಯಕ್ರಮ ಸರಣಿ, ಸಂಶೋಧನೆ, ಆಲೇಖ ಮತ್ತು ಸಂಗೀತ ನಿರ್ದೇಶನ– ಟಿ.ಎಸ್. ವಸಂತ ಮಾಧವಿ, ಪರಿಕಲ್ಪನೆ ಮತ್ತು ನಿರೂಪಣೆ–ಡಾ. ಎನ್. ರಘು, 10.30 ನಮ್ಮ ಆರೋಗ್ಯ–ಕ್ಯಾನ್ಸರ್ ಜಾಗೃತಿ ಪ್ರಾಯೋಜಿತ ಕಾರ್ಯಕ್ರಮ, ಪ್ರಾಯೋಜಕರು– ಪ್ರಣವ ಹೆಲ್ತ್ ಕೇರ್, ಕುವೆಂಪುನಗರ, ಮೈಸೂರು, ವಿಷಯ– ಕ್ಯಾನ್ಸರ್ ಲಕ್ಷಣಗಳು ಮತ್ತು ಚಿಕಿತ್ಸೆ, ಭಾಗವಹಿಸುವ ತಜ್ಞರು– ಎಂ.ಎಸ್. ಗಿರೀಶ್

ಮಧ್ಯಾಹ್ನ: 12.30 ದೇವರನಾಮ–ಪಿ.ರಮಾ, 12.45 ರಂಗಶಿಕ್ಷಣ ಜೀವನ ಶಿಕ್ಷಣವೇ– ಮಾತನಾಡುತ್ತಾರೆ ನಾಗೇಶ್ ವಿ. ಬೆಟ್ ಕೋಟೆ, 1.20 ಭಾವಗೀತೆಗಳು–ಹೆಚ್.ಎ. ನಳಿನಿ, 3.00 ಆರ್.ಕೆ. ಪದ್ಮನಾಭ – ವೀಣಾವಾದನ, 4.00 ಕಥಾ ಕಾಲಕ್ಷೇಪ "ಶಿವರಾತ್ರಿ ಮಹಾತ್ಮೆ", ಪ್ರಸ್ತುತಿ–ಭದ್ರಗಿರಿ ಅಚ್ಯುತದಾಸರು, 6.50 ಕೃಷಿರಂಗ–ಕಿಸಾನ್‌ವಾಣಿ, 9.15 ಯಕ್ಷಗಾನದ ಹಾಡುಗಳು–ಶ್ರೀ ಕೃಷ್ಣ ಸಂಧಾನ ಪ್ರಸಂಗದ ಹಾಡು– ಚಂದ್ರಕಾಂತರಾವ್, 9.30 ಎಸ್. ಕಲ್ಯಾಣರಾಮನ್–ಹಾಡುಗಾರಿಕೆ, 10.00 ಗಮಕ ವಾಚನ, ವಾಚನ–ವಸಂತಾ ವೆಂಕಟೇಶ್, ವ್ಯಾಖ್ಯಾನ– ಡಾ.ಎನ್.ಕೆ.ರಾಮಶೇಷನ್

ಇಂದಿನಿಂದ ಪದವಿ ಮೊದಲ ಸೆಮಿಸ್ಟರ್ ಪರೀಕ್ಷೆ ಆರಂಭ

ಪ್ರವೇಶ ಪತ್ರ ನೀಡಿಕೆಯಲ್ಲಿ ಗೊಂದಲ; ನೂರಾರು ವಿದ್ಯಾರ್ಥಿಗಳಲ್ಲಿ ಆತಂಕ





ಮೈಸೂರು, ಫೆ.20(ಎಂಕೆ)– ಪರೀಕ್ಷಾ ಪ್ರವೇಶ ಪತ್ರ ನೀಡುವುದರಲ್ಲಾಗಿರುವ ಗೊಂದಲಗಳಿಂದ ನೂರಾರು ಪದವೀಧರ ವಿದ್ಯಾರ್ಥಿಗಳ ಭವಿಷ್ಯಕ್ಕೆ ಕುತ್ತು ಬಂದಿದ್ದು, ನಾಳೆಯಿಂದ(ಫೆ.21) ನಡೆಯುವ ಪ್ರಥಮ ಸೆಮಿಸ್ಟರ್ ಪರೀಕ್ಷೆಗೆ ಅವಕಾಶ ಸಿಗುತ್ತೋ ಇಲ್ಲವೋ ಎಂಬ ಆತಂಕ ಎದುರಾಗಿದೆ...!

ಮೈಸೂರು ವಿವಿ ವ್ಯಾಪ್ತಿಯ ಸರ್ಕಾರಿ ಹಾಗೂ ಖಾಸಗಿ ಪ್ರಥಮ ದರ್ಜೆ ಕಾಲೇಜಿನ ಪ್ರಥಮ ವರ್ಷದ ವಿದ್ಯಾರ್ಥಿಗಳಿಗೆ ನಾಳೆಯಿಂದ ಮೊದಲ ಸೆಮಿಸ್ಟರ್ ಪರೀಕ್ಷೆ ಆರಂಭವಾಗಲಿದ್ದು, ಪರೀಕ್ಷಾ ಪ್ರವೇಶ ಪತ್ರ ಸಿಗದ ನೂರಾರು ವಿದ್ಯಾರ್ಥಿಗಳು ಆತಂಕಕ್ಕೆ ಸಿಲುಕಿದ್ದಾರೆ.

ಅದರಲ್ಲೂ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳ ಸಂಖ್ಯೆಯೇ ಹೆಚ್ಚಾಗಿದ್ದು, ಪರೀಕ್ಷಾ ಪ್ರವೇಶ ಪತ್ರಕ್ಕೆ ಆನ್‌ಲೈನ್ (ಯುನಿಫೈಡ್ ಯೂನಿವರ್ಸಿಟಿ ಕಾಲೇಜ್ ಮ್ಯಾನೇಜ್ಮೆಂಟ್ ಸಿಸ್ಟಮ್–UUCMS) ಮೂಲಕ ಅರ್ಜಿ ಸಲ್ಲಿಸಿದ್ದರೂ ಪ್ರವೇಶ ಪತ್ರ ದೊರಕದಿರುವುದು ವಿದ್ಯಾರ್ಥಿಗಳನ್ನು ಇಕ್ಕಟ್ಟಿಗೆ ಸಿಲುಕಿಸಿದಂತಾಗಿದೆ ಎಸ್‌ಸಿ–ಎಸ್‌ಟಿ ವಿದ್ಯಾರ್ಥಿಗಳಿಗೆ ಪರೀಕ್ಷಾ ಶುಲ್ಕದ ವಿನಾಯಿತಿ ಇದ್ದರೂ ಶುಲ್ಕ ಕಟ್ಟಿಲ್ಲ, ಸರಿಯಾಗಿ ಅರ್ಜಿ ಸಲ್ಲಿಸಿ ಅಪ್‌ಲೋಡ್ ಮಾಡಿಲ್ಲ, ಅರ್ಜಿ ಸಲ್ಲಿಕೆಯಲ್ಲಿ ತಡವಾಗಿದೆ, ಹಾಜರಾತಿ ಇಲ್ಲದಿದ್ದರೆ ಪ್ರವೇಶ ಪತ್ರ ದೊರೆಯುವುದಿಲ್ಲ ಎಂಬಿತ್ಯಾದಿ ಗೊಂದಲಗಳು ವಿದ್ಯಾರ್ಥಿಗಳನ್ನು ಹೈರಾಣಾಗಿಸಿ ದೆಯಲ್ಲದೆ ಪರೀಕ್ಷೆ ಅವಕಾಶ ಸಿಗುತ್ತೋ ಇಲ್ಲವೋ ಎಂಬುದು ಆಯಾ ಮೈಸೂರು ವಿವಿ ಕುಲಪತಿಗಳು, ಕುಲಸಚಿವರು(ಪರೀಕ್ಷಾಂಗ) ಹಾಗೂ ಕಾಲೇಜು ಪ್ರಾಂಶುಪಾಲರು ತೆಗೆದು ಕೊಳ್ಳುವ ನಿರ್ಧಾರದ ಮೇಲೆ ಕೇಂದ್ರಿತವಾಗಿದೆ.

ಕ್ರಾಫರ್ಡ್ ಭವನಕ್ಕೆ ಜಮಾಯಿಸಿದ ವಿದ್ಯಾರ್ಥಿಗಳು: ಪ್ರವೇಶ ಪತ್ರ ಸಿಗದ ವಿವಿಧ ಪ್ರಥಮ ದರ್ಜೆ ಕಾಲೇಜು ವಿದ್ಯಾರ್ಥಿಗಳು ಸೋಮವಾರ ಕ್ರಾಫರ್ಡ್ ಭವನಕ್ಕೆ ಜಮಾಯಿಸಿದರು. ಪರೀಕ್ಷೆ ಬರೆಯಲು ಹಾಗೂ ಪರೀಕ್ಷಾ ಶುಲ್ಕ ಕಟ್ಟಲು ಅವಕಾಶ ಮಾಡಿಕೊಡಬೇಕು ಎಂದು ಪ್ರಾಂಶುಪಾಲ ಸಹಿಂದೊಂದಿಗೆ ತಂದಿದ್ದ ಅರ್ಜಿಗೆ ಕುಲಸಚಿವರ ಅನುಮತಿ ಸಹಿಗಾಗಿ ಬೆಳಗ್ಗೆ 10 ರಿಂದ ರಾತ್ರಿ 8 ಗಂಟೆಯವರೆಗೂ ಕಾದು ಕುಳಿತರು ಯಾವುದೇ ಪ್ರಯೋಜನವಾಗದೆ ಆತಂಕದಲ್ಲೇ ವಾಪಸ್ಸಾದರು.

ಬೆಳಿಗ್ಗೆಯಿಂದ ಕಾದು ಕುಳಿತಿರುವ ವಿದ್ಯಾರ್ಥಿಗಳನ್ನು ಸೌಜನ್ಯಕ್ಕಾದರೂ ಭೇಟಿಯಾಗದ ಕುಲಸಚಿವರ(ಪರೀಕ್ಷಾಂಗ) ವಿರುದ್ಧ ಕೆಲ ವಿದ್ಯಾರ್ಥಿಗಳು ಅಸಮಾಧಾನ ವ್ಯಕ್ತಪಡಿಸಿದರು. ಇಲ್ಲಿರುವ ಅಧಿಕಾರಿಗಳು ಮೀಟಿಂಗ್‌ನಲ್ಲಿದ್ದಾರೆ ಎಂದು ಹೇಳುತ್ತಿದ್ದಾರೆಯೇ ಹೊರತು ಯಾವಾಗ ಬರುತ್ತಾರೆ ಎಂದು ಯಾರು ಹೇಳುತ್ತಿಲ್ಲ. ಪರೀಕ್ಷೆ ಬರೆಯದಿದ್ದರೆ ನಮ್ಮ ಸ್ಥಿತಿಯೇನು? ಹಲವು ವಿದ್ಯಾರ್ಥಿನಿಯರು ಗೋಳಾಡಿದರು.

ಕುಲಪತಿಗಳ ಭೇಟಿ: ಕುಲಸಚಿವರಿಗಾಗಿ ಕಾದು ಹೈರಾಣಾದ ವಿದ್ಯಾರ್ಥಿಗಳು, ಸಂಜೆ 7.30ರ ಸುಮಾರಿಗೆ ಹಂಗಾಮಿ ಕುಲಪತಿ ಪ್ರೊ.ಮುಜಾಫರ್ ಅಸ್ಸಾದಿ ಅವರನ್ನು ಭೇಟಿ ಮಾಡಿದರಾದರೂ ಯಾವುದೇ ಪ್ರಯೋಜನವಾಗಲಿಲ್ಲ. ಈ ವಿದ್ಯಾರ್ಥಿಗಳೊಂದಿಗೆ ಮಾತನಾಡಿದ ಕುಲಪತಿಗಳು, ಮೊದಲು ಪರೀಕ್ಷೆಗೆ ಹಾಜರಾಗಿ ಪರೀಕ್ಷೆ ಆರಂಭಕ್ಕೂ ಮುನ್ನ ಕಾಲೇಜು ಪ್ರಾಂಶುಪಾಲರೊಂದಿಗೆ ಚರ್ಚಿಸಿ ಸಮಸ್ಯೆ ಬಗೆಹರಿಸುವ ಪ್ರಯತ್ನ ಮಾಡಲಾಗುವುದು ಎಂದು ಭರವಸೆ ನೀಡಿದರು.

ಪ್ರಾಂಶುಪಾಲರೇ ವಿದ್ಯಾರ್ಥಿಗಳನ್ನು ದಾರಿತಪ್ಪಿಸುತ್ತಿದ್ದಾರೆ....

ಪರೀಕ್ಷಾ ಪ್ರವೇಶ ಪತ್ರದಲ್ಲಾಗಿರುವ ಸಮಸ್ಯೆ ಕುರಿತು ಕುಲಪತಿ ಪ್ರೊ.ಮುಜಾಫರ್ ಅಸ್ಸಾದಿ ಅವರೊಂದಿಗೆ ದೂರವಾಣಿ ಮೂಲಕ ಮಾತನಾಡಿದ ಕುಲಸಚಿವ(ಪರೀಕ್ಷಾಂಗ) ಜ್ಞಾನಪ್ರಕಾಶ್, ಪ್ರಾಂಶುಪಾಲರುಗಳೇ ಜವಾಬ್ದಾರಿ ತೆಗೆದುಕೊಂಡು ವಿದ್ಯಾರ್ಥಿಗಳ ಕೆಲಸ ಮಾಡಿಕೊಡಲು ರೆಡಿ ಇಲ್ಲ. ಯೂನಿವರ್ಸಿಟಿಗೆ ಹೋಗಿ, ರಿಜಿಸ್ಟರ್ ಭೇಟಿ ಮಾಡಿ ಎಂದು ಕಳುಹಿಸಿ, ವಿದ್ಯಾರ್ಥಿಗಳನ್ನು ದಾರಿತಪ್ಪಿಸುತ್ತಿದ್ದಾರೆ ಎಂದರು.

ವಿದ್ಯಾರ್ಥಿಗಳ ಲಾಗಿನ್ ಮೂಲಕವೇ ಪರೀಕ್ಷಾ ಪ್ರವೇಶ ಪತ್ರಕ್ಕೆ ಅರ್ಜಿ ಸಲ್ಲಿಸಿ, ಶುಲ್ಕ ಪಾವತಿಸಿದ ನಂತರ ಪ್ರಾಂಶುಪಾಲರು ಜನರೇಟ್ ಆದ ಪ್ರವೇಶ ಪತ್ರಗಳಿಗೆ ಸಹಿ ಮಾಡಿಸಲಷ್ಟೇ ಕ್ರಾಫರ್ಡ್ ಭವನಕ್ಕೆ ಬರಬೇಕು. ಈ ಕುರಿತು ಪ್ರಾಂಶುಪಾಲರಿಗೆ ಕಾರ್ಯಾಗಾರದ ಮೂಲಕ ತರಬೇತಿಯನ್ನೂ ನೀಡಲಾಗಿದೆ. ಇಷ್ಟಾದರೂ ವಿದ್ಯಾರ್ಥಿಗಳ ಸಮಸ್ಯೆಗಳಿಗೆ ಪ್ರಾಂಶುಪಾಲರು ಸ್ಪಂದಿಸದೆ ಸುಲಭದ ದಾರಿ ಹುಡುಕುತ್ತಿದ್ದಾರೆ ಎಂದು ದೂರಿದರು.

ಶುಲ್ಕ ಪಾವತಿಗೆ ಸಾಕಷ್ಟು ಅವಕಾಶ ನೀಡಲಾಗಿದೆ: ಪರೀಕ್ಷಾ ಶುಲ್ಕ ಪಾವತಿಸಲು ಫೆ.8 ಕಡೆಯ ದಿನವಾಗಿತ್ತು. ನಂತರ ಫೆ.12ರವರೆಗೆ ವಿಸ್ತರಿಸಿ ದಂಡ ಸಹಿತ ಶುಲ್ಕ ಪಾವತಿಗೆ ಅವಕಾಶ ನೀಡಲಾಗಿತ್ತು. ಅದಾಗ್ಯೂ ಶುಲ್ಕ ಕಟ್ಟಲು ತಡವಾಯಿತೆಂದು ಬಂದ ವಿದ್ಯಾರ್ಥಿಗಳಿಗೆ ಮಾನವೀಯತೆ ದೃಷ್ಟಿಯಿಂದ ಫೆ.20ರವರೆಗೂ ಅವಕಾಶ ಮಾಡಿಕೊಡಲಾಗಿದೆ. ಇಷ್ಟೆಲ್ಲಾ ಅವಕಾಶ ನೀಡಿದ್ದರೂ ಶುಲ್ಕ ಪಾವತಿಸದ ವಿದ್ಯಾರ್ಥಿಗಳು ಈಗ ಅವಕಾಶ ನೀಡಿ ಎಂದರೆ ಸಾಧ್ಯವೇ ಇಲ್ಲ. ಬ್ಯಾಂಕ್‌ನಲ್ಲಿಯೂ ಶುಲ್ಕ ಪಾವತಿ ನಿಲ್ಲಿಸಲಾಗಿದೆ. ಅಲ್ಲದೆ ಶೇ.75 ರಷ್ಟು ಹಾಜರಾತಿ ಇಲ್ಲದ ವಿದ್ಯಾರ್ಥಿಗಳಿಗೆ ಪ್ರವೇಶ ಪತ್ರ ನೀಡಲಾಗುವುದಿಲ್ಲ ಎಂದರಲ್ಲದೆ ಅರ್ಜಿಸಲ್ಲಿಸಿಯೂ ಪ್ರವೇಶ ಪತ್ರ ಸಿಗದ ಪರಿಶಿಷ್ಟ ಜಾತಿ ಮತ್ತು ಪಂಗಡ ವಿದ್ಯಾರ್ಥಿಗಳಿಗೆ ಪ್ರಾಂಶುಪಾಲರು ತಮ್ಮ ಲಾಗಿನ್ ಮೂಲಕ ಪ್ರವೇಶ ಪತ್ರ ನೀಡಲು ಸಾಧ್ಯವಿದೆ. ಆದರೆ ಅರ್ಜಿ ಸಲ್ಲಿಸದೆ, ಶುಲ್ಕ ಪಾವತಿಸದೆ ಇರುವ ವಿದ್ಯಾರ್ಥಿಗಳಿಗೆ ಪರೀಕ್ಷೆ ಬರೆಯಲು ಅವಕಾಶ ನೀಡಲಾಗುವುದಿಲ್ಲ ಎಂದು ವಿವರಿಸಿದರು.

ಚಲಿಸುತ್ತಿದ್ದ ಲಾರಿಗೆ ಕಾರು ಡಿಕ್ಕಿ: ಪತ್ರಿಕಾ ವಿತರಕ ಸೇರಿ ಇಬ್ಬರ ಸಾವು





ಮಂಡ್ಯ, ಫೆ.20– ಚಲಿಸುತ್ತಿದ್ದ ಲಾರಿಗೆ ಕಾರು ಹಿಂಬದಿಯಿಂದ ಡಿಕ್ಕಿ ಹೊಡೆದ ಪರಿಣಾಮ ಇಬ್ಬರು ಯುವಕರು ಸಾವನ್ನಪ್ಪಿ, ಮೂವರು ಗಂಭೀರವಾಗಿ ಗಾಯಗೊಂಡಿರುವ ಘಟನೆ ಮದ್ದೂರು ತಾಲೂಕಿನ ಗೆಜ್ಜಲಗೆರೆ ಬಳಿ ಸೋಮವಾರ ಮುಂಜಾನೆ ಸಂಭವಿಸಿದೆ.

ಘಟನೆಯಲ್ಲಿ ಮಂಡ್ಯ ನಗರದ ಗುತ್ತಲು ಬಡಾವಣೆ ಪತ್ರಿಕಾ ವಿತರಕ ಸದ್ದಾಂ ಷರೀಫ್ (23), ಕಾರು ಚಾಲಕ ಶಕೀಬ್ (25) ಮೃತಪಟ್ಟರೆ, ಕಾರಿನಲ್ಲಿದ್ದ ನಸೀರಾ (24), ನಿಖತ್ (20) ಹಾಗೂ ಜಹೀಬ್ (36) ಗಂಭೀರವಾಗಿ ಗಾಯಗೊಂಡಿದ್ದಾರೆ.

ವಿವರ: ಸದ್ದಾಂ ಷರೀಫ್ ಹಾಗೂ ಇತರರು ಸಂಬಂಧಿಕರ ಔತಣ ಕೂಟಕ್ಕೆಂದು ಬೆಂಗಳೂರಿಗೆ ಹೋಗಿ ಕಾರಿನಲ್ಲಿ ಮಂಡ್ಯಕ್ಕೆ ವಾಪಸ್ಸಾಗುತ್ತಿದ್ದ ವೇಳೆ ಗೆಜ್ಜಲಗೆರೆ ಬಳಿ ಚಾಲಕನ ನಿಯಂತ್ರಣ ತಪ್ಪಿದ ಕಾರು ಮುಂದೆ ಚಲಿಸುತ್ತಿದ್ದ ಲಾರಿಗೆ ವೇಗವಾಗಿ ಹಿಂಬದಿಯಿಂದ ಡಿಕ್ಕಿ ಹೊಡೆದಿದೆ. ಪರಿಣಾಮ ತೀವ್ರ ಗಾಯಗೊಂಡ ಕಾರು ಚಾಲಕ ಶಕೀಬ್ ಹಾಗೂ ಸದ್ದಾಂನನ್ನು ಆಸ್ಪತ್ರೆಗೆ ಸಾಗಿಸುತ್ತಿದ್ದ ವೇಳೆ ಇವರಿಬ್ಬರು ಸಾವನ್ನಪ್ಪಿದ್ದಾರೆ. ಘಟನೆಯಲ್ಲಿ ತೀವ್ರವಾಗಿ ಗಾಯಗೊಂಡಿದ್ದ ಮೂವರಿಗೆ ಮಂಡ್ಯ ಮಿಮ್ಸ್ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ. ಈ ಸಂಬಂಧ ಮದ್ದೂರು ಸಂಚಾರಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಪತ್ರಿಕೆ ವಿತರಿಸಲು ತಡರಾತ್ರಿ ಹೊರಟಿದ್ದ ಸದ್ದಾಂ: ಮೃತ ಸದ್ದಾಂ ಷರೀಫ್ ತಂದೆ ಕಲೀಂ ಷರೀಫ್ ಮಂಡ್ಯದ ಗುತ್ತಲು ಬಡಾವಣೆಯಲ್ಲಿ ದಶಕಗಳಿಂದ ಪತ್ರಿಕಾ ವಿತರಕರಾಗಿ ಕಾರ್ಯ ನಿರ್ವಹಿಸುತ್ತಿದ್ದರು. 'ಮೈಸೂರು ಮಿತ್ರ' ಸೇರಿದಂತೆ ಹಲವರು ಪತ್ರಿಕೆಗಳ ವಿತರಕರಾಗಿದ್ದ ಕಲೀಂ, ಇತ್ತೀಚೆಗೆ ಅನಾರೋಗ್ಯಕ್ಕೀಡಾಗಿದ್ದರಿಂದ ಪತ್ರಿಕೆ ಹಂಚುವ ಜವಾಬ್ದಾರಿಯನ್ನು ಪುತ್ರ ಸದ್ದಾಂ ನೋಡಿಕೊಳ್ಳುತ್ತಿದ್ದ. ಮುಂಜಾನೆಯೇ ಪತ್ರಿಕೆಗಳನ್ನು ವಿತರಣೆ ಮಾಡುವ ಸಲುವಾಗಿಯೇ ಮಧ್ಯರಾತ್ರಿ ಬೆಂಗಳೂರಿನಿಂದ ಸದ್ದಾಂ ಮತ್ತು ಸಂಬಂಧಿಗಳು ಹೊರಟಿದ್ದರು. ಆದರೆ ಜವರಾಯನ ಅಟ್ಟಹಾಸಕ್ಕೆ ಇಬ್ಬರ ಪ್ರಾಣಪಕ್ಷಿ ಹಾರಿಹೋಗಿದೆ. ಮಗನ ಸಾವಿನ ದು:ಖದಲ್ಲೂ ಸದ್ದಾಂ ತಂದೆ ಕಲೀಂ ತಾವೇ 600ಕ್ಕೂ ಹೆಚ್ಚು ಪತ್ರಿಕೆಗಳನ್ನು ವಿತರಣೆ ಮಾಡಿ ತಮ್ಮ ವೃತ್ತಿಧರ್ಮ ಮೆರೆದಿದ್ದಾರೆ.

ಮಾ.4ರಂದು ಮೈಸೂರಲ್ಲಿ 'ಫಲಾನುಭವಿಗಳ ಸಮ್ಮೇಳನ': ಮುಖ್ಯಮಂತ್ರಿ ಬೊಮ್ಮಾಯಿ ಉದ್ಘಾಟನೆ



ಮೈಸೂರು, ಫೆ.20– ಸರ್ಕಾರದ ವಿವಿಧ ಯೋಜನೆ 'ಫಲಾನುಭವಿಗಳ ಸಮ್ಮೇಳನ' ರಾಜ್ಯದಲ್ಲೇ ಮೊದಲಿಗೆ ಮೈಸೂರಿನಲ್ಲಿ ಮಾರ್ಚ್ 4ರಂದು ನಡೆಯಲಿದ್ದು, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಉದ್ಘಾಟನೆ ನೆರವೇರಿಸಲಿದ್ದಾರೆ ಎಂದು ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ತಿಳಿಸಿದರು.

ಜಿಲ್ಲಾಡಳಿತ ಭವನದ ವಿಡಿಯೋ ಕಾನ್ಫರೆನ್ಸ್ ಹಾಲ್‌ನಲ್ಲಿ ಸೋಮವಾರ ಅಧಿಕಾರಿಗಳ ಸಭೆಯಲ್ಲಿ ಈ ವಿಷಯ ತಿಳಿಸಿ ಮಾತನಾಡಿದ ಅವರು, ಮಹಾರಾಜ ಕಾಲೇಜು ಮೈದಾನದಲ್ಲಿ ಆಯೋಜಿಸಲಾಗುವ 'ಫಲಾನುಭವಿಗಳ ಸಮ್ಮೇಳನ'ದಲ್ಲಿ ವಿವಿಧ ಯೋಜನೆಗಳ 25–30 ಸಾವಿರ ಫಲಾನುಭವಿಗಳು ಭಾಗವಹಿಸಲಿದ್ದಾರೆ. ಮುಖ್ಯಮಂತ್ರಿಗಳು ಸಮ್ಮೇಳನಕ್ಕೆ ಚಾಲನೆ ನೀಡಲಿದ್ದು, ಜಿಲ್ಲಾ ಉಸ್ತುವಾರಿ ಸಚಿವರು, ಶಾಸಕರು, ವಿಧಾನ ಪರಿಷತ್ ಸದಸ್ಯರು ಇನ್ನಿತರ ಜನಪ್ರತಿನಿಧಿಗಳು ಭಾಗವಹಿಸಲಿದ್ದಾರೆ ಎಂದರು.

ಕಾರ್ಯಕ್ರಮದಲ್ಲಿ ಗಣ್ಯರು ಹಲವು ಫಲಾನುಭವಿಗಳಿಗೆ ಸವಲತ್ತು ವಿತರಿಸಲಿದ್ದಾರೆ. ಹಾಗಾಗಿ ಜಿಲ್ಲಾ ಹಾಗೂ ತಾಲೂಕು ಮಟ್ಟದ ಅಧಿಕಾರಿಗಳು ತಮ್ಮ ಇಲಾಖೆಗೆ ಸಂಬಂಧಿಸಿದ ಯೋಜನೆಗಳ ಫಲಾನುಭವಿಗಳಿಗೆ ಸಮ್ಮೇಳನದ ಬಗ್ಗೆ ಮಾಹಿತಿ ನೀಡಬೇಕು. ವಿವಿಧ ಪಿಂಚಣಿ, ಗೃಹಭಾಗ್ಯ, ಸ್ತ್ರೀಶಕ್ತಿ ಸಂಘಗಳಿಗೆ ಸಹಾಯ, ಆಯುಷ್ಮಾನ್ ಕಾರ್ಡ್ ಪಡೆದವರು ಸೇರಿದಂತೆ ಇನ್ನಿತರ ಫಲಾನುಭವಿಗಳನ್ನು ಸಮ್ಮೇಳನಕ್ಕೆ ಕರೆತರಲು ಕ್ರಮ ವಹಿಸಬೇಕು. ಕಳೆದ 4 ವರ್ಷಗಳಿಂದ ಸರ್ಕಾರದ ವಿವಿಧ ಯೋಜನೆ ಹಾಗೂ ಕಾರ್ಯಕ್ರಮಗಳ ಪ್ರಯೋಜನ ಪಡೆದಿರುವವರ ಭಾವಚಿತ್ರ ಹಾಗೂ ಅನಿಸಿಕೆಯುಳ್ಳ ಫ್ಲೆಕ್ಸ್ ಅಳವಡಿಸಬೇಕು ಎಂದು ಸೂಚನೆ ನೀಡಿದರು.

ಸಭೆಯಲ್ಲಿ ಜಿಲ್ಲಾ ಪಂಚಾಯ್ತಿ ಸಿಇಓ ಕೆ.ಎಂ.ಗಾಯತ್ರಿ ಮೈಸೂರು ಮಹಾನಗರ ಪಾಲಿಕೆ ಆಯುಕ್ತ ಲಕ್ಷ್ಮಿಕಾಂತ ರೆಡ್ಡಿ ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು ಹಾಜರಿದ್ದರು.

ಕನ್ನಡ ಚಿತ್ರರಂಗದ ಹಿರಿಯ ನಿರ್ದೇಶಕ ಎಸ್.ಕೆ. ಭಗವಾನ್ ಇನ್ನಿಲ್ಲ



ಬೆಂಗಳೂರು: ಕನ್ನಡ ಚಿತ್ರರಂಗದ ಖ್ಯಾತ ಹಿರಿಯ ನಿರ್ದೇಶಕ ಭಗವಾನ್ ನಿಧನ ಹೊಂದಿದ್ದಾರೆ. ವಯೋಸಹಜ ಖಾಯಿಲೆಯಿಂದ ಬೆಂಗಳೂರಿನ ಖಾಸಗಿ ಆಸ್ಪತ್ರೆಗೆ ಚಿಕಿತ್ಸೆಗೆ ದಾಖಲಾಗಿದ್ದರು. ಚಿಕಿತ್ಸೆ ಫಲಕಾರಿಯಾಗದೆ ಇಂದು ಸೋಮವಾರ ಬೆಳಗ್ಗೆ ಇಹಲೋಕ ತ್ಯಜಿಸಿದ್ದಾರೆ. ಅವರಿಗೆ 90 ವರ್ಷ ವಯಸ್ಸಾಗಿತ್ತು.

ಡಾ ರಾಜ್ ಕುಮಾರ್ ಅವರ ಬಹುತೇಕ ಸಿನಿಮಾಗಳಿಗೆ ನಿರ್ದೇಶನ ಮಾಡಿ ಹಲವು ಹಿಟ್ ಚಿತ್ರಗಳನ್ನು ಕನ್ನಡ ಚಿತ್ರರಂಗಕ್ಕೆ ನೀಡಿದ್ದರು. ಮತ್ತೊಬ್ಬ ಖ್ಯಾತ ನಿರ್ದೇಶಕ ದೊರೈರಾಜ್ ಮತ್ತು ಭಗವಾನ್ ಜೋಡಿ ಚಿತ್ರರಂಗದಲ್ಲಿ ಸಾಕಷ್ಟು ಹೆಸರು ಗಳಿಸಿದ್ದರು.

ಇವರಿಬ್ಬರು ಒಟ್ಟಿಗೆ ಇಪ್ಪತ್ತೇಳು ಚಿತ್ರಗಳನ್ನು ನಿರ್ದೇಶಿಸಿದ್ದಾರೆ, ಅದರಲ್ಲಿ ಹೆಚ್ಚಿನವು ರಾಜಕುಮಾರ್ ನಟಿಸಿದ್ದಾರೆ ಮತ್ತು ಗಲ್ಲಾಪೆಟ್ಟಿಗೆಯಲ್ಲಿ ಹೆಚ್ಚು ಯಶಸ್ವಿಯಾದವು. ಅವುಗಳಲ್ಲಿ ಹದಿನಾಲ್ಕು ಕನ್ನಡ ಕಾದಂಬರಿಗಳನ್ನು ಆಧರಿಸಿದ್ದವು. 70–80ರ ದಶಕದಲ್ಲಿ ಕನ್ನಡ ಚಿತ್ರರಂಗ ಪ್ರಜ್ವಲಿಸಿದ್ದು, ಖ್ಯಾತ ದೊರೈ–ಭಗವಾನ್ ನಿರ್ದೇಶನ ಒಂದು ದೊಡ್ಡ ಕಾರಣ. ಎಸ್.ಕೆ. ಭಗವಾನ್ ಅವರು 5 ಜುಲೈ 1933 ರಂದು ಜನಿಸಿದ್ದರು. ಅವರು ತಮ್ಮ ಶಾಲಾ ಶಿಕ್ಷಣವನ್ನು ಬೆಂಗಳೂರು ಪ್ರೌಢಶಾಲೆಯಲ್ಲಿ ಪೂರ್ಣಗೊಳಿಸಿದರು. ಚಿಕ್ಕವಯಸ್ಸಿನಲ್ಲಿ ಹಿರಣ್ಣಯ್ಯ ಮಿತ್ರ ಮಂಡಳಿಯವರೊಂದಿಗೆ ರಂಗ ನಾಟಕಗಳಲ್ಲಿ ಅಭಿನಯಿಸುತ್ತಿದ್ದರು. ಅವರು 1956ರಲ್ಲಿ ಭಾಗ್ಯೋದಯ ಚಿತ್ರದ ಮೂಲಕ ಕಣಗಾಲ್ ಪ್ರಭಾಕರ ಶಾಸ್ತ್ರಿ ಅವರ ಸಹಾಯಕರಾಗಿ ತಮ್ಮ ಚಲನಚಿತ್ರ ಜೀವನವನ್ನು ಪ್ರಾರಂಭಿಸಿದರು.

ನಂತರ ಅವರು ತಮ್ಮ ಚೊಚ್ಚಲ ಚಿತ್ರ ಸಂಧ್ಯಾರಾಗವನ್ನು 1966ರಲ್ಲಿ ನಿರ್ದೇಶಿಸಿದರು ಆದರೆ ಅಧಿಕೃತವಾಗಿ ಅದರ ನಿರ್ದೇಶನವನ್ನು ಎ.ಸಿ.ನರಸಿಂಹ ಮೂರ್ತಿ ಅವರಿಗೆ ಸಲ್ಲುತ್ತದೆ. ಮುಂದಿನ ವರ್ಷ, ಅವರು ಎ.ಸಿ.ನರಸಿಂಹ ಮೂರ್ತಿಯ ವರೊಂದಿಗೆ ರಾಜದುರ್ಗದ ರಹಸ್ಯ (1967) ಚಿತ್ರದ ಸಹ ನಿರ್ದೇಶಕರಾಗಿ ಮನ್ನಣೆ ಪಡೆದರು. ದೊರೈ–ಭಗವಾನ್ ಎಂಬ ಹೆಸರಿನಲ್ಲಿ ದೊರೈ ರಾಜ್ ಜೊತೆಯಲ್ಲಿ ಅವರು ಜೇಡರ ಬಲೆ (1968) ಅನ್ನು ಸಹ–ನಿರ್ದೇಶಿಸಿದಾಗ ಅವರ ಅಧಿಕೃತ ನಿರ್ದೇಶನ ಪ್ರಾರಂಭವಾಯಿತು, ಕನ್ನಡದಲ್ಲಿ ಜೇಮ್ಸ್ ಬಾಂಡ್ ಶೈಲಿಯ ಚಲನಚಿತ್ರಗಳನ್ನು ಮಾಡಿದ ಮೊದಲ ನಿರ್ದೇಶಕ ಭಗವಾನ್.

ನಂತರ ಇವರಿಬ್ಬರು ಕಸ್ತೂರಿ ನಿವಾಸ, ಎರಡು ಕನಸು, ಬಯಲುದಾರಿ, ಗಾಳಿಮಾತು, ಚಂದನದ ಗೊಂಬೆ, ಹೊಸ ಬೆಳಕು, ಬೆಂಕಿಯ ಬಲೆ, ಜೀವನ ಚೈತ್ರ ಮತ್ತು ಗೋವಾದಲ್ಲಿ C.I.D 999, ಆಪರೇಷನ್ ಜಾಕ್‌ಪಾಟ್‌ನಂತಹ ಬಾಂಡ್ ಶೈಲಿಯ ಚಲನಚಿತ್ರಗಳನ್ನು ನಿರ್ದೇಶಿಸಿದರು.

ಗಣ್ಯರ ಸಂತಾಪ, ಅಂತಿಮ ದರ್ಶನಕ್ಕೆ ವ್ಯವಸ್ಥೆ: ಭಗವಾನ್ ನಿಧನಕ್ಕೆ ನಾಡಿನ ರಾಜಕೀಯ ನಾಯಕರು, ಗಣ್ಯರು, ಸಿನಿಪ್ರಿಯರು, ಕನ್ನಡ ಚಿತ್ರರಂಗದ ಕಲಾವಿದರು ಸಂತಾಪ ಸೂಚಿಸುತ್ತಿದ್ದಾರೆ. ಬೆಂಗಳೂರಿನ ಸಹಕಾರ ನಗರದಲ್ಲಿರುವ ಅವರ ನಿವಾಸದಿಂದ ಪಾರ್ಥಿವ ಶರೀರವನ್ನು ಮಧ್ಯಾಹ್ನ 12 ಗಂಟೆಗೆ ರವೀಂದ್ರ ಕಲಾಕ್ಷೇತ್ರಕ್ಕೆ ಕೊಂಡೊಯ್ದು ಸಂಜೆ 4 ಗಂಟೆಯವರೆಗೆ ಅಂತಿಮ ದರ್ಶನಕ್ಕೆ ಇಡಲಾಗುತ್ತದೆ. ಸಂಜೆ ಚಾಮರಾಜಪೇಟೆ ಚಿತಾಗಾರದಲ್ಲಿ ಅಂತ್ಯಕ್ರಿಯೆ ನೆರವೇರಲಿದೆ.

ಸಂತಾಪ: ಕನ್ನಡದ ಮೇರುಪ್ರತಿಭೆ ಎಸ್.ಕೆ. ಭಗವಾನ್ ಅವರ ನಿಧನಕ್ಕೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಮಾಜಿ ಸಿಎಂ ಸಿದ್ಧರಾಮಯ್ಯ, ನಟಿ, ಸಂಸದೆ ಸುಮಲತಾ ಅಂಬರೀಶ್ ಸೇರಿದಂತೆ ರಾಜಕೀಯ ಕ್ಷೇತ್ರದ ಅನೇಕ ಗಣ್ಯರು ಸಂತಾಪ ವ್ಯಕ್ತ ಪಡಿಸಿದ್ದಾರೆ. ಸಂತಾಪ ಸಂದೇಶಗಳನ್ನು ಅವರು ಸಾಮಾಜಿಕ ಜಾಲತಾಣದಲ್ಲಿ ಬರೆದುಕೊಂಡಿದ್ದಾರೆ.

ಭಗವಾನ್ ನೇತ್ರದಾನ

ಡಾ.ರಾಜ್‌ಕುಮಾರ್ ಅವರಂತೆಯೇ ಇಂದು ನಿಧನರಾದ ಹಿರಿಯ ನಿರ್ದೇಶಕ ಭಗವಾನ್ ತಮ್ಮ ಕಣ್ಣುಗಳನ್ನು ದಾನ ಮಾಡಿದ್ದಾರೆ. ಇದರಿಂದ ಮೂರ್ನಾಲ್ಕು ಜನರಿಗೆ ದೃಷ್ಟಿ ಬರಲಿದೆ. ರಾಜ್ ಕುಮಾರ್ ಅವರು ನೇತ್ರದಾನ ಮಾಡಲು ನೋಂದಣಿ ಮಾಡಿಸಿದ ಸಂದರ್ಭದಲ್ಲೇ ಎಸ್.ಕೆ. ಭಗವಾನ್ ಕೂಡ ತಮ್ಮ ಹೆಸರನ್ನು ನೋಂದಾಯಿಸಿದ್ದರು. ಅವರ ಮರಣಾ ನಂತರ ಕಣ್ಣಿನ ಕಾರ್ನಿಯಾವನ್ನು ತೆಗೆಯಲಾಗಿದೆ.

ತಾತ್ಸಾರ ತೋರುವ ಅಧಿಕಾರಿಗಳ ವಿರುದ್ಧ ಶಿಸ್ತು ಕ್ರಮ

● ಮೈಸೂರು ಜಿಲ್ಲಾಧಿಕಾರಿ ಡಾ.ರಾಜೇಂದ್ರ ಎಚ್ಚರಿಕೆ

● ಕೊಡಗಳ್ಳಿಯಲ್ಲಿ 'ಜಿಲ್ಲಾಧಿಕಾರಿಗಳ ನಡೆ ಹಳ್ಳಿ ಕಡೆ' ಕಾರ್ಯಕ್ರಮ



ಮೈಸೂರು, ಫೆ20– ಕರ್ತವ್ಯ ನಿರ್ವಹಣೆಯಲ್ಲಿ ತಾತ್ಸಾರ ತೋರುವ ಅಧಿಕಾರಿಗಳ ವಿರುದ್ಧ ನಿರ್ದಾಕ್ಷಿಣ್ಯ ಕ್ರಮ ವಹಿಸಲಾಗುವುದು ಎಂದು ಮೈಸೂರು ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ಎಚ್ಚರಿಸಿದ್ದಾರೆ.

ತಿ.ನರಸೀಪುರ ತಾಲೂಕಿನ ಕೊಡಗಳ್ಳಿ ಗ್ರಾಮದಲ್ಲಿ ನಡೆದ 'ಜಿಲ್ಲಾಧಿಕಾರಿಗಳ ನಡೆ ಹಳ್ಳಿ ಕಡೆ' ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಹಲವು ಇಲಾಖೆಗಳ ಅಧಿಕಾರಿಗಳು ಸಾರ್ವಜನಿಕರ ಕೆಲಸ ಮಾಡುವಲ್ಲಿ ತಾತ್ಸಾರ ಮನೋಭಾವ ತೋರುತ್ತಿರುವುದು ಗಮನಕ್ಕೆ ಬಂದಿದೆ. ಸಾರ್ವಜನಿಕ ಹಿತಾಸಕ್ತಿಗೆ ಅನುಗುಣವಾಗಿ ನಿಗದಿತ ಸಮಯದೊಳಗೆ ಕರ್ತವ್ಯ ನಿರ್ವಹಿಸದ ಅಧಿಕಾರಿಗಳ ಮೇಲೆ ಮುಲಾಜಿಲ್ಲದೆ ಶಿಸ್ತು ಕ್ರಮಕ್ಕೆ ಶಿಫಾರಸು ಮಾಡಲಾಗುವುದು ಎಂದು ಎಚ್ಚರಿಕೆ ನೀಡಿದರು.

ಗ್ರಾಮೀಣ ಪ್ರದೇಶದ ಸಮಸ್ಯೆಗಳನ್ನು ಅರಿತು ತುರ್ತು ಪರಿಹಾರ ಕ್ರಮ ಕೈಗೊಳ್ಳುವ ಉದ್ದೇಶದಿಂದ ಸರ್ಕಾರ 'ಜಿಲ್ಲಾಧಿಕಾರಿಗಳ ನಡೆ ಹಳ್ಳಿ ಕಡೆ' ಕಾರ್ಯಕ್ರಮ ಅನುಷ್ಠಾನಗೊಳಿಸಿದೆ. ಎಲ್ಲಾ ಇಲಾಖೆ ಅಧಿಕಾರಿಗಳೂ ಉಪಸ್ಥಿತರಿರುವ ಕಾರಣ ಶೇ.60–70 ಸಮಸ್ಯೆಗಳಿಗೆ ಸ್ಥಳದಲ್ಲೇ ಪರಿಹಾರ ಕಲ್ಪಿಸಬಹುದಾಗಿದೆ. ಜಟಿಲ ಸಮಸ್ಯೆಯಾಗಿದ್ದರೂ ಆ ಸಂಬಂಧ ಅಧಿಕಾರಿಗಳೊಂದಿಗೆ ಚರ್ಚೆ ನಡೆಸಿ ಸೂಕ್ತ ಕ್ರಮ ವಹಿಸಲಾಗುವುದು. ಆರ್‌ಟಿಸಿ ತಿದ್ದುಪಡಿ, ಸ್ಮಶಾನಕ್ಕೆ ಜಾಗ ನಿಗದಿ, ಪಿಂಚಣಿ ಸೌಲಭ್ಯ, ಅಂಗನವಾಡಿ ಕೇಂದ್ರ, ರಸ್ತೆ ನಿರ್ಮಾಣ, ಹೀಗೆ ಸಮುದಾಯಕ್ಕೆ ಸಂಬಂಧಿಸಿದ ಎಲ್ಲಾ ವಿಚಾರಗಳನ್ನೂ ಮುಕ್ತವಾಗಿ ಚರ್ಚಿಸಿ, ಪರಿಹಾರ ಕ್ರಮ ಕೈಗೊಳ್ಳಲು ಈ ಕಾರ್ಯಕ್ರಮ ಸಹಕಾರಿಯಾಗಿದೆ ಎಂದು ತಿಳಿಸಿದರು.

ಶಾಸಕ ಎಂ.ಅಶ್ವಿನ್ ಕುಮಾರ್ ಮಾತನಾಡಿ, 'ಜಿಲ್ಲಾಧಿಕಾರಿಗಳ ನಡೆ ಹಳ್ಳಿ ಕಡೆ' ಕಾರ್ಯಕ್ರಮದಿಂದ ಹೆಚ್ಚು ಅನುಕೂಲಗಳಿವೆ. ಈ ಸರ್ಕಾರಿ ಕಾರ್ಯಕ್ರಮದಲ್ಲಿ ವೈಯಕ್ತಿಕ ಪ್ರತಿಷ್ಠೆಯನ್ನು ಬಿಟ್ಟು ಎಲ್ಲರೂ ಭಾಗವಹಿಸಿ, ಸದುಪಯೋಗಪಡಿಸಿಕೊಳ್ಳಬೇಕು ಎಂದು ಜನರಿಗೆ ಸಲಹೆ ನೀಡಿದರು.

ಲೋಪವಾದರೆ ಕ್ರಮ: ಭತ್ತದ ಕಟಾವಿಗೆ ಯಂತ್ರೋಪಕರಣ ನೆರವು ನೀಡುವಂತೆ ಹಾಗೂ ಭತ್ತ ಖರೀದಿ ಕೇಂದ್ರ ತೆರೆಯುವಂತೆ ಕಾರ್ಯಕ್ರಮದಲ್ಲಿ ಜನ ಆಗ್ರಹಿಸಿದರು. ಜಲ ಜೀವನ್ ಮಿಷನ್ ಯೋಜನೆಯಡಿ ಸಮರ್ಪಕವಾಗಿ ಕಾಮಗಾರಿ ನಡೆಸುತ್ತಿಲ್ಲ ಎಂದು ಇದೇ ವೇಳೆ ಕೆಲವರು ದೂರಿದರು. ಇದಕ್ಕೆ ಪ್ರತಿಕ್ರಿಯಿಸಿದ ಜಿಲ್ಲಾಧಿಕಾರಿ ರಾಜೇಂದ್ರ, ಬೆಂಬಲ ಬೆಲೆ ಯೋಜನೆಯಡಿ ಭತ್ತ ಖರೀದಿಸುವ ಕೇಂದ್ರಗಳ ಕಾರ್ಯ ಚಟುವಟಿಕೆ ಮೇಲೆ ನಿಗಾ ವಹಿಸಲಾಗುವುದು. ಹಾಗೆಯೇ ಜಲ ಜೀವನ್ ಮಿಷನ್ ಯೋಜನೆ ಕಾಮಗಾರಿಗಳ ಪರಿಶೀಲನೆ ನಡೆಸಿ, ಲೋಪಗಳು ಕಂಡು ಬಂದರೆ ಖಂಡಿತ ಸಂಬಂಧಪಟ್ಟವರ ವಿರುದ್ಧ ಕ್ರಮ ಕೈಗೊಳ್ಳಲಾಗುವುದು ಎಂದು ಭರವಸೆ ನೀಡಿದರು.

ಇದೇ ವೇಳೆ ಸಾಮಾಜಿಕ ಭದ್ರತೆ ಯೋಜನೆಯಡಿ ಕಂದಾಯ ಇಲಾಖೆಯ ವತಿಯಿಂದ ಅರ್ಹ ಫಲಾನುಭವಿಗಳಿಗೆ ವಿವಿಧ ಸೌಲಭ್ಯಗಳ ಆದೇಶ ಪ್ರತಿಗಳನ್ನು ವಿತರಿಸಲಾಯಿತು. ಗ್ರಾ ಪಂ ಅಧ್ಯಕ್ಷ ಧನಂಜಯ ಪಾಪಣ್ಣ, ಉಪಾಧ್ಯಕ್ಷೆ ನಂದಿನಿ, ಉಪ ವಿಭಾಗಾಧಿಕಾರಿ ಕೆ.ಆರ್.ರಕ್ಷಿತ್, ಜಿಲ್ಲಾ ಪಂಚಾಯತ್ ಕಾರ್ಯ ನಿರ್ವಹಣಾಧಿಕಾರಿ ಕೆ.ಎಂ.ಗಾಯತ್ರಿ, ಜಿಪಂ ಮಾಜಿ ಸದಸ್ಯ ಜಯಪಾಲ್ ಭರಣಿ, ಭೂ ದಾಖಲೆಗಳ ಉಪ ನಿರ್ದೇಶಕಿ ಶ್ರೀಮಂತಿನಿ, ಜಿಲ್ಲಾ ಆರೋಗ್ಯಾಧಿಕಾರಿ ಡಾ.ಕೆ.ಹೆಚ್.ಪ್ರಸಾದ್ ಮತ್ತಿತರ ಅಧಿಕಾರಿಗಳು ಹಾಜರಿದ್ದರು.





ನಕ್ಕರೆ ಅದೇ ಸ್ವರ್ಗ

ವೈದ್ಯರು : ನನ್ನ ಕ್ಲಿನಿಕ್ ವೇಳೆ ಸಂಜೆ ನಾಲ್ಕರಿಂದ ಏಳು ಎಂದು ನಿಮಗೆ ತಿಳಿದಿಲ್ಲವೆ?

ರೋಗಿ : ಗೊತ್ತಿದೆ ಡಾಕ್ಟ್ರೇ, ಆದರೆ ನನ್ನನ್ನು ಕಚ್ಚಿದ ನಾಯಿಗೆ ಗೊತ್ತಿಲ್ವಲ್ಲ?!

ಮೈಸೂರು ಮಿತ್ರ
ಮಂಗಳವಾರ, 21 ಫೆಬ್ರವರಿ 2023
ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತವಾಹಿನಿ.........

'ಮುಗ್ಧತೆ' ಹಾಗೂ 'ಆತ್ಮವಿಶ್ವಾಸ' ಜೀವನದಲ್ಲಿ ಇರಬೇಕಾದ ಎರಡು ಅಂಶಗಳು. ಇವುಗಳಿಂದ ಜೀವನದಲ್ಲಿ ಯಶಸ್ಸು ನಿಶ್ಚಿತ.–ಮಾರ್ಕ್‌ಟ್ವೈನ್

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಪುಣ್ಯವಂತ ಮಾಡಿದ್ದೇ ಯಾಗ, ವೈದ್ಯ ಹೇಳಿದ್ದೇ ರೋಗ

ನಿಮ್ಮ ಪತ್ರಗಳು

ಇದು ಹೆಮ್ಮೆ ಪಡುವ ವಿಚಾರವೇ ಸ್ವಾಮಿ...!?

ಮಾನ್ಯರೆ,

50% ರಿಯಾಯಿತಿ ನೀಡಿದುದರಿಂದ ಸಂಚಾರ ನಿಯಮ ಉಲ್ಲಂಘಿಸಿರುವ ವಾಹನ ಸವಾರರು ಹಾಗೂ ಚಾಲಕರಿಂದ ಸಂಗ್ರಹವಾದ ದಂಡದ ಮೊತ್ತ ರೂ. 120 ಕೋಟಿ ಮೀರಿದೆ ಎಂದು ಪೊಲೀಸರು ಬೀಗಿದ್ದಾರೆ.

* ಇದು ಹೆಮ್ಮೆ ಪಡಬೇಕಾದ ವಿಷಯವೋ ಅಥವಾ ನಾಚಿಕೆಗೇಡೋ?
* 120 ಕೋಟಿ ರೂಪಾಯಿ ದಂಡ ವಸೂಲಾಗಿದೆಯೆಂದರೆ ಅದರ ದುಪ್ಪಟ್ಟು ಸಂಚಾರ ನಿಯಮಗಳು ಉಲ್ಲಂಘನೆಯಾಗಿದೆ ಎಂದರ್ಥವಲ್ಲವೇ?
* ರಾಜ್ಯದಲ್ಲಿ ಸಂಚಾರ ವ್ಯವಸ್ಥೆ ಹದಗೆಟ್ಟಿದೆ ಎಂದರ್ಥವಲ್ಲವೇ?
* ಸಂಚಾರ ನಿಯಮಗಳನ್ನು ಗಾಳಿಗೆ ತೂರಲಾಗಿದೆ ಎಂದರ್ಥವಲ್ಲವೇ?
* ಸಂಚಾರ ನಿಯಂತ್ರಣ ಮಾಡುವಲ್ಲಿ ಪೊಲೀಸರು ವಿಫಲರಾಗಿದ್ದಾರೆ ಎಂದರ್ಥವಲ್ಲವೇ?
* 50% ರಿಯಾಯಿತಿ ಆಫರ್ ನೀಡುವ ಮೂಲಕ ಸಂಚಾರ ನಿಯಮಗಳನ್ನು ಉಲ್ಲಂಘಿಸುವವರಿಗೆ ಉತ್ತೇಜನ ನೀಡಿದಂತಾಗಿಲ್ಲವೇ?
* ಸಂಚಾರ ನಿಯಮಗಳನ್ನು ಉಲ್ಲಂಘಿಸುವವರಿಗೆ 50% ರಿಯಾಯಿತಿ ನೀಡುವುದೂ ಒಂದೇ....ಸಂಚಾರಿ ನಿಯಮಗಳನ್ನು 50% ಉಲ್ಲಂಘಿಸಲು ಅನುಮತಿ ನೀಡುವುದೂ ಒಂದೇ.
* ಸಂಚಾರ ನಿಯಮಗಳನ್ನು ಉಲ್ಲಂಘಿಸಲು ಅವಕಾಶ ನೀಡಿರುವ ಪೊಲೀಸರು ನಿಯಮ ಉಲ್ಲಂಘನೆಯಾದ ನಂತರ 50% ರಿಯಾಯಿತಿ ನೀಡುತ್ತೇವೆಂದು ಆಫರ್ ನೀಡಿ ದಂಡ ವಸೂಲಿ ಮಾಡಿ ಬೀಗುವ ಬದಲಾಗಿ ನಿಯತ್ತಿನಿಂದ ರಸ್ತೆಗಿಳಿದು ಸಂಚಾರ ನಿಯಂತ್ರಣ ಮಾಡಿದ್ದರೆ ದಂಡ ವಿಧಿಸುವ,ರಿಯಾಯಿತಿ ನೀಡುವ, ಕೋಟಿ ವಸೂಲು ಮಾಡಿ ಬೀಗುವ ಪ್ರಸಂಗವೇ ಎದುರಾಗುತ್ತಿರಲಿಲ್ಲ.
* ದಂಡ ಮತ್ತು ಹೆಂಡದ ಹಣದಿಂದ ಬಂದ ಮೊತ್ತವನ್ನು ಜನೋಪಯೋಗಿ ಕಾರ್ಯಕ್ಕೆ ಬಳಸಿದರೆ ರಾಜ್ಯವೂ ಉದ್ಧಾರ ಆಗದು ಜನರೂ ಉದ್ಧಾರವಾಗರು.

ಸಂಚಾರ ನಿಯಮ ಉಲ್ಲಂಘಿಸಲು ಅವಕಾಶ ನೀಡಿದ ನಂತರ 50% ರಿಯಾಯಿತಿ ಆಮಿಷ ಒಡ್ಡಿ ದಂಡಯಾತ್ರೆ ಮಾಡುವ ಬದಲಾಗಿ ಇನ್ನು ಮುಂದಾದರೂ ಸಂಚಾರ ಪೊಲೀಸರು ರಸ್ತೆಗಿಳಿದು ಸಂಚಾರ ನಿಯಂತ್ರಣ ಮಾಡುವಂತೆ ಜ್ಞಾನಿಗಳು ಸಲಹೆ ನೀಡಿ ಸರಕಾರದ ಕಣ್ಣು ತೆರೆಸಲಿ. ಸರಕಾರಕ್ಕೆ ಜ್ಞಾನೋದಯವಾಗುವುದೆಂದು?

–ಪಿ.ಜೆ.ರಾಘವೇಂದ್ರ ನ್ಯಾಯವಾದಿ ಮೈಸೂರು

ಪದ್ಮವಿಭೂಷಣ ಪ್ರಶಸ್ತಿ ಸ್ವೀಕಾರಕ್ಕೂ ಮುನ್ನ ಗಾನ ನಿಲ್ಲಿಸಿದ ಗಾನ ಕೋಗಿಲೆ

ಮಾನ್ಯರೆ,

ಕಳೆದ ವಾರ ಗಾನ ಕೋಗಿಲೆ ವಾಣಿ ಜಯರಾಂ ನಿಧನರಾಗಿರುವುದು ನಿಜಕ್ಕೂ ದುಃಖದ ಸಂಗತಿಯಾಗಿದೆ. ಅವರಿಗೆ ಕೇಂದ್ರ ಸರ್ಕಾರದಿಂದ ಪದ್ಮವಿಭೂಷಣ ಪ್ರಶಸ್ತಿಯನ್ನು ಅವರ ಕಲಾಸೇವೆಗೆ ನೀಡಲಾಗಿತ್ತು. ಅವರು ಅದನ್ನು ಸ್ವೀಕರಿಸದೇ ನಿಧನರಾಗಿದ್ದು ಅತೀವ ದುಃಖವನ್ನು ತಂದಿದೆ. ತೆರೆದಿದೆ ಮನೆ ಓ ಬಾ ಅತಿಥಿ (ಹೊಸಬೆಳಕು ಚಿತ್ರ) ಬೆಳ್ಳಿ ಮೋಡವೇ ಎಲ್ಲಿ ಓಡುವೆ (ವಸಂತ ಲಕ್ಷ್ಮಿ ಚಿತ್ರ) ಕರುಣೆಯ ತೋರೆಯಾ ಪ್ರಿಯತಮಾ (ಚಿತ್ರ ಕವಿರತ್ನ ಕಾಳಿದಾಸ) ಇದೇ ರೀತಿ ಅನೇಕ ಸುಶ್ರಾವ್ಯ ಹಾಡುಗಳನ್ನು ಹಾಡಿರುವ ಅವರ ಕಂಠ ಎಂದೆಂದಿಗೂ ಅಮರ, ಚಿರಸ್ಥಾಯಿ. ತಾಯಿ ಚಾಮುಂಡೇಶ್ವರಿ ಅವರ ದಿವ್ಯಾತ್ಮಕ್ಕೆ ಚಿರಶಾಂತಿ ಕರುಣಿಸಲಿ.

–ಜೆ.ಪಿ. ರಾಜೇಶ್, ವಿ.ವಿ. ಮೊಹಲ್ಲಾ, ಮೈಸೂರು.

ಚಾಮರಾಜ ಕ್ಷೇತ್ರದ ಶಾಸಕರಲ್ಲಿ ಮನವಿ

ಮಾನ್ಯರೆ,

ಮೈಸೂರಿನ ಡಿ. ದೇವರಾಜ ಅರಸು ರಸ್ತೆಯ ಮಹಾಲಕ್ಷ್ಮಿ ಸ್ವೀಟ್ಸ್ ಬಳಿ ಟಿಎಂಸಿಸಿ ಬ್ಯಾಂಕ್ ಮುಂದೆ ಫುಟ್‌ಪಾತ್‌ಗೆ ಅಳವಡಿಸಲಾದ ಇಂಟರ್‌ಲಾಕಿಂಗ್ ಟೈಲ್ಸ್‌ಗಳು ಬಿರುಕು ಬಿಟ್ಟು ದೊಡ್ಡ ಕಂದಕವಾಗಿ ಮಾರ್ಪಾಡಾಗಿದೆ. ಅತ್ಯಂತ ಜನನಿಬಿಡ ರಸ್ತೆಯಾದ್ದರಿಂದ ಹಿರಿಯ ನಾಗರಿಕರು, ವಿದ್ಯಾರ್ಥಿಗಳು, ಮಕ್ಕಳು ಅಂಗಡಿ ಮಳಿಗೆಗಳ ಗ್ರಾಹಕರು, ಕಾರ್ಮಿಕರು ಹಳ್ಳದಲ್ಲಿ ಬಿದ್ದು ಅನಾಹುತ ಆಗುವ ಸಾಧ್ಯತೆಯಿದೆ. ಪಾಲಿಕೆ ಸದಸ್ಯರಿಗೆ ಹಾಗೂ ಅಧಿಕಾರಿಗಳಿಗೆ ದೂರು ನೀಡಿದರೂ ಸಮಸ್ಯೆ ಬಗೆಹರಿದಿಲ್ಲ. ಕ್ರಿಯಾಶೀಲ ಶಾಸಕರಾದ ಎಲ್. ನಾಗೇಂದ್ರರವರೇ ಈ ಬಗ್ಗೆ ಗಮನಹರಿಸಿ ಸಮಸ್ಯೆ ಬಗೆಹರಿಸಬೇಕೆಂದು ಮನವಿ.

–ನೊಂದ ನಾಗರಿಕರು, ಡಿ.ಡಿ. ಅರಸು ರಸ್ತೆ, ಮೈಸೂರು.

ಖಾಲಿ ನಿವೇಶನಗಳ ರಸ್ತೆಗೆ ಡಾಂಬರು, ಮನೆಗಳಿರುವ ರಸ್ತೆಗಿಲ್ಲ ಡಾಂಬರು!

ಮಾನ್ಯರೆ,

ಮೈಸೂರಿನ ವಿಜಯನಗರ 4ನೇ ಹಂತದಲ್ಲಿ ಖಾಲಿ ನಿವೇಶನ ಇರುವ ಕಡೆ ರಸ್ತೆಗಳಿಗೆ ಡಾಂಬರು ಹಾಕಿದ್ದು, ಮನೆಗಳು ಇರುವ ಕಡೆ ಡಾಂಬರು ಹಾಕಿರುವುದಿಲ್ಲ. ಡಾಂಬರು ಹಾಕುವ ಕೆಲಸ ಸ್ಥಗಿತಗೊಂಡು ಈಗಾಗಲೇ 2 ತಿಂಗಳೇ ಕಳೆದಿದೆ. ಕಳೆದ ಎರಡು ತಿಂಗಳಿಂದ ಯುಜಿಡಿ ಕೆಲಸವು ಸ್ಥಗಿತಗೊಂಡಿದೆ. ಮಳೆ ಪ್ರಾರಂಭವಾಗುವುದರೊಳಗಾಗಿ ಯುಜಿಡಿ ಮತ್ತು ರಸ್ತೆ ಡಾಂಬರೀಕರಣ ಪೂರ್ಣ ಮಾಡಲು ಅಗತ್ಯ ಕ್ರಮ ಕೈಗೊಳ್ಳಬೇಕಾಗಿ ಮನವಿ. – ಬಿ.ಜಿ. ರಂಗೇಗೌಡ, ಮೈಸೂರು.

ಹಿರಿಯ ನಾಗರಿಕರಿಗೆ ವಿಶೇಷ ಕೋರ್ಟ್ ಸ್ಥಾಪನೆಯಾಗಲಿ

ಮಾನ್ಯರೆ,

ಇತ್ತೀಚಿನ ದಿನಗಳಲ್ಲಿ ನಿವೃತ್ತ ಹಾಗೂ ಹಿರಿಯ ನಾಗರಿಕರು, ಹಲವಾರು ಇಲಾಖೆ, ಸಂಘ ಸಂಸ್ಥೆಗಳ ಮೇಲೆ ನಾನಾ ಪ್ರಕರಣ ದಾಖಲು ಮಾಡುವ ಅನಿವಾರ್ಯತೆ ಹೆಚ್ಚಾಗುತ್ತಿದ್ದು, ನ್ಯಾಯಾಲಯದಲ್ಲಿ ಕಕ್ಷಿದಾರರು ನಿಲ್ಲುವುದಕ್ಕೂ ಜಾಗವಿಲ್ಲದೆ, ಕುಳಿತುಕೊಳ್ಳುವುದಕ್ಕೂ ಸ್ಥಳವಿಲ್ಲದೆ ಅತ್ತ ನ್ಯಾಯಾಲಯದ ವಿಳಂಬ ನೀತಿಯಿಂದ ಉಸಿರುಗಟ್ಟಿದ ವಾತಾವರಣದಲ್ಲಿ ನಿಂತು ನ್ಯಾಯಕ್ಕಾಗಿ ಪರದಾಡುವ ಸ್ಥಿತಿ ಎದುರಾಗಿದೆ. ಇಂತಹ ಸನ್ನಿವೇಶದಲ್ಲಿ ಹಿರಿಯ ನಾಗರಿಕರು, ದೈಹಿಕ ಹಾಗೂ ಮಾನಸಿಕ ಶಕ್ತಿಯನ್ನು ಕಳೆದುಕೊಂಡು ನ್ಯಾಯಕ್ಕಾಗಿ ಎರಡು ಕೈಗಳನ್ನು ಜೋಡಿಸಿ ಬೇಡುವಂತಹ ಅತ್ಯಂತ ಕಷ್ಟಕರ ಪರಿಸ್ಥಿತಿ ಬಂದಿರುತ್ತದೆ. ಇಂತಹ ಹಿರಿಯ ನಾಗರಿಕರ ದುಸ್ಥಿತಿಯನ್ನು ಪರಿಗಣಿಸಿ ಹೈಕೋರ್ಟ್ ಮುಖ್ಯ ನ್ಯಾಯಾಧೀಶರು 60 ವರ್ಷ ಮೇಲ್ಪಟ್ಟ ಹಿರಿಯ ನಾಗರಿಕರಿಗಾಗಿ ವಿಶೇಷ ಕೋರ್ಟ್‌ನ್ನು ಸ್ಥಾಪಿಸುವ ಮೂಲಕ ಹಿರಿಯ ನಾಗರಿಕರಿಗೆ ಶೀಘ್ರ ನ್ಯಾಯ ದೊರೆಯುವಂತೆ ಅವಕಾಶವನ್ನು ಒದಗಿಸಿಕೊಡಬೇಕು. ಈ ಮೂಲಕ ಹಿರಿಯ ನಾಗರಿಕರಿಗೆ ರಕ್ಷಣೆ ದೊರಕಿಸಿಕೊಡುವ ನಿರ್ಣಯ ಕೈಗೊಂಡು ನ್ಯಾಯ ದೊರಕಿಸಿಕೊಡಬೇಕಾಗಿ ಮನವಿ.

– ಎನ್.ಆರ್. ವಿಜಯಕುಮಾರ್, ಮೈಸೂರು.



ಡಾ. ಗುಬ್ಬಿಗೂಡು ರಮೇಶ್
ಮೊ : 97429–34512

ದೀಪ ಸಾಲು

ದೇಸೀಯತೆಯ ಅಸಲೀಯತ್ತು!



ಯಾರನ್ನೋ ಮೆಚ್ಚಿಸಲು ಬರೆದ ಬರವಣಿಗೆ, ಯಾರನ್ನೋ ಒಪ್ಪಿಸಲು ಮಾಡಿಕೊಂಡ ಮೆರವಣಿಗೆ, ಎಂದಿಗೂ ನಮಗಾಗಿ ಅಲ್ಲ. ಎರಡು ತುತ್ತು ಅನ್ನ, ಕಣ್ತುಂಬ ನಿದ್ದೆ ಇವಷ್ಟೇ ನಮ್ಮನ್ನು ಬದುಕಿಸಲು ಬರುವ ಎರಡಕ್ಷರದ ಜೀವಧ್ವನಿಗಳು. ಉಳಿದವೆಲ್ಲಾ ಇನ್ನಾರನ್ನೋ ಮೆಚ್ಚಿಸಲು ಮಾಡುವ ಅನುಕೂಲ ಸಿಂಧು ಲಾಭದಾಯಕ ಮಾರ್ಗ. ಈಗ ನೋಡಿ; ಬಿಷಪ್ ಕಾಟನ್ಸ್ ಶಾಲೆಯಲ್ಲಿ ಓದುವ ಹುಡುಗ, ಸರಕಾರಿ ಪ್ರಾಥಮಿಕ ಶಾಲೆಯ ಹುಡುಗನನ್ನು ತನ್ನ ಸಹಪಾಠಿಯಾಗಿ ಮೆಚ್ಚುಗೆಯ ಕಣ್ಣುಗಳಿಂದ ನೋಡುವುದೇ ಇಲ್ಲ.

ಇಂಗ್ಲಿಷ್ ಮಾತಾಡುವ ಜನ ಎಂ.ಜಿ. ರೋಡಿನಲ್ಲಿ ತರಕಾರಿಗಾಗಿ ವೈರ್‌ಬ್ಯಾಗ್ ಹಿಡಿದು ಹೊರಟವರನ್ನು ಹೇಗೆ ನೋಡುತ್ತಾರೆ ಹೇಳಿ? ಹಾಗೆಯೇ ಇದು ಮೆಚ್ಚಿಸುವ ಪ್ರಪಂಚ. ಇದು ಎಷ್ಟರ ಮಟ್ಟಿಗೆ ಪ್ರಭಾವ ಬೀರಿದೆಯೆಂದರೆ ಕೂಲಿನಾಲಿ ಮಾಡಿಯಾದರೂ ಮಕ್ಕಳನ್ನು ಇಂಗ್ಲಿಷ್ ಶಾಲೆಗೆ ಸೇರಿಸಿ ಕಾರ್ಪೊರೇಟ್ ಪ್ರಪಂಚಕ್ಕೆ ತಳ್ಳಿಬಿಡಬೇಕೆಂಬ ಹಂಬಲಗಳು ನಮ್ಮ ಪೋಷಕರನ್ನು ವಿಪರೀತವಾಗಿ ಪ್ರಭಾವಿಸುತ್ತಿವೆ. ಅಂದರೆ ಜೀನ್ಸ್–ಟೀ ಷರ್ಟುಗಳು ಸೃಷ್ಟಿಸಿದ ಸುಖಗಳನ್ನು, ಪಂಚೆ, ಜುಬ್ಬಾ–ಪೈಜಾಮುಗಳು ಸೃಷ್ಟಿಸಲಾರದೆಂಬ ಸುಖದ ವ್ಯಾಖ್ಯಾನಗಳು ಇಪ್ಪತ್ತನೇ ಶತಮಾನದ ಆರಂಭದಿಂದ ಮೊಳಕೆಯೊಡೆಯಲು ಶುರು ಮಾಡಿದವು. ಆಗ ನಮ್ಮ ಸಮಾಜದ ಸಾಮಾಜಿಕ ಸಂರಚನೆಗಳು ಬದಲಾಗಿ ಹೋದವು. ಇಂಗ್ಲೀಷು, ಜೀನ್ಸು ಐಷಾರಾಮಿ ಕಾರುಗಳು ಯಾರನ್ನೋ ಮೆಚ್ಚಿಸಲೆಂದೇ ಹುಟ್ಟಿದ ಸುಖಪಡುವ ಸೋಪಾನಗಳಾಗಿ ಕಂಡುಬಂದವು. ಹೇಗಾದರೂ ಅವುಗಳನ್ನು ಗಳಿಸುವ ಮಾರ್ಗಕ್ಕಾಗಿ ಜನ ಹುಡುಕಾಟ ಆರಂಭಿಸಿದರು. ಆದರೆ ಉಣ್ಣಲು ತಿನ್ನಲು ಮಾತ್ರ ದೇಸೀ ಊಟ, ದೇಸೀ ಅಡುಗೆ, ದೇಸೀ ತಿಂಡಿ ತೀರ್ಥಗಳೇ ಆಪ್ಯಾಯವಾಗಿ ಹೋದವು. ಮುದ್ದೆ, ಉಪ್ಸಾರು, ಅನ್ನ ಬಸ್ಸಾರು, ಮುದ್ದೆ ಸೊಪ್ಪಿನ ಸಾರು, ರೊಟ್ಟಿ ಎಣ್ಣೆಗಾಯಿ, ಒತ್ತು ಶ್ಯಾವಿಗೆ ಕೋಳಿಸಾರುಗಳು ದೇಸೀಯತೆಯ ಘಮಲು ಕಳೆದುಕೊಳ್ಳದ ಹಾಗೆ ಇರುವುದು ಇರುವಂತೆಯೇ ಬೇಕಾಯಿತು. ಅದು ಮಾತ್ರ ತಮ್ಮನ್ನು ತಾವು ಸುಖ ಪಡಲು ಕಂಡುಂಡ ನಾಲಿಗೆಯ ಸತ್ಯಗಳಾಗಿ ಉಳಿದುಕೊಂಡವು.



ಇವತ್ತಿಗೂ ಬೆಂಗಳೂರು, ದಿಲ್ಲಿ, ಮುಂಬೈಗಳ ಪಂಚತಾರಾ ಹೋಟೆಲಿನಲ್ಲಿ ವಾಸ್ತವ್ಯ ಹೂಡಿದ್ದರೂ ಜನಮಾತ್ರ ಈ ದೇಸೀ ಊಟ ಸಿಗುವ ಜಾಗಗಳ ಅಡ್ರೆಸ್ ಕೇಳುತ್ತಾರಲ್ಲ. ಅದೇ ಅಸಲೀಯತ್ತು. ಯಾರನ್ನೋ ಮೆಚ್ಚಿಸುವ ಸಲುವಾಗಿ ನಾವಾಡುವ ಮಾತುಗಳು, ಭಾಷಣಗಳು, ಬಟ್ಟೆಗಳು, ನಯ ನಾಜೂಕುಗಳಿಗೆಲ್ಲಾ ಆಯಸ್ಸುಗಳಿಲ್ಲ. ನಾವು ಅಂದುಕೊಂಡವರನ್ನು ಮೆಚ್ಚಿಸಿಯಾದ ಮೇಲೆ ಅವರು ಓಟು ಹಾಕುತ್ತಾರೆ, ನಾವು ಮೆಚ್ಚಿಸಲು ಹೆಣಗಿದ ಮೇಲೆ ಮೆಚ್ಚಿಕೊಂಡವಳು ಪತ್ನಿಯಾಗುತ್ತಾಳೆ, ನಮ್ಮ ಸ್ವಭಾವವನ್ನು ಮೆಚ್ಚಿಕೊಂಡವನು ಗೆಳೆಯನಾಗುತ್ತಾನೆ. ಮಠವನ್ನು ಮೆಚ್ಚಿಕೊಂಡವನು ಭಕ್ತನಾಗುತ್ತಾನೆ. ಮೇಷ್ಟರನ್ನು ಮೆಚ್ಚಿಕೊಂಡವನು ವಿನಯವಂತ ವಿದ್ಯಾರ್ಥಿಯಾಗುತ್ತಾನೆ. ಪತ್ರಿಕೆಯನ್ನು ಮೆಚ್ಚಿಕೊಂಡವನು ಅದರ ಓದುಗನಾಗುತ್ತಾನೆ, ರಾಜಕೀಯ ಪಕ್ಷಗಳನ್ನು ಮೆಚ್ಚಿಕೊಂಡವನು ಅದರ ಕಾರ್ಯಕರ್ತನಾಗುತ್ತಾನೆ. ನಟನನ್ನು ಮೆಚ್ಚಿಕೊಂಡವನು ಅಭಿಮಾನಿಯಾಗುತ್ತಾನೆ, ಹೀಗೆ ಆಟಗಾರರನ್ನು ಮೆಚ್ಚಿಕೊಳ್ಳುವವನು ಅವನನ್ನೇ ಆರಾಧಿಸುತ್ತಾನೆ. ಕೈಯ್ಯಲ್ಲಿ ಬ್ಯಾಟು, ಕಾಲಲ್ಲಿ ಪ್ಯಾಡು ಕಟ್ಟಿಕೊಂಡು ಅವನನ್ನೇ ಅನುಕರಿಸುತ್ತಾ ಪೆವಿಲಿಯನ್ ಕಡೆ ನೋಡುತ್ತಾ ಇವನೂ ಅವನಂತೆಯೇ ಜನರನ್ನು ಮೆಚ್ಚಿಸುವ ಸಲುವಾಗಿ ಹೆಜ್ಜೆ ಹಾಕುತ್ತಾನೆ. ಗಂಡ; ಮನೆ, ಸೈಟು, ಕಾರು ಖರೀದಿಸಿ ಮಕ್ಕಳನ್ನು, ಹೆಂಡ್ತಿಯನ್ನು ಮೆಚ್ಚಿಸುವೆಡೆಗಿನ ಧನ್ಯತೆಯಲ್ಲಿ ಮಿಂದೇಳುತ್ತಾನೆ. ಅನುಕೂಲವಂಚಿತ, ಅದೃಷ್ಟವಂಚಿತ ಜನ ಹಣೇಬರಹದ ಮೊರೆ ಹೋಗುತ್ತಾರೆ. ದೇಸೀಯತೆ ಎನ್ನುವ ಅಸಲೀಯತ್ತು ಕೇವಲ ಊಟದಲ್ಲಲ್ಲ, ಆಟದಲ್ಲೂ ಅವು ತಮ್ಮ ಖದರ್ರು ತೋರಿಸುತ್ತವೆ.

ಕ್ರಿಕೆಟ್ಟು, ಟೆನ್ನಿಸ್ಸುಗಳು ಜಗತ್ತನ್ನೇ ಮೆಚ್ಚಿಸಿ ಕ್ರೀಡಾಂಗಣಗಳನ್ನೇ ಆಳುತ್ತಿರುವಾಗಲೂ ನಮ್ಮ ದೇಸೀ ಆಟ 'ಕುಸ್ತಿ' ಕೈಕಟ್ಟಿ ಕೂರಲಿಲ್ಲ. ಅದು ಗ್ರಾಮ ಭಾರತದ ಕಚ್ಚಾ ಪ್ರೇಕ್ಷಕರನ್ನು ರಂಜಿಸುತ್ತಿತ್ತು. ಆದರೆ ಬದಲಾದ ಕಾಲಘಟ್ಟದಲ್ಲಿ ಕುಸ್ತಿ ಬದಲಾಗಲಿಲ್ಲ; ಜಗತ್ತು ಬದಲಾಯಿತು. ಜಾಗತಿಕ ಕ್ರೀಡೆಗಳಲ್ಲಿ 'ಕುಸ್ತಿ'ಗೂ ಒಂದು ಜಾಗ ಕಲ್ಪಿಸಿತು. ಸಾಮಾಜಿಕ ಸಂದರ್ಭಗಳು ಹೀಗೆಯೇ ಬದಲಾಗುತ್ತಿರುತ್ತವೆ. ಇವತ್ತು ಬಾಲಿವುಡ್‌ನಲ್ಲಿ ಸೆನ್ಸೇಷನಲ್ ಸ್ಪೋರ್ಟ್ಸ್ ಸಬ್ಜೆಕ್ಟುಗಳನ್ನಿಟ್ಟುಕೊಂಡು ಸಿನಿಮಾ ಮಾಡಿ, ಗೆದ್ದ ಗೆಲುವುಗಳಲ್ಲಿ ಇಂಗ್ಲೆಂಡಿನ ಕ್ರಿಕೆಟ್ ಆಟದ 'ಲಗಾನ್' ಯಶಸ್ಸು ಕಂಡಂತೆ ಭಾರತೀಯರ ದೇಸಿ ಕುಸ್ತಿ 'ದಂಗಲ್' ಕೂಡ ಅದೇ ರೇಸಿನಲ್ಲಿ ಓಡಿತು. ಅಂದರೆ ಸುಖದ ಕಲ್ಪನೆ ಮತ್ತು ಯಶಸ್ಸಿನ ಗ್ರಹಿಕೆಗಳು ಕಾರ್ಪೊರೇಟ್ ಪ್ರಪಂಚಕ್ಕೆ ಮಾತ್ರ ಮೀಸಲು! ದೇಸೀಯತೆ ಅನ್ನೋದು ಎಲ್ಲಾ ಕಾಲಕ್ಕೂ ಮಾಸಲು ಎಂಬ ಭ್ರಮೆ ಕಳಚಬೇಕು. ದೇಸೀ ಚಿಂತನೆಗಳು ತಮ್ಮನ್ನು ತಾವು ಸಿಂಗರಿಸಿಕೊಂಡು ಪ್ರೆಸೆಂಟ್ ಮಾಡಿಕೊಳ್ಳುವುದನ್ನು ಗೊತ್ತು ಮಾಡಿಕೊಳ್ಳಬೇಕು. ಇಂಗ್ಲೀಷು, ಜೀನ್ಸು ಕಾರ್ಪೊರೇಟ್ ಜಗತ್ತುಗಳಿಗೆ ಅದು ಗೊತ್ತಿದೆ.

ಅವು ಜಗತ್ತನ್ನು ಮೆಚ್ಚಿಸುತ್ತವೆ. ಆದರೆ ಅವೇ ಕಾರ್ಪೊರೇಟ್ ಕಣ್ಣುಗಳು ದೇಸೀ ರುಚಿ, ದೇಸಿ ಸೊಗಸುಗಳನ್ನು ನಾಲಿಗೆಯಿಂದ ಹಿಡಿದು ಯೋಗಾಸನದವರೆಗೆ ಆಸೆಕಣ್ಣುಗಳಿಂದ ನೋಡುತ್ತಿವೆ! ನಿಮಗೆ ಗೊತ್ತಿರಲಿ; ಭಾರತದ 'ಯೋಗ' ಇವತ್ತು ಜಿಮ್ಮು, ಏರೋಬಿಕ್ಸ್‌ಗಳನ್ನು ಹಿಂದಿಕ್ಕಿ ವಾಯುವೇಗ ದಲ್ಲಿ ಓಡುತ್ತಿದೆ. ವಿದೇಶಿ ಪ್ರಜೆಗಳು ಹೆಚ್ಚಾಗಿ ಯೋಗ ಹುಡುಕಿಕೊಂಡು ಭಾರತಕ್ಕೆ ಬರುತ್ತಾರೆ. ಇಲ್ಲಿ ಉಳಿದು, ಯೋಗ ಕಲಿತು ತೆರಳುತ್ತಾರೆ. ಇಲ್ಲಿನ ಆಧ್ಯಾತ್ಮ ಬೊಗಳೆ ಎನ್ನುತ್ತಿದ್ದ ಅನೇಕರಿಗೆ ಧ್ಯಾನ ಮತ್ತು ಮೌನಗಳು ಯೋಗ ಮತ್ತು ಏಕಾಗ್ರತೆಗಳು ಆತ್ಮಶಕ್ತಿ ಹೆಚ್ಚಿಸಿಕೊಳ್ಳಲು, ಹೇಗೆ ನೆರವಾಗುತ್ತವೆಂಬುದನ್ನು ತೋರಿಸಿವೆ. ದೇಹಶಕ್ತಿ, ಮನಸ್ಸಿನ ಶಕ್ತಿ, ವ್ಯಕ್ತಿತ್ವ ರೂಪಿಸಿಕೊಳ್ಳಲು ಬಳಕೆಯಾಗುವಂತೆ ರೂಪಿತಗೊಂಡಿವೆ. ಇಲ್ಲಿ ವಿರಾಟ್ ಕೊಹ್ಲಿಗೂ ಬ್ಯಾಟಿದೆ, ಟೆನ್ನಿಸ್ಸಿನ ಸಾನಿಯಾ ಮಿರ್ಜಾಗೂ ಟೆನ್ನಿಸ್ ಕೋರ್ಟಿದೆ, ಮಹಾವೀರ್‌ಸಿಂಗ್, ಪೋಗಟ್ ಎಂಬ ಕುಸ್ತಿ ಪಟುಗಳಿಗೂ ಅಖಾಡವಿದೆ, ಮಿಲ್ಖಾಸಿಂಗಿಗೆ ಟ್ರಾಕಿದೆ.

ಹಾಗೆಯೇ ಆಧುನಿಕವಾಗಿ ಬೆಳೆದ ನಗರಗಳಲ್ಲಿ, ಹಳ್ಳಿ ಊಟ, ಹಳ್ಳಿ ತಿಂಡಿ, ನಾಟಿ ಹಸುವಿನ ಹಾಲಿದೆ. ಅಂದರೆ ಮೆಚ್ಚಿಸುವ ಯುಗದಲ್ಲಿ ಒಪ್ಪಿಸುವ ಭರದಲ್ಲಿ ಎಲ್ಲರೂ, ಎಲ್ಲವೂ ಬ್ಯುಸಿಯಾಗಿರುವ ಈ ಕಾಲದಲ್ಲಿ ದೇಸೀಯತೆ ಎನ್ನುವ ಕಚ್ಚಾ ಮಾಲು ಹಿಂದೆ ಬಿದ್ದಿಲ್ಲ ಎಂಬುದೇ ದೇಸೀಯತೆಯ ಅಸಲೀಯತ್ತು. ಎಲ್ಲದಕ್ಕೂ ಮೂಲದ್ರವ್ಯದಂತೆ ಬಳಕೆಯಾಗಬಲ್ಲ ಸಾಂದ್ರತೆ ಶಕ್ತಿಯನ್ನು ಹೊಂದಿರುವ ಈ ದೇಸೀತನಕ್ಕೆ ಮೆಚ್ಚಿಸುವ, ಒಪ್ಪಿಸುವ ಆಕರ್ಷಣೆಗಳಿಲ್ಲ, ಬದಲಿಗೆ ಎಲ್ಲವನ್ನೂ ಕಾಪಾಡುವ ಗುಣವಿದೆ. ಬ್ರೆಜಿಲ್‌ನ ಕಾಫಿಗಿಡ ಇವತ್ತು ವಿಶ್ವಮಾರುಕಟ್ಟೆಯಲ್ಲಿ ನಗುತ್ತಿದ್ದರೆ, ಅದರ ಬೇರುಗಳ ಬುಡದಲ್ಲಿ ದೇಸೀಯತೆಯ ಘಮಲಿನೊಂದಿಗೆ ನಳನಳಿಸಿದ್ದು ಮಾತ್ರ ಇದೇ ಕೊಡಗಿನ ಕಾಫಿ ಕಡ್ಡಿಗಳು. ಮತ್ತದೇ ಬಹುರಾಷ್ಟ್ರೀಯ ಕಂಪನಿಗಳು ತಮ್ಮ ಗೊಬ್ಬರಗಳು, ಬಿತ್ತನೆಬೀಜಗಳು ಟ್ರಾಕ್ಟರ್‌ಗಳು ಸ್ಪ್ರೇಯರ್‌ಗಳನ್ನು ಮಾರಲಿಕ್ಕೆ ನಟನಟಿಯರಿಗೆ ರೈತನ ವೇಷ ತೊಡಿಸಿ ತಮ್ಮ ಪ್ರಾಡಕ್ಟುಗಳಿಗೆ ಮಾರುಕಟ್ಟೆ ಸೃಷ್ಟಿಸಿಕೊಳ್ಳಲು ಇದೇ ದೇಸೀ ಜಗತ್ತಿನ ರೈತಾಪಿ ವರ್ಗವನ್ನು ಮೆಚ್ಚಿಸಲಿಕ್ಕೆ, ಒಪ್ಪಿಸಲಿಕ್ಕೆ ಹೊರಡಬೇಕಿದೆ.

ಹಾಗಂತ ಬದಲಾದ ಮಾರುಕಟ್ಟೆ ವ್ಯವಸ್ಥೆ ರೈತನನ್ನು ಈ ಜಾಲದ ಒಳಕ್ಕೆ ಬರಲು ಹಣದ ಆಮಿಷ ತೋರಿಸಿ ಆಹ್ವಾನಿಸುತ್ತಿದೆ. ನಾಟಿಕೋಳಿಯನ್ನು 'ಬ್ರೀಡಿಂಗ್' ಮಾಡಿ ಮಾರುವ, ನಾಟಿ ಹಸುವಿನ (ಹಳ್ಳಿಕಾರ್ ಹಸು) ಹಾಲನ್ನು ವಿದೇಶಿ ತಳಿಗಳ ಹಾಲಿನೊಂದಿಗೆ ಬೆರೆಸಿ ದೇಸೀ ಹಸುವಿನ ಹಾಲೆಂದು ಮಾರುವ, ಲೇಯರ್ ಕೋಳಿ ಮೊಟ್ಟೆಗೆ ಬಣ್ಣ ಕಟ್ಟಿ, ನಾಟಿಕೋಳಿ ಮೊಟ್ಟೆಯಂತೆ ಬಿಂಬಿಸುವ, ವ್ಯಾಪಾರಿತನಗಳು ತಲೆಯೆತ್ತಿವೆ. ದೇಸೀತನದ ಹೆಸರಿನ ನಕಲಿ ನಾಕಾಬಂಧಿಯಲ್ಲಿ ಜನರನ್ನು ಮೆಚ್ಚಿಸುವ ಮತ್ತು ಒಪ್ಪಿಸುವ ಸರದಿಯಲ್ಲಿ ನಾವಿದ್ದೇವೆ. ಆದರೆ ದೇಸೀ ಜಗತ್ತು ಈ ಹಿಂದೆಯೂ ಇತ್ತು, ಈಗಲೂ ಇದೆ, ಮುಂದೆಯೂ ಇರುತ್ತದೆ. ಕಂಬಾರರಂಥವರು, ಬೇಂದ್ರೆಯಂಥವರು ದೇಸೀ ಜಾನಪದದ ಕಾರಣಕ್ಕೇ ಸಾಹಿತ್ಯ ಚಾವಡಿಯಲ್ಲಿ ಬಲವಾಗಿ ನಿಂತರು. ಲೇಖಕರ ಹೆಸರೇ ಇಲ್ಲದ ಜನಪದ ಗೀತೆಗಳು, ಯಾರ ಅಭಯವೂ ಇಲ್ಲದೆ ಕಟ್ಟಿಕೊಂಡ ಗುಬ್ಬಿಗೂಡು ಇವೆಲ್ಲವೂ ದೇಸೀ ಜಗತ್ತಿನ ಹೆಬ್ಬಾಗಿಲುಗಳೇ.

ಊರಲ್ಲಿ ಎಲ್ಲರ ಮನೆಗಳ ಒಲೆಯೂ ಉರಿಯಬೇಕೆನ್ನುವ ಹಂಬಲವಿರುವ ದೇಸೀಪ್ರಜ್ಞೆ ಪರಂಪರೆಯಿಂದಲೂ ಹೀಗೆ ಮೌಖಿಕವಾಗಿ ಕುಲಕಸುಬುಗಳ ರೀತಿಯಲ್ಲೇ ಉಳಿದುಬಂದಿದೆ. ನಮ್ಮ ದೇಸೀ ಕುಶಲಕರ್ಮಿ ತಾನು ಮಾಡುವ ಉತ್ಪಾದನೆಯನ್ನು ತನ್ನ ಪೂರ್ವಜರಿಂದ ನೋಡಿ ಕಲಿತವನು. ಕೈಚಳಕ ಮತ್ತು ಶ್ರಮವನ್ನು ತಾನೇ ಮಾಡಿ ತಿಳಿದವನು. ಪ್ರಾಯೋಗಿಕವಾಗಿ ತನ್ನ ಜ್ಞಾನವನ್ನು ತಲೆಮಾರಿನಿಂದ ತಲೆಮಾರಿಗೆ ತಲುಪಿಸುವ ವಾಹಕವಾಗಿ ಉಳಿದವನು. ಅದೇ ದೇಸೀಯತೆಯ ಅಸಲೀಯತ್ತು. ಆದರೆ ಕುಂಬಾರಿಕೆಗೊಂದು ಸಿಲಬಸ್ಸು ಹೊಂದಿಸಿ, ಕಮ್ಮಾರಿಕೆಗೊಂದು ಕೋರ್ಸು ಮಾಡಿ, ಗಾಣದೆಣ್ಣೆಗೆ ಟೆಕ್ನಾಲಜಿ ತುಂಬಿ, ಬಡಗಿಯೊಬ್ಬನ ಬಂಡಿಗೆ ಉದ್ಯಮದ ಲೇಬಲ್ಲು ಬಿಗಿದು, ಮಾರುಕಟ್ಟೆ ಸೃಷ್ಟಿಸುವುದಿದೆಯಲ್ಲಾ! ಅದು ಈ ದೇಸೀ ಜಗತ್ತಿಗೆ ದೂರ. ಈ ಎಲ್ಲಾ ಕುಲಕಸುಬುಗಳನ್ನು ಸರ್ಟಿಫಿಕೇಟ್ ಶಿಕ್ಷಣವನ್ನಾಗಿ ಮಾರ್ಪಡಿಸಿ ರೂಪಿಸಿದ್ದು ಕಾರ್ಪೊರೇಟ್ ಜಗತ್ತು. ಗ್ರಾಮ ಭಾರತದ ಕನಸು ಕಂಡಿದ್ದ ಗಾಂಧೀಜಿ ಕೂಡ ದೇಸೀಯ ವೃತ್ತಿ ಪರಂಪರೆ ಮತ್ತು ಕುಶಲಕರ್ಮಿಗಳ ಉತ್ಪಾದನೆಯೇ ನಮ್ಮ ಮೂಲವಸ್ತು, ತಾಯಿಬೇರು ಎಂದು ನಂಬಿದ್ದರು. ಆ ನಂಬಿಕೆಗಳು ಈಗಿನಂತೆ ಯಾರನ್ನೋ ಮೆಚ್ಚಿಸಲು ಅಥವಾ ಒಪ್ಪಿಸಲು ಹುಟ್ಟಿಕೊಂಡವಲ್ಲ. ಅವು ಸ್ಥಳೀಯ ಜನಮಾನಸದ ಅದೃಶ್ಯ ಅಸ್ತಿತ್ವಗಳು. ಆ ನಂಬಿಕೆಗಳೇ ಈ ನೆಲದ ಒಡಲನ್ನು, ಇಂದಿಗೂ ಗಟ್ಟಿಗೊಳಿಸುವ ಜೀವಂತಿಕೆಯಂತೆ ಕಾಪಾಡುತ್ತಿರುವುದು.

ಸ್ವಾತಂತ್ರ್ಯ ಸಂಗ್ರಾಮದಂಥ ದೊಡ್ಡ ಹೋರಾಟಗಳೂ ಕೂಡ ನೆಚ್ಚಿಕೊಂಡದ್ದು ಇಂಥ ದೇಸೀಯತೆಯ ಅಸ್ಮಿತೆಯನ್ನೇ. ಸ್ವಾತಂತ್ರ್ಯ ಸಂಗ್ರಾಮದ ಕಾಲದಲ್ಲಿ ಮಗನ್‌ಲಾಲ್ ಪಾಗಡಿಯೆಂಬ ಯುವಕನೊಬ್ಬ ಬ್ರಿಟೀಷರ ಕೆಂಗಣ್ಣಿಗೆ ಗುರಿಯಾಗಿದ್ದ. ಆಗ, ಕಂಪನಿ ಸರ್ಕಾರ ಅವನನ್ನು ಹಿಡಿದು ತಂದೊಪ್ಪಿಸಿದವರಿಗೆ ಒಂದು ಲಕ್ಷ ರೂ. ಬಹುಮಾನ ಘೋಷಿಸಿತ್ತು. ಒಂದು ರಾತ್ರಿ ಬ್ರಿಟಿಷ್ ಪೊಲೀಸರ ತುಕಡಿಯಿಂದ ತಪ್ಪಿಸಿಕೊಂಡು ಬಂದ ಆತ ಹಳ್ಳಿಯೊಂದರ ಗುಡಿಸಲಿಗೆ ನುಗ್ಗಿದ. ಅಲ್ಲೊಬ್ಬ ತಾಯಿ ವಿಪರೀತ ಜ್ವರದಿಂದ ಬಳಲುತ್ತಿದ್ದ ಮಗನನ್ನು ಮಲಗಿಸಿಕೊಂಡು ದೀಪದ ಮಂದ ಬೆಳಕಿನಲ್ಲಿ ಕುಳಿತಿದ್ದಳು. ಅಷ್ಟೊತ್ತಿನಲ್ಲಿ ಆ ಗುಡಿಸಲಿಗೆ ನುಗ್ಗಿದ ಮಗನ್‌ಲಾಲ್ ಮತ್ತು ಆತನ ಗೆಳೆಯರನ್ನು ನೋಡಿದ ಆಕೆಗೆ ಗೊತ್ತಾಯಿತು, ಅವರು ಸ್ವಾತಂತ್ರ್ಯ ವೀರರು ಅಂತ. ಪೊಲೀಸರ ಹೆಜ್ಜೆ ಸಪ್ಪಳ ಕೇಳಿದೊಡನೆ ದೀಪವಾರಿಸಿ ಮಗನ ರೋದನೆಗಿಂತ ದೇಶಪ್ರೇಮದ ಹುಡುಗರನ್ನು ಕಾಪಾಡಿದಳು. ಆ ಹುಡುಗರೆಲ್ಲಾ ಮುಂಜಾನೆ ಎದ್ದು ಹೊರಡುವಾಗ ಆ ಮಹಾತಾಯಿಯ ಕೈಗೆ ಒಂದಷ್ಟು ಹಣವಿತ್ತು ಅವಳ ಮಗನನ್ನು ಉಪಚರಿಸಲು ಹೇಳಿ ತಮ್ಮನ್ನು ರಕ್ಷಿಸಿದ್ದಕ್ಕಾಗಿ ಕೃತಜ್ಞತೆ ಸಲ್ಲಿಸಿದರು.

ಆದರೆ ಆ ಬಡವಿ, ಆ ದುಡ್ಡನ್ನು ಆ ಹುಡುಗರ ಕೈಗಿತ್ತು ಮನೆ ಕೆಲಸಕ್ಕಿಂತ ದೇಶದ ಕೆಲಸ ದೊಡ್ಡದು. ನೀವದನ್ನು ಮಾಡುತ್ತಿದ್ದೀರಿ. ಈ ಹಣ ನಿಮಗೇ ಇರಲಿ ಎಂದಳು. ಆಗ ಆ ಯುವಕ ಆ ತಾಯಿಗೆ ಒಂದು ಮಾತು ಹೇಳಿದ. ಅಮ್ಮಾ ನಾವು ಕೊಟ್ಟ ಈ ಹಣ ಕಡಿಮೆಯಾಯಿತೆಂದರೆ ಹೇಳೀ? ನಮ್ಮ ಬಳಿ ಇರುವುದು ಇಷ್ಟೆ. ನೀವು ಮಾಡಿದ ಸಹಾಯಕ್ಕಾಗಿ ನಿಮಗೆ ಗುಟ್ಟೊಂದನ್ನು ಹೇಳುತ್ತೇನೆ ಕೇಳೀ! ನೀವು ನನ್ನನ್ನು ಬ್ರಿಟೀಷರಿಗೆ ಹಿಡಿದುಕೊಟ್ಟರೆ ನಿಮಗೆ ಒಂದು ಲಕ್ಷ ಹಣ ಸಿಗುತ್ತದೆ ನಿಮಗೆ ಹೆಚ್ಚಿಗೆ ಹಣ ಬೇಕೆಂದರೆ ನನ್ನನ್ನು ಅವರಿಗೆ ಒಪ್ಪಿಸಬಹುದು ಎನ್ನುತ್ತಾನೆ.

ನಗುತ್ತಲೇ ಆ ಹುಡುಗನ ತಲೆ ನೇವರಿಸಿದ ಆ ತಾಯಿ ಹುಡುಗನ ಕೆನ್ನೆಯ ಮೇಲೆ ಕೈಯಿಟ್ಟು ಮಗ! ನೀನು ನನಗೆ ಏನಾದರೂ ಸಹಾಯ ಮಾಡಲೇಬೇಕೆಂಬ ಮನಸ್ಸಿದ್ದರೆ! ನಾನು ಹೇಳಿದಂತೆ ಕೇಳು ಎಂದಳು. ಹಾಗೆಯೇ ಮಾತು ಮುಂದುವರಿಸಿ ಹೇಳಿದ ಆಕೆ, ಮುಂದೆ ಯಾವಾಗಲಾದರೂ ನೀವು ಇತ್ತ ಕಡೆ ಬಂದರೆ ಹಸಿವಿನಿಂದ ಬಳಲಬೇಡಿ. ರಾತ್ರಿ ನೀವಿಲ್ಲಿಗೆ ಬಂದಾಗ ನಾನು ನಿಮ್ಮ ಮುಖವನ್ನಷ್ಟೇ ನೋಡಿದೆ. ನಿಮ್ಮ ಹೊಟ್ಟೆ ನೋಡಲಿಲ್ಲ. ತಾಯಿಯಾದವಳು ಮೊದಲು ಮಕ್ಕಳ ಹೊಟ್ಟೆ ನೋಡುತ್ತಾಳೆ. ನಿನ್ನನ್ನು ಹಿಡಿದುಕೊಟ್ಟಾಗ ಅವರು ಕೊಡುವ ಲಕ್ಷಕ್ಕಿಂತ, ನೀನು ಉಂಡು ಉಬ್ಬಿದಾಗ ನನ್ನ ಎದೆ ತುಂಬುತ್ತದೆ. ಅದು ಈಗ ನೀನು ಕೊಟ್ಟಿರುವ ದುಡ್ಡಿಗಿಂತ ಮಿಗಿಲು. ಒಂದೊಮ್ಮೆ ಮತ್ತೆ ನೀವೆಲ್ಲ ಇಲ್ಲಿಗೆ ಬಂದರೆ ಅಷ್ಟು ಹೊತ್ತಿಗೆ ಹುಷಾರಾಗಿ ಆರೋಗ್ಯವಂತನಾಗುವ ನನ್ನ ಮಗನನ್ನೂ ನಿನ್ನ ಜೊತೆಗೇ ಕಳಿಸುವೆ. ಈ ನೆಲದ ಋಣ ತೀರಿಸುವೆ ಎನ್ನುತ್ತಾಳೆ. ತಕ್ಷಣವೇ ಆ ಹುಡುಗರ ಗುಂಪು ಆಕೆಯ ಪಾದಗಳ ಮೇಲೆ ತಮ್ಮ ತಲೆಯನಿಕ್ಕಿರುತ್ತವೆ. ಈ ಮಾತು ಕತೆಗಳೆಲ್ಲಾ ಯಾರನ್ನೋ ಮೆಚ್ಚಿಸಲಿಕ್ಕಾಗಿ ಒಪ್ಪಿಸಲಿಕ್ಕಾಗಿ ಬರೆದುದಲ್ಲ, ನಡೆದುದಲ್ಲ, ಇವತ್ತಿಗೂ ಚರಿತ್ರೆಯ ಪುಟ ಪುಟಗಳಲ್ಲಿ ದಾಖಲಾದ ಈ ನೆಲದ ಒಡಲು, ದೇಸೀ ಜಗತ್ತಿನ ಅಸಲೀಯತ್ತು. ಹೀಗೆ ಯಾರನ್ನೋ ಮೆಚ್ಚಿಸಲಿಕ್ಕೆ, ಒಪ್ಪಿಸಲಿಕ್ಕೆ ಅದು ಹುಟ್ಟಲೇ ಇಲ್ಲ.

ಸ್ವಾಭಾವಿಕವಾಗಿ ಹೂ ಅರಳಿದಂತೆ ಅರಳಿದ ಈ ದೇಸಿ ಬದುಕು ನಮ್ಮ ತಲೆಮಾರಿಗೇಕೆ ಆದರ್ಶವಾಗುವುದಿಲ್ಲ? ನಮ್ಮ ಸಾಮಾಜಿಕ ಸಂದರ್ಭಗಳಲ್ಲೇಕೆ ಘಟಿಸುವುದಿಲ್ಲ? ಇದೇ ಉತ್ತರವಿಲ್ಲದ ಪ್ರಶ್ನೆ. ನಮ್ಮ ಸಾಮಾಜಿಕ ಸಂದರ್ಭ ಈ ದೇಸೀ ಜಗತ್ತಿನಿಂದ ಆಚೆ ಬಂದು ಆಧುನಿಕ ಭಾರತಕ್ಕೆ ಭಾಷ್ಯ ಬರೆಯುತ್ತೇನೆಂದು ಹೊರಟಿದೆಯಲ್ಲ! ಅದರ ನಿಜವಾದ ಸ್ವರೂಪವೇನು ಗೊತ್ತ? ಎದುರಿಗಿರುವ ಸಮಾಜ, ಎದುರಿಗಿರುವ ಜಾತಿ, ಎದುರಿಗಿರುವ ವ್ಯಕ್ತಿ, ಎದುರಿಗಿರುವ ವ್ಯವಸ್ಥೆಯನ್ನು ಮೆಚ್ಚಿಸಲಿಕ್ಕಾಗಿಯೇ ಮಾತಾಡುವ ಲೆಕ್ಕಾಚಾರದ ಮಾತುಗಳು. ಎದುರಿಗಿರುವವರನ್ನು ಒಪ್ಪಿಸಲಿಕ್ಕಾಗಿಯೇ ಬಳಸುವ ಅರ್ಥವಾಗುವ ಕಣ್ಸನ್ನೆಗಳು, ಎದೆಯೊಳಗಿನ ಭಾವನೆಗಳನ್ನು ಅದುಮಿಟ್ಟು ಮುಖದಲ್ಲಿ ತಮಗೆ ಬೇಕಾದ ಅಭಿವ್ಯಕ್ತಿಯನ್ನು ಕೊಡುವ ನವ ನಾಗರಿಕತೆ. ಈ 'ಧರಣಿ ಮಂಡಲ ಮಧ್ಯದೊಳಗೆ' – ನಮ್ಮ ಪರಂಪರೆಯಲ್ಲಿ ಒಂದು ದೇಸೀ ಜಗತ್ತಿತ್ತು. ಅಲ್ಲಿ ದೇಸೀ ಚಿಂತನೆಗಳಿದ್ದವು. ಆಹಾರ–ವಿಹಾರ, ಆಚಾರ–ವಿಚಾರಗಳಿದ್ದವು. ಅಲ್ಲಿ ಎಲ್ಲರೂ ಎಲ್ಲರಿಗಾಗಿ, ಎಲ್ಲರಿಗಾಗಿ ಎಲ್ಲರೂ ಮಾನಸಿಕವಾಗಿ ಜೊತೆಯಾಗಿದ್ದರು. ಯಾರನ್ನೋ ಮೆಚ್ಚಿಸಲಿಕ್ಕಾಗಿ, ಯಾರನ್ನೋ ಒಪ್ಪಿಸಲಿಕ್ಕಾಗಿಯೇ ಯಾರೂ ಮಾತಾಡುತ್ತಿರಲಿಲ್ಲ. ಇವತ್ತೇಕೋ ಆ ದೇಸೀ ಜಗತ್ತು ನೆನಪಾಯಿತು ಅಷ್ಟೆ. ಟಿ.ವಿ. ಸ್ವಿಚ್ ಆಫ್ ಮಾಡಿ ಟೇಬಲ್ಲಿನ ಕಡೆಗೆ ಕಣ್ಣಾಯಿಸಿದೆ. ಕುವೆಂಪು ಅವರ 'ಭಾರತ ಜನನಿಯ ತನುಜಾತೆ ಜಯಹೇ ಕರ್ನಾಟಕ ಮಾತೆ' ಎಂಬ ಸಾಲುಗಳು ಪುಸ್ತಕದ ಪುಟಗಳಲ್ಲಿ ಪಟಪಟ ಬಡಿಯುತ್ತಿತ್ತು. ಓದುತ್ತಿರುವ ನಿಮಗೂ ಕಿವಿಯಲ್ಲಿ ಅದೇ ಸಾಲುಗಳು ಕೇಳುತ್ತಿರಬೇಕು ಅಲ್ಲವೇ? ಏನಂತೀರಿ?



15ನೇ ವಿಧಾನಸಭೆ ಸದಸ್ಯರ ಫೋಟೋ ಸೆಷನ್ ಸೋಮವಾರ ವಿಧಾನಸೌಧದ ಮುಂಭಾಗ ನಡೆಯಿತು. ವಿಧಾನಸಭಾಧ್ಯಕ್ಷ ವಿಶ್ವೇಶ್ವರ ಹೆಗ್ಡೆ ಕಾಗೇರಿ, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ವಿಪಕ್ಷ ನಾಯಕ ಸಿದ್ದರಾಮಯ್ಯ, ಮಾಜಿ ಮುಖ್ಯಮಂತ್ರಿಗಳಾದ ಬಿ.ಎಸ್. ಯಡಿಯೂರಪ್ಪ, ಜಗದೀಶ್ ಶೆಟ್ಟರ್ ಸೇರಿದಂತೆ ಶಾಸಕರನ್ನೊಳಗೊಂಡ ಫೋಟೋ ಶೂಟ್. ಅಚ್ಚರಿಯ ಸಂಗತಿಯೆಂದರೆ ಕೆಲವೇ ದಿನಗಳಲ್ಲಿ ನಡೆಯಲಿರುವ ವಿಧಾನಸಭಾ 'ಚುನಾವಣಾ ಜ್ವರ'ದ ಪರಿಣಾಮ ಬಹುತೇಕ ಶಾಸಕರು ಗೈರಾಗಿದ್ದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: mysoorumithra@gmail.com For advertisements: mysoorumithra@gmail.com

ಡೆವಲಪರ್ ನೌಕರರ ಅಕ್ರಮ ಗೃಹ ಬಂಧನ; ಕೊಲೆ ಬೆದರಿಕೆ ಆರೋಪ

ಶ್ರೀರಾಂಪುರ ಸೇಂಟ್ ರೊಸೆಲೋ ಶಾಲೆ ಸಿಬ್ಬಂದಿ ವಿರುದ್ಧ ಪ್ರಕರಣ ದಾಖಲು

ಕ್ರೈಂ ಬಾಕ್ಸ್

ಮೈಸೂರು, ಫೆ. 20– ಕಟ್ಟಡ ಕಾಮಗಾರಿ ಪೂರ್ಣಗೊಳಿಸಲು ಬಂದ ಬೆಂಗಳೂರಿನ ಖಾಸಗಿ ಡೆವಲಪರ್‌ನ ನೌಕರರನ್ನು ಅಕ್ರಮ ಗೃಹಬಂಧನದಲ್ಲಿಟ್ಟು, ಕೊಲೆ ಬೆದರಿಕೆ ಹಾಕಿದ ಆರೋಪದ ಮೇರೆಗೆ ಮೈಸೂರಿನ ಶ್ರೀರಾಂಪುರ 2ನೇ ಹಂತದಲ್ಲಿರುವ ಸೇಂಟ್ ರೊಸೆಲೊ ಶಾಲೆಯ ಸಿಸ್ಟರ್‌ಗಳು ಸೇರಿದಂತೆ 10 ಮಂದಿ ವಿರುದ್ಧ ಪ್ರಕರಣ ದಾಖಲಾಗಿದೆ.

ಶಾಲೆಯ ಸಿಸ್ಟರ್‌ಗಳಾದ ಮಾರ್ಗರೇಟ್, ವಿನೀತ, ಸಿವರ್ ಫ್ರಾನ್ಸಿ ಮತ್ತು ಹೆಚ್.ಆರ್. ಶರತ್, ವಿ. ನೂತನ್, ನಂದೀಶ್, ಹರೀಶ್, ಮಹಮ್ಮದ್ ಆಸೀಫ್, ಜೀಜು, ಅಶೋಕ ಆರೋಪಕ್ಕೆ ಗುರಿಯಾಗಿರುವವರು.

ವಿವರ: ಈ ಶಾಲೆಯ ಕಟ್ಟಡ ಕಾಮಗಾರಿ ಶೇ. 80ರಷ್ಟು ಮುಕ್ತಾಯವಾಗಿದ್ದು, ಬಾಕಿ ಉಳಿದಿರುವ ಕೆಲಸ ಮಾಡಲು ಬೆಂಗಳೂರಿನ ಎಲೆಕ್ಟ್ರಾನಿಕ್ ಸಿಟಿಯಲ್ಲಿರುವ ಗಾಡ್‌ವುಡ್ ಡೆವಲಪರ್ಸ್ ಕಂಪನಿಯ ಮ್ಯಾನೇಜಿಂಗ್ ಡೈರೆಕ್ಟರ್ ಶಾಬು ರವೀಂದ್ರನ್ ಅವರು ತಮ್ಮ ಸಂಸ್ಥೆ ನೌಕರರಾದ ಬಿ. ಕೇಶವ ರಾಜ್, ಅನೂಪ್, ವೀರೇಂದ್ರ ಪೂಜಾರ್ ಮತ್ತು ನಳಿನ್ ಅವರನ್ನು ಫೆಬ್ರವರಿ 11ರಂದು ಕಳುಹಿಸಿದ್ದರು. ಈ ವೇಳೆ ಮೇಲಿನ ಎಲ್ಲಾ ಆರೋಪಿಗಳು ಸೇರಿ ನೌಕರರನ್ನು ಅಂದು ಬೆಳಗ್ಗೆ 9.30ರಿಂದ ರಾತ್ರಿ 7 ಗಂಟೆವರೆಗೆ ಲಾಕ್ ಮಾಡಿ ಅಕ್ರಮ ಬಂಧನದಲ್ಲಿಟ್ಟು, ಸ್ಟೋರ್ ಮೆಟೀರಿಯಲ್‌ಗಳನ್ನು ಅಕ್ರಮವಾಗಿ ಪಡೆದುಕೊಂಡಿದ್ದಾರೆ. ಈ ನೌಕರರಿಂದ ಕೆಲವು ದಾಖಲಾತಿಗಳಿಗೆ ಒತ್ತಾಯಪೂರ್ವಕವಾಗಿ ಸಹಿ ಪಡೆದದ್ದಲ್ಲದೇ, ಅವರ ಮೇಲೆ ಹಲ್ಲೆ ನಡೆಸಿ ಕೊಲೆ ಬೆದರಿಕೆ ಹಾಕಿದ್ದಾರೆ ಎಂದು ಸಾಬು ರವೀಂದ್ರನ್ ನೀಡಿದ ದೂರನ್ನು ನ್ಯಾಯಾಲಯದ ಅನುಮತಿ ಮೇರೆಗೆ ದಾಖಲಿಸಿಕೊಂಡಿರುವ ಅಶೋಕಪುರಂ ಠಾಣೆ ಪೊಲೀಸರು, ತನಿಖೆ ಮುಂದುವರೆಸಿದ್ದಾರೆ.

ಬಸ್‌ನಲ್ಲಿ ಮಹಿಳೆ ಸರ ಕಳವು



ಮೈಸೂರು, ಫೆ. 20–ಬಸ್ ಹತ್ತುತ್ತಿದ್ದ ವೇಳೆ ನೂಕುನುಗ್ಗಲಿನಲ್ಲಿ ಗೃಹಿಣಿಯ ವ್ಯಾನಿಟಿ ಬ್ಯಾಗ್‌ನಲ್ಲಿದ್ದ ಚಿನ್ನದ ಸರ ಕಳವು ಮಾಡಿರುವ ಘಟನೆ ಮೈಸೂರು ನಗರ ಬಸ್ ನಿಲ್ದಾಣದಲ್ಲಿ ನಡೆದಿದೆ. ಮೈಸೂರು ತಾಲೂಕು ದೂರ ಗ್ರಾಮದ ವಿಜಯ(50) ಸರ ಕಳೆದುಕೊಂಡವರಾಗಿದ್ದು, ಇವರು ಫೆಬ್ರವರಿ 16ರಂದು ತಿ.ನರಸೀಪುರದಲ್ಲಿ ನಡೆದ ತನ್ನ ಸಹೋದರಿಯ ಮಗಳ ಮದುವೆಗೆ ಹೋಗಿದ್ದು, ಅಂದು ಸಂಜೆ 4 ಗಂಟೆ ಸಮಯದಲ್ಲಿ ದೂರ ಗ್ರಾಮಕ್ಕೆ ಹೋಗಲು ಮೈಸೂರು ನಗರ ಬಸ್ ನಿಲ್ದಾಣದಲ್ಲಿ ಬಸ್ ಹತ್ತುತ್ತಿದ್ದಾಗ ನೂಕುನುಗ್ಗಲಿನಲ್ಲಿ ಇವರ ವ್ಯಾನಿಟಿ ಬ್ಯಾಗ್‌ಗೆ ಯಾರೋ ಕೈ ಹಾಕಿದಂತೆ ಅನುಭವವಾಗಿದೆ. ತಕ್ಷಣವೇ ಅವರು ಬ್ಯಾಗ್ ನೋಡಿದಾಗ ಅದರಲ್ಲಿದ್ದ 45 ಗ್ರಾಂ ತೂಕದ ಚಿನ್ನದ ಸರ ಕಳುವಾಗಿರುವುದು ಗೊತ್ತಾಗಿದೆ. ಈ ವೇಳೆ ಇವರ ಪಕ್ಕದಲ್ಲೇ ನಿಂತಿದ್ದ ಅಪರಿಚಿತ ಮಹಿಳೆಯನ್ನು ಪ್ರಶ್ನಿಸಿದಾಗ ಆಕೆ ಸಮಂಜಸವಾಗಿ ಉತ್ತರ ನೀಡಿಲ್ಲ ಎನ್ನಲಾಗುತ್ತಿದ್ದು, ಅಪರಿಚಿತ ಮಹಿಳೆಯ ಮೇಲೆ ಸಂಶಯ ವ್ಯಕ್ತಪಡಿಸಿ ವಿಜಯ ಅವರು ಫೆಬ್ರವರಿ 17ರಂದು ನೀಡಿದ ದೂರನ್ನು ದಾಖಲಿಸಿಕೊಂಡಿರುವ ದೇವರಾಜ ಠಾಣೆ ಪೊಲೀಸರು, ತನಿಖೆ ಮುಂದುವರೆಸಿದ್ದಾರೆ.

ಜಾತ್ರೆಯಲ್ಲಿ ಗೃಹಿಣಿ ಸರ ಕಳವು

ನಂಜನಗೂಡು, ಫೆ.20–ಜಾತ್ರೆಯ ಜನಸಂದಣಿಯಲ್ಲಿ ಗೃಹಿಣಿಯ ಚಿನ್ನದ ಸರ ಕಳುವು ಮಾಡಿರುವ ಘಟನೆ ನಂಜನಗೂಡು ತಾಲೂಕು ಗೋಣಹಳ್ಳಿ ಗ್ರಾಮದ ಮಾರಮ್ಮ ದೇವಸ್ಥಾನದಲ್ಲಿ ನಡೆದಿರುವುದು ತಡವಾಗಿ ವರದಿಯಾಗಿದೆ.

ಮೈಸೂರಿನ ಜೆ.ಪಿ.ನಗರ ನಿವಾಸಿ ಲಕ್ಷ್ಮಮ್ಮ (68) ಸರ ಕಳೆದುಕೊಂಡವರಾಗಿದ್ದು, ಇವರು ಫೆಬ್ರವರಿ 13ರಂದು ಕುಟುಂಬ ಸಮೇತರಾಗಿ ಗೋಣಹಳ್ಳಿ ಗ್ರಾಮದ ಮಾರಮ್ಮ ಜಾತ್ರೆಗೆ ತೆರಳಿದ್ದರು. ಜನಸಂದಣಿ ನಡುವೆ ದೇವಸ್ಥಾನದ ಒಳಗೆ ಹೋಗಿ ಹೊರ ಬರುವಷ್ಟರಲ್ಲಿ ಇವರ ಕತ್ತಿನಲ್ಲಿದ್ದ 32 ಗ್ರಾಂ ತೂಕದ ಚಿನ್ನದ ಸರವನ್ನು ಕಳವು ಮಾಡಲಾಗಿದೆ. ಈ ಸಂಬಂಧ ಫೆಬ್ರವರಿ 17ರಂದು ಪ್ರಕರಣ ದಾಖಲಿಸಿಕೊಂಡಿರುವ ಬಿಳಿಗೆರೆ ಠಾಣೆ ಪೊಲೀಸರು ತನಿಖೆ ಮುಂದುವರೆಸಿದ್ದಾರೆ.

ಕಾರಿನ ಗಾಜು ಒಡೆದು ಚಿನ್ನಾಭರಣ, ನಗದು ಕಳವು

ಮೈಸೂರು, ಫೆ. 20–ಕಾರಿನ ಗಾಜು ಒಡೆದು ಚಿನ್ನಾಭರಣ ಹಾಗೂ ನಗದು ಕಳವು ಮಾಡಿರುವ ಘಟನೆ ಮೈಸೂರಿನ ಚಾಮುಂಡಿಬೆಟ್ಟದ ತಪ್ಪಲಿನ ಉತ್ತನಹಳ್ಳಿ ಗ್ರಾಮದ ಶ್ರೀ ತ್ರಿಪುರ ಸುಂದರಿ ದೇವಸ್ಥಾನದ ಬಳಿ ನಡದಿದೆ.

ಬೆಂಗಳೂರಿನ ಕಮಲಾನಗರ ನಿವಾಸಿ ಶರತ್ ಕುಮಾರ್(34) ಚಿನ್ನಾಭರಣ ಕಳೆದುಕೊಂಡವರಾಗಿದ್ದು, ಇವರು ಕುಟುಂಬ ಸಮೇತರಾಗಿ ತ್ರಿಪುರ ಸುಂದರಿ ದೇವಸ್ಥಾನದ ಬಳಿ ನಡೆದ ತಮ್ಮ ಸಹೋದರಿ ಕಾವ್ಯ ಅವರ ಪುತ್ರಿಯ ಹುಟ್ಟುಹಬ್ಬಕ್ಕೆ ಸ್ವಿಫ್ಟ್ ಕಾರ್‌ನಲ್ಲಿ (ಕೆಎ 04–ಎಂಎಲ್ 0306) ಫೆಬ್ರವರಿ 17ರಂದು ಬೆಳಗ್ಗೆ ಆಗಮಿಸಿದ್ದು, ದೇವಸ್ಥಾನದ ಮುಂಭಾಗ ಕಾರು ನಿಲ್ಲಿಸಿ ದೇವಸ್ಥಾನದಲ್ಲಿ ದೇವರ ದರ್ಶನ ಮಾಡಿದ ನಂತರ ಕಾರಿನಲ್ಲಿ ಯಾವುದೋ ವಸ್ತು ತೆಗೆದುಕೊಳ್ಳಲು ಮಧ್ಯಾಹ್ನ 1 ಗಂಟೆ ಸುಮಾರಿಗೆ ಬಂದಾಗ ದುಷ್ಕರ್ಮಿಗಳು ಕಾರಿನ ಹಿಂಬದಿಯ ಗಾಜನ್ನು ಒಡೆದು ಕಾರಿನ ಸೀಟ್ ಮೇಲೆ ವ್ಯಾನಿಟಿ ಬ್ಯಾಗ್‌ನಲ್ಲಿದ್ದ 23 ಗ್ರಾಂ ತೂಕದ ಚಿನ್ನಾಭರಣ, 25 ಸಾವಿರ ರೂ. ನಗದು ಮತ್ತು ಮೊಬೈಲ್ ಕಳವು ಮಾಡಿರುವುದು ಗೊತ್ತಾಗಿದೆ. ಈ ಸಂಬಂಧ ಮೈಸೂರು ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಚಾಲಕನ ಮೇಲೆ ಹಲ್ಲೆ ನಡೆಸಿ ಆಟೋ, ಮೊಬೈಲ್ ಕಿತ್ತುಕೊಂಡು ಪರಾರಿಯಾದ ದುಷ್ಕರ್ಮಿಗಳು



ನಂಜನಗೂಡು, ಫೆ. 20– ದುಷ್ಕರ್ಮಿಗಳು ಆಟೋ ಚಾಲಕನ ಮೇಲೆ ಹಲ್ಲೆ ನಡೆಸಿ ಆತನ ಆಟೋ ಮತ್ತು ಮೊಬೈಲ್ ಕಿತ್ತುಕೊಂಡು ಹೋದ ಘಟನೆ ನಂಜನಗೂಡು ತಾಲೂಕು ನಗರ್ಲೆ ಗ್ರಾಮದ ಚಾನೆಲ್ ಏರಿ ಬಳಿ ನಡೆದಿದೆ.

ತಿ.ನರಸೀಪುರ ಪಟ್ಟಣದ ಆಟೋ ಚಾಲಕ ಶ್ರೀಧರ್(22) ಆಟೋ ಕಳೆದುಕೊಂಡವರಾಗಿದ್ದು, ಫೆಬ್ರವರಿ 16ರಂದು ರಾತ್ರಿ 9.45ರ ಸುಮಾರಿನಲ್ಲಿ ತಿ.ನರಸೀಪುರದ ಖಾಸಗಿ ಬಸ್ ನಿಲ್ದಾಣದ ಬಳಿ ಇವರು ಆಟೋ ನಿಲ್ಲಿಸಿಕೊಂಡು ಬಾಡಿಗೆಗಾಗಿ ಕಾಯುತ್ತಿದ್ದಾಗ ಅಲ್ಲಿಗೆ ಬಂದ ಇಬ್ಬರು ದುಷ್ಕರ್ಮಿಗಳು ಬಿಳಿಗೆರೆ ಗ್ರಾಮಕ್ಕೆ ಹೋಗಬೇಕೆಂದು 350 ರೂ. ಬಾಡಿಗೆ ಮಾತನಾಡಿಕೊಂಡು ಕರೆದೊಯ್ದಿದ್ದಾರೆ. ಬಿಳಿಗೆರೆ ಗ್ರಾಮಕ್ಕೆ ಹೋದ ನಂತರ ಆಟೋವನ್ನು ಹಲವು ಕಡೆ ಸುತ್ತಾಡಿಸಿ ಕೊನೆಗೆ ನಗರ್ಲೆ ಗ್ರಾಮದ ಚಾನೆಲ್ ಏರಿ ಬಳಿ ಆಟೋ ಚಾಲಕನ ಮೇಲೆ ಹಲ್ಲೆ ನಡೆಸಿ, ಆತನ ಬಳಿ ಇದ್ದ ಮೊಬೈಲ್, 700 ರೂ. ನಗದು ಮತ್ತು ಆಟೋ (ಕೆಎ 01–ಸಿ 3756) ಕಿತ್ತುಕೊಂಡು ಪರಾರಿಯಾಗಿದ್ದಾರೆ. ಈ ಸಂಬಂಧ ಬಿಳಿಗೆರೆ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಬೇರೊಬ್ಬ ವ್ಯಕ್ತಿ ಮೂಲಕ ಭೂಮಿ ಖುಲಾಸೆ ಪತ್ರ

ನಾಗರಿಕ ರಕ್ಷಣಾ ಇಲಾಖೆ ನಿವೃತ್ತ ನೌಕರರಿಗೆ ವಂಚನೆ: ಪ್ರಕರಣ ದಾಖಲು

ಪಿರಿಯಾಪಟ್ಟಣ, ಫೆ. 20– ನಾಗರಿಕ ರಕ್ಷಣಾ ಇಲಾಖೆಯ ನಿವೃತ್ತ ನೌಕರರೊಬ್ಬರ ಜಮೀನನ್ನು ಬೇರೊಬ್ಬ ವ್ಯಕ್ತಿಯನ್ನು ಮುಂದಿಟ್ಟುಕೊಂಡು ಹಕ್ಕು ಖುಲಾಸೆ ಪತ್ರ ನೋಂದಣಿ ಮಾಡಿಕೊಳ್ಳುವ ಮೂಲಕ ಕಬಳಿಸಿರುವ ಬಗ್ಗೆ ಪ್ರಕರಣ ದಾಖಲಾಗಿದೆ. ಬೆಂಗಳೂರಿನ ರಾಜಾಜಿನಗರದಲ್ಲಿ ವಾಸವಿರುವ ನಾಗರಿಕ ರಕ್ಷಣಾ ಇಲಾಖೆ ನಿವೃತ್ತ ನೌಕರ ಬಿ.ಎಸ್. ಸುಬ್ರಾಮಯ್ಯ(85) ವಂಚನೆಗೊಳಗಾದವರಾಗಿದ್ದು, ಪಿರಿಯಾಪಟ್ಟಣ ತಾಲೂಕು ಮರಡಿಯೂರು ಗ್ರಾಮದ ಗಣೇಶ್ ಎಂಬಾತನ ಪತ್ನಿ ಜಯಮ್ಮ ಮತ್ತು ಮುರುಗೇಶ್ ಆರೋಪಕ್ಕೆ ಗುರಿಯಾಗಿರುವವರು.

ವಿವರ: ಬಿ.ಎಸ್.ಸುಬ್ರಾಮಯ್ಯ ಅವರು 1971ರ ನವೆಂಬರ್ 28ರಂದು ಪಿರಿಯಾಪಟ್ಟಣ ತಾಲೂಕು ಮರಡಿಯೂರು ಗ್ರಾಮದ ಸರ್ವೇ ನಂಬರ್ 51/2ರಲ್ಲಿ 4.20 ಎಕರೆ ಸರ್ಕಾರಿ ಜಮೀನನ್ನು ಹರಾಜಿನ ಮೂಲಕ ಖರೀದಿಸಿದ್ದು, ಅಂದಿನ ತಹಸೀಲ್ದಾರರು ಸರ್ಕಾರದ ಪರವಾಗಿ ಇವರಿಗೆ ಸದರಿ ಜಮೀನನ್ನು ಮಂಜೂರು ಮಾಡಿದ್ದರು. ನಂತರ ಅದೇ ವರ್ಷ ಸುಬ್ರಾಮಯ್ಯ ಅವರ ಹೆಸರಿಗೆ ಜಮೀನು ಖಾತೆಯೂ ಆಗಿದೆ.

ಆದರೆ, ಮರಡಿಯೂರು ಗ್ರಾಮದ ಜಯಮ್ಮ ಮತ್ತು ಮುರುಗೇಶ್ ಅವರು ನಕಲಿ ವ್ಯಕ್ತಿ ಯೋರ್ವನನ್ನು 2015ರ ಡಿಸೆಂಬರ್ 8ರಂದು ಬೆಟ್ಟದಪುರದ ಸಬ್‌ರಿಜಿಸ್ಟ್ರಾರ್ ಕಚೇರಿಗೆ ಕರೆ ದೊಯ್ದು ಆತನನ್ನು ಮಾಣಿಕಯ್ಯ ಅಲಿಯಾಸ್ ಬಿ.ಎಸ್. ಸುಬ್ರಾಮಯ್ಯ ಎಂದು ತಿಳಿಸಿ ಆತನಿಂದ ಸದರಿ ಜಮೀನಿನ ಹಕ್ಕು ಖುಲಾಸೆ ಪತ್ರ ಮಾಡಿಸಿಕೊಂಡಿದ್ದಾರೆ. ಇದರ ಆಧಾರದ ಮೇರೆಗೆ ಅವರ ಹೆಸರಿಗೆ ಖಾತೆಯೂ ಕೂಡ ವರ್ಗಾವಣೆಯಾಗಿದ್ದು, ಸುಬ್ರಾಮಯ್ಯ ಅವರು ತಮ್ಮ ಜಮೀನಿನ ಬಳಿಗೆ ಹೋದಾಗ ಅವರಿಗೆ ಜೀವ ಬೆದರಿಕೆ ಹಾಕಲಾಗಿದೆ ಎಂದು ದೂರಿನಲ್ಲಿ ತಿಳಿಸಲಾಗಿದೆ. ನ್ಯಾಯಾಲಯದ ಆದೇಶದ ಮೇರೆಗೆ ಬೆಟ್ಟದಪುರ ಠಾಣೆ ಪೊಲೀಸರು ಈ ಸಂಬಂಧ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸುತ್ತಿದ್ದಾರೆ.

ಮೈಸೂರು ಸಮಗ್ರ ಅಭಿವೃದ್ಧಿಗೆ ಬಜೆಟ್‌ನಲ್ಲಿ ಅಧಿಕ ಅನುದಾನ

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಕಳಕಳಿ ಕೊಂಡಾಡಿದ ಸಂಸದ ಪ್ರತಾಪಸಿಂಹ

- ಯಡಿಯೂರಪ್ಪ ಅವಧಿಯಲ್ಲೂ ಮೈಸೂರಿನ ಬಗ್ಗೆ ಕಾಳಜಿ; ಕಿದ್ವಾಯಿ ಘಟಕ ಮಂಜೂರು
- ಬಿಜೆಪಿ ಸರ್ಕಾರದಿಂದ ಕಾನೂನು ಸುವ್ಯವಸ್ಥೆಗೆ ಆದ್ಯತೆ; ಪಿಎಫ್ಐ ರದ್ಧತಿ ದೃಢ ನಿರ್ಧಾರ



ಮೈಸೂರು,ಫೆ.20(ಎಂಟಿವೈ)– ಪ್ರಸಕ್ತ ಸಾಲಿನ ಬಜೆಟ್‌ನಲ್ಲಿ ಹಿಂದೆಂದಿಗಿಂತಲೂ ಹೆಚ್ಚು ಅನುದಾನ ಮೈಸೂರಿನ ಅಭಿವೃದ್ಧಿಗೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ನೀಡಿದ್ದು, ಇದರಿಂದ ಮೈಸೂರು ನಗರ ಸಮಗ್ರ ಅಭಿವೃದ್ಧಿ ಕಾಣಲಿದೆ ಎಂದು ಸಂಸದ ಪ್ರತಾಪಸಿಂಹ ಅಭಿಪ್ರಾಯಪಟ್ಟಿದ್ದಾರೆ.

ಮೈಸೂರಿನ ಬಿಜೆಪಿ ಕಚೇರಿಯಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕೇಂದ್ರ ಹಾಗೂ ರಾಜ್ಯದ ಡಬಲ್ ಇಂಜಿನ್ ಸರ್ಕಾರಗಳು ಅಭಿವೃದ್ಧಿಗೆ ಹೆಚ್ಚು ಆದ್ಯತೆ ನೀಡುತ್ತಿವೆ. ಹಿಂದೆ ಯಾವುದಾದರೂ ಯೋಜನೆ ಘೋಷಣೆಯಾಗಬೇಕಾದರೆ, ಹೊಸ ರೈಲು ಸಂಚರಿಸಬೇಕಾದರೆ ಬಜೆಟ್‌ಗಾಗಿ ಕಾಯಬೇಕಾಗಿತ್ತು. ಆದರೆ, ಕಳೆದ 9 ವರ್ಷಗಳಿಂದ ಆ ಪರಿಸ್ಥಿತಿ ಬದಲಾಗಿದೆ. ಕೇಂದ್ರ ಸರ್ಕಾರ ರೈಲ್ವೆ ಯೋಜನೆಗಳಿಗೆ 7561 ಕೋಟಿ ರೂ. ಮೀಸಲಿಟ್ಟಿದೆ. ಚುನಾವಣೆ ದೃಷ್ಟಿಯಲ್ಲಿಟ್ಟುಕೊಂಡು ಯೋಜನೆಗಳನ್ನು ಜಾರಿ ಮಾಡದೆ ನಿರಂತರವಾಗಿ ಅಭಿವೃದ್ಧಿ ಕೆಲಸಗಳನ್ನು ನಮ್ಮ ಸರ್ಕಾರಗಳು ಮಾಡುತ್ತಿವೆ ಎಂದರು.

ಇದುವರೆಗೆ ಭದ್ರಾ ಮೇಲ್ದಂಡೆ ಯೋಜನೆ ಜಾರಿಗೆ ಯಾವ ಸರ್ಕಾರವೂ ಇಚ್ಛಾಸಕ್ತಿ ಪ್ರದರ್ಶಿಸಿರಲಿಲ್ಲ. ಸಿಎಂ ಬೊಮ್ಮಾಯಿ ಪ್ರಸ್ತಾವನೆ ಸಲ್ಲಿಸಿ ಕೇಂದ್ರದಿಂದ 5300 ಕೋಟಿ ರೂ. ಘೋಷಣೆ ಮಾಡಿಸಿದ್ದಾರೆ. ರಾಜ್ಯದ ನೀರಾವರಿ ಸಮಸ್ಯೆ ಬಗೆಹರಿಸಲು ಪಣ ತೊಟ್ಟಿದ್ದಾರೆ. ಎಲ್ಲಾ ಸರ್ಕಾರಗಳು ಎಸ್ಸಿ, ಎಸ್ಟಿ ಜನಾಂಗಕ್ಕೆ ಮೀಸಲಾತಿ ಹೆಚ್ಚಿಸುವ ಭರವಸೆ ನೀಡುತ್ತಿದ್ದವು. ಬೊಮ್ಮಾಯಿಯವರು ಅದನ್ನು ನಿಜ ಮಾಡಿದ್ದಾರೆ. 10 ಲಕ್ಷ ಮಕ್ಕಳಿಗೆ ರೈತ ವಿದ್ಯಾನಿಧಿ ಯೋಜನೆಯಡಿ ವಿದ್ಯಾರ್ಥಿವೇತನ, ಗೃಹಿಣಿ ಶಕ್ತಿ ಯೋಜನೆಯಡಿ ಗೃಹಿಣಿಯರಿಗೆ ಮಾಸಿಕ 500 ರೂ, ಆಸಿಡ್ ದಾಳಿಗೊಳಗಾದವರಿಗೆ 10 ಸಾವಿರ ರೂ ಪಿಂಚಣಿ ಘೋಷಣೆ ಮಾಡಲಾಗಿದೆ 25 ಸಾವಿರ ಉದ್ಯೋಗ ಸೃಷ್ಟಿಗಾಗಿ ಟೆಕ್ಸ್‌ಟೈಲ್ ಮೆಗಾ ಕ್ಲಸ್ಟರ್, ಜವಳಿ ಪಾರ್ಕ್ ಮಾಡಲು ಕ್ರಮ ಕೈಗೊಳ್ಳಲಾಗಿದೆ ಎಂದು ತಿಳಿಸಿದರು.

ಮೈಸೂರಿಗೆ ಕೊಡುಗೆ: ಬಿ.ಎಸ್.ಯಡಿಯೂರಪ್ಪ ಸಿಎಂ ಆಗಿದ್ದಾಗ ಮೈಸೂರಿಗೆ ಕಿದ್ವಾಯಿ ಕ್ಯಾನ್ಸರ್ ಘಟಕ ಮಂಜೂರು ಮಾಡಿದ್ದರು. ಇದಕ್ಕಾಗಿ ಬಜೆಟ್‌ನಲ್ಲಿ 50 ಕೋಟಿ ಪ್ರಾರಂಭಿಕ ಮೊತ್ತ ಬಿಡುಗಡೆಯಾಗಿದ್ದು, ಶೀಘ್ರದಲ್ಲೇ ಭೂಮಿ ಪೂಜೆ ಮಾಡಲಾಗುವುದು. ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಮೈಸೂರಿನವರೇ ಆಗಿದ್ದರೂ ಕೆ.ಆರ್.ಆಸ್ಪತ್ರೆಗೆ ಅನುದಾನ ನೀಡಿರಲಿಲ್ಲ. ಆದರೆ ಬಿಜೆಪಿ ಸರ್ಕಾರ ಆಸ್ಪತ್ರೆ ನವೀಕರಣಕ್ಕೆ 89 ಕೋಟಿ ರೂ. ನೀಡಿದೆ. ವಿಮಾನ ನಿಲ್ದಾಣ ವಿಸ್ತರಣೆಗೆ 319 ಕೋಟಿ ರೂ. ಮೀಸಲಿಡಲಾಗಿದೆ. ಅದರಲ್ಲಿ 150 ಕೋಟಿ ರೂ. ಬಿಡುಗಡೆಯಾಗಿ ರೈತರಿಗೆ ನೀಡಲಾಗಿದೆ. ಐವಿಎಫ್ ಸೆಂಟರ್, ಟೌನ್‌ಶಿಪ್ ನಿರ್ಮಾಣ, ವರ್ಷದ 365 ದಿನವೂ ವಸ್ತುಪ್ರದರ್ಶನ ನಡೆಸಲು ಯೋಜನೆ ಸಿದ್ಧವಾಗಿದ್ದು, ಶೀಘ್ರದಲ್ಲೇ ಅನುಷ್ಠಾನಗೊಳ್ಳಲಿದೆ. ಫಿಲ್ಮ್‌ಸಿಟಿ ನಿರ್ಮಾಣಕ್ಕೂ ಸಕಾರಾತ್ಮಕ ಸ್ಪಂದನೆ ದೊರೆತಿದ್ದು, ಶೀಘ್ರದಲ್ಲೇ ಘೋಷಣೆಯಾಗಲಿದೆ ಎಂದು ಸ್ಪಷ್ಟಪಡಿಸಿದರು.

ಕಾನೂನು ಸುವ್ಯವಸ್ಥೆ ಕಾಪಾಡಲು ಕ್ರಮ: ಈ ಹಿಂದೆ ಮೈಸೂರಿನ ಕ್ಯಾತಮಾರನಹಳ್ಳಿಯಲ್ಲಿ ಬಿಜೆಪಿ ಕಾರ್ಯಕರ್ತ ರಾಜು ಹತ್ಯೆ ನಡೆದಿತ್ತು. ಆರೋಪಿ ಅಮಿದ್ ಪಾಷಾ ವಿರುದ್ಧ ಸರಿಯಾಗಿ ಚಾರ್ಜ್‌ಶೀಟ್ ಸಲ್ಲಿಸದ ಕಾರಣ ಆತ ಜೈಲಿನಿಂದ ಬಿಡುಗಡೆಯಾಗಿ ಹೊರಬಂದ. ಪಿಎಫ್‌ಐ, ಎಸ್‌ಡಿಪಿಐ ಕಾಯಕರ್ತರ ಮೇಲಿನ 175 ಪ್ರಕರಣಗಳನ್ನು ಹಿಂಪಡೆದರು. ಇದರಿಂದ ರಾಜ್ಯದಲ್ಲಿ ಸರಣಿ ಹತ್ಯೆಗಳಾದವು. ಹಿಂದೂ ಕಾರ್ಯಕರ್ತರ ಹತ್ಯೆಗೆ ಕಡಿವಾಣ ಹಾಕಲು ರಾಜ್ಯ ಸರ್ಕಾರದ ಮನವಿಯ ಮೇರೆಗೆ ಪಿಎಫ್‌ಐ ಅನ್ನು ಕೇಂದ್ರ ಸರ್ಕಾರ ನಿಷೇಧಿಸಿದೆ. ಇದರಿಂದ ಕಾನೂನು ಸುವ್ಯವಸ್ಥೆ ಕಾಪಾಡಲು ರಾಜ್ಯ ಸರ್ಕಾರ ದಿಟ್ಟ ಹೆಜ್ಜೆಯಿಟ್ಟಿದೆ ಎಂದರು.

ಸರ್ವಿಸ್ ರಸ್ತೆ ಬಳಿಕವೇ ಟೋಲ್ ಸಂಗ್ರಹ: ಸರ್ವಿಸ್ ರಸ್ತೆ ಮಾಡಿ ಬಳಿಕ ಟೋಲ್ ಸಂಗ್ರಹಿಸಿ ಎಂಬ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಹೇಳಿಕೆಗೆ ಪ್ರತಿಕ್ರಿಯಿಸಿದ ಅವರು, ಬೆಂಗಳೂರು–ಮೈಸೂರು ರಾಷ್ಟ್ರೀಯ ಹೆದ್ದಾರಿ ನಮ್ಮ ಸರ್ಕಾರದ ಕೊಡುಗೆ. ಒಂದು ತಿಂಗಳೊಳಗೆ ಕಾಮಗಾರಿ ಪೂರ್ಣಗೊಂಡು ಲೋಕಾರ್ಪಣೆಗೆ ಸಿದ್ಧವಾಗಲಿದೆ. ಹೆದ್ದಾರಿಯಲ್ಲಿ 2 ಪಥದ ಸರ್ವೀಸ್ ರಸ್ತೆ ಮಾಡಲಾಗಿದೆ. ಅದನ್ನು ಸಾರ್ವಜನಿಕರ ಸೇವೆಗೆ ನೀಡಿದ ಬಳಿಕವೇ ಟೋಲ್ ಸಂಗ್ರಹ ಮಾಡಲಾಗುತ್ತದೆ. ಎಲ್ಲರಿಗೂ ರಸ್ತೆ ಅನುಕೂಲ ಆಗಬೇಕು. ನಮಗೆ ಎಲ್ಲರ ಬಗ್ಗೆ ಕಾಳಜಿ ಇದೆ. ಕಾಂಗ್ರೆಸ್ ನಾಯಕರಿಗೆ ಬಡವರ ಮೇಲೆ ಕಾಳಜಿ ಇದ್ದರೆ ನಿಮ್ಮ ಸರ್ಕಾರ ಅಧಿಕಾರದಲ್ಲಿರುವಾಗ ನಿರ್ಮಾಣವಾದ ನಂಜನಗೂಡು ರಸ್ತೆಯಲ್ಲಿ ಸರ್ವೀಸ್ ರಸ್ತೆ ಯಾಕೆ ನಿರ್ಮಿಸಿಲ್ಲ? ಯಾಕೆ ಟೋಲ್ ಸಂಗ್ರಹಿಸುತ್ತಿದ್ದೀರಿ? ಮೊದಲು ಬೆಂಗಳೂರು–ಕನಕಪುರ ರಸ್ತೆ ಪೂರ್ಣಗೊಳಿಸಿ ಬಳಿಕ ಬಿಜೆಪಿ ಟೀಕಿಸಿ ಎಂದು ತಿರುಗೇಟು ನೀಡಿದರು.

ರೂಪ ಅವರ ಪ್ರಶ್ನೆ ನೈತಿಕವಾಗಿದೆ : ಐಎಎಸ್, ಐಪಿಎಸ್ ಅಧಿಕಾರಿಗಳ ಮೇಲೆ ರಾಜ್ಯ ಸರ್ಕಾರಕ್ಕೆ ನಿಯಂತ್ರಣ ಇಲ್ಲ ಎಂಬ ರಾಜ್ಯ ಕಾಂಗ್ರೆಸ್ ಉಸ್ತುವಾರಿ ರಣದೀಪ್‌ಸಿಂಗ್ ಸುರ್ಜೇವಾಲಾ ಹೇಳಿಕೆಗೆ ಪ್ರತಿಕ್ರಿಯಿಸಿ, ಹಾಸನದಲ್ಲಿ ಮಹಾಮಸ್ತಕಾಭಿಷೇಕ ಆದಾಗ ಯಾರ ಸರ್ಕಾರವಿತ್ತು? ರೋಹಿಣಿ ಸಿಂಧೂರಿ ಅವರು ಜಿಲ್ಲಾ ಉಸ್ತುವಾರಿ ಸಚಿವರಾಗಿದ್ದಾಗ ಎ.ಮಂಜು ಅವರೊಂದಿಗೆ ಬೀದಿ ರಂಪ ಆಗಿತ್ತು. ಮೈಸೂರಿನಲ್ಲಿ ರಶ್ಮಿ ಮಹೇಶ್ ಮೇಲೆ ಹಲ್ಲೆ ಮಾಡಿದಾಗ, ಜಿಲ್ಲಾಧಿಕಾರಿ ಸಿ. ಶಿಖಾ ಅವರನ್ನು ನಿಂದಿಸಿದಾಗ, ಡಿವೈಎಸ್‌ಪಿ ಗಣಪತಿ ಆತ್ಮಹತ್ಯೆ ಮಾಡಿಕೊಂಡಾಗ ರಾಜ್ಯದಲ್ಲಿ ಅಧಿಕಾರಿಗಳ ಸ್ಥಿತಿ ಏನಾಗಿತ್ತು? ಸಿಂಧೂರಿ ಅವರನ್ನು ತಲೆ ಮೇಲೆ ಕೂರಿಸಿಕೊಂಡವರು ಯಾರು? ರೂಪ ಎತ್ತಿರುವ ನೈತಿಕ, ಕಾನೂನಾತ್ಮಕ ಪ್ರಶ್ನೆಗಳಿಗೆ ಉತ್ತರ ಕಂಡುಕೊಳ್ಳಬೇಕು. ಪತ್ರಕರ್ತರು ಸತ್ಯಶೋಧ ಮಾಡಬೇಕು ಎಂದು ಮನವಿ ಮಾಡಿದರು.

ಸುದ್ದಿಗೋಷ್ಠಿಯಲ್ಲಿ ಮೈಸೂರು ನಗರ ಬಿಜೆಪಿ ಅಧ್ಯಕ್ಷ ಟಿ.ಎಸ್.ಶ್ರೀವತ್ಸ, ಗ್ರಾಮಾಂತರ ಅಧ್ಯಕ್ಷೆ ಮಂಗಳಾ ಸೋಮಶೇಖರ್, ವಕ್ತಾರ ಎಂ.ವಿ.ಮೋಹನ್, ಸಹ ವಕ್ತಾರ ಕೇಬಲ್ ಮಹೇಶ್, ಸಂಚಾಲಕ ಮಹೇಶ್ ರಾಜೇ ಅರಸ್, ಪ್ರದೀಪ್ ಕುಮಾರ್ ಇದ್ದರು.

ಅರ್ಧ ಹೆಲ್ಮೆಟ್ ವಿರುದ್ಧ ಮೈಸೂರಲ್ಲಿ ವಿಶೇಷ ಕಾರ್ಯಾಚರಣೆ ಆರಂಭ



ಮೈಸೂರು, ಫೆ.20(ಆರ್‌ಕೆ)–ಸುರಕ್ಷವಲ್ಲದ ಅರ್ಧ ಹೆಲ್ಮೆಟ್ (Half helmet) ಧರಿಸಿ ದ್ವಿಚಕ್ರ ವಾಹನ ಚಾಲನೆ ಮಾಡುವವರ ವಿರುದ್ಧ ಸಂಚಾರ ಪೊಲೀಸರು ಮೈಸೂರಲ್ಲಿ ಇಂದಿನಿಂದ ವಿಶೇಷ ಕಾರ್ಯಾಚರಣೆ ಆರಂಭಿಸಿದ್ದಾರೆ.

ಐಎಸ್‌ಐ ಮುದ್ರೆ ಇರುವ ಪೂರ್ಣ ಹೆಲ್ಮೆಟ್ ಮಾತ್ರ ಧರಿಸಬೇಕೆಂದು ಹಲವು ಭಾರೀ ಅರಿವು ಮೂಡಿಸಿದ್ದರೂ ಕೆಲವರು ಅರ್ಧ ಹೆಲ್ಮೆಟ್ ಅನ್ನೇ ಬಳಸುತ್ತಿರುವುದು ಕಂಡು ಬಂದ ಹಿನ್ನೆಲೆಯಲ್ಲಿ ಸಾರ್ವಜನಿಕರ ಪ್ರಾಣ ರಕ್ಷಿಸುವ ಉದ್ದೇಶದಿಂದ ಮೈಸೂರು ನಗರದಾದ್ಯಂತ ಎಲ್ಲಾ ಸಂಚಾರ ಠಾಣಾ ವ್ಯಾಪ್ತಿಗಳಲ್ಲಿ ಪೊಲೀಸರು ವಿಶೇಷ ಕಾರ್ಯಾಚರಣೆ ಆರಂಭಿಸಿದ್ದಾರೆ. ಇಂದು ಬೆಳಗ್ಗೆ 10.30 ಗಂಟೆಯಿಂದ ಸಂಜೆ 6 ಗಂಟೆವರೆಗೆ ದೇವರಾಜ, ಕೆಆರ್, ವಿವಿ ಪುರಂ, ಎನ್‌ಆರ್ ಹಾಗೂ ಸಿದ್ಧಾರ್ಥ ನಗರ ಸಂಚಾರ ಠಾಣೆ ಇನ್‌ಸ್ಪೆಕ್ಟರ್, ಸಬ್‌ಇನ್‌ಸ್ಪೆಕ್ಟರ್, ಎಎಸ್‌ಐಗಳು ಸಿಬ್ಬಂದಿಗಳ ನೆರವಿನೊಂದಿಗೆ ಎಲ್ಲಾ ಪ್ರಮುಖ ರಸ್ತೆ, ಜಂಕ್ಷನ್ ಸರ್ಕಲ್‌ಗಳಲ್ಲಿ ವಿಶೇಷ ಕಾರ್ಯಾಚರಣೆ ನಡೆಸಿ ಸುರಕ್ಷಿತವಲ್ಲದ ಅರ್ಧ ಹೆಲ್ಮೆಟ್ ಧರಿಸಿ ದ್ವಿಚಕ್ರ ವಾಹನ ಚಾಲಕರು, ಸವಾರರು ವಿರುದ್ಧ ಪ್ರಕರಣ ದಾಖಲಿಸಿ ಅವರಿಂದ 500 ರೂ. ದಂಡ ಸಂಗ್ರಹಿಸುತ್ತಿದ್ದಾರೆ.

ಹೆಲ್ಮೆಟ್ ಕಡ್ಡಾಯವಾಗಿರುವುದರಿಂದ ಕಾಟಾಚಾರಕ್ಕೆ ಸುರಕ್ಷಿತವಲ್ಲದ ಅರ್ಧ ಹೆಲ್ಮೆಟ್ ಹಾಕಿಕೊಂಡು ಓಡಾಡುತ್ತಿರುವವರ ಸಂಖ್ಯೆ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿರುವ ಹಿನ್ನೆಲೆಯಲ್ಲಿ ಪೊಲೀಸರು ವಿಶೇಷ ಕಾರ್ಯಾಚರಣೆ ನಡೆಸಿ 500 ರೂ ದಂಡ ವಸೂಲಿ ಮಾಡುತ್ತಿದ್ದಾರೆ. ಅಲ್ಲದೆ ಅದರಿಂದಾಗುವ ತೊಂದರೆ ಬಗ್ಗೆಯೂ ತಿಳಿ ಹೇಳಿ ತಕ್ಷಣವೇ ಐಎಸ್‌ಐ ಮಾರ್ಕ್ ಇರುವ ಪೂರ್ಣ ಹೆಲ್ಮೆಟ್ ಖರೀದಿಸಿ ಸುರಕ್ಷತೆಯಿಂದ ವಾಹನ ಚಾಲನೆ ಮಾಡುವಂತೆ ಸಲಹೆ ನೀಡುತ್ತಿದ್ದಾರೆ. ಕೆಲವರು ಪ್ಲಾಸ್ಟಿಕ್‌ನಲ್ಲಿ ಮಾಡಿದ ಟೋಪಿಯಾಕಾರದ ಹೆಲ್ಮೆಟ್ ಬಳಸುತ್ತಿದ್ದರೆ, ಇನ್ನೂ ಕೆಲವರು ಫುಟ್‌ಪಾತ್‌ನಲ್ಲಿ ಸಿಗುವ ಕಡಿಮೆ ಬೆಲೆಯ ಹೆಲ್ಮೆಟ್ ಧರಿಸಿ ದ್ವಿಚಕ್ರ ವಾಹನ ಚಾಲನೆ ಮಾಡುತ್ತಿದ್ದರಿಂದಾಗಿ ನಗರ ಪೊಲೀಸ್ ಆಯುಕ್ತ ಬಿ.ರಮೇಶ್ ಅವರ ನಿರ್ದೇಶನದಂತೆ ಇಂದಿನಿಂದ ಅರ್ಧ ಹೆಲ್ಮೆಟ್ ವಿರುದ್ಧ ಕಾರ್ಯಾಚರಣೆ ಆರಂಭಿಸಿದ್ದಾರೆ.

ಅದರ ಜೊತೆಗೆ ತ್ರಿಬಲ್ ರೈಡಿಂಗ್, ಮೊಬೈಲ್ ಬಳಕೆ, ಸೈಲೆನ್ಸರ್ ಬದಲಾಯಿಸಿಕೊಂಡು ಸಂಚರಿಸುವವರ ವಿರುದ್ಧವೂ ಸಂಚಾರ ಠಾಣೆ ಪೊಲೀಸರು ಪ್ರಕರಣ ದಾಖಲಿಸುತ್ತಿದ್ದಾರೆ.

ನಾಳೆಯಿಂದ ಗುಂಗ್ರಾಲ್ ಛತ್ರದ ಲಕ್ಷ್ಮೀದೇವಿ ಜಾತ್ರಾ ಮಹೋತ್ಸವ

ಮೈಸೂರು, ಫೆ. 20– ಮೈಸೂರು ತಾಲೂಕು ಗುಂಗ್ರಾಲ್ ಛತ್ರದ ಗ್ರಾಮ ದೇವತೆ ಲಕ್ಷ್ಮೀದೇವಿ ಜಾತ್ರಾ ಮಹೋತ್ಸವ ಬುಧವಾರ (ಫೆ. 22) ಮತ್ತು ಗುರುವಾರ (ಫೆ. 23) ನೆರವೇರಲಿದೆ.

ವಾಸ್ತವವಾಗಿ ಈ ಜಾತ್ರಾ ಮಹೋತ್ಸವ ಪ್ರತಿ ವರ್ಷ ಶಿವರಾತ್ರಿಯಂದು ನೆರವೇರುತ್ತಿತ್ತು. ಆದರೆ ಈ ಬಾರಿಯ ಶಿವರಾತ್ರಿ ಶನಿವಾರ ಬಂದಿದ್ದರಿಂದ, ಶಾಸ್ತ್ರೋಕ್ತವಾಗಿ ಬುಧವಾರವೇ ಜಾತ್ರಾ ಮಹೋತ್ಸವ ನೆರವೇರಬೇಕಾಗಿರುವುದರಿಂದ ಈ ಬುಧವಾರದಿಂದ ಜಾತ್ರೆ ನಡೆಯಲಿದೆ.

ಈ ಜಾತ್ರಾ ಮಹೋತ್ಸವದಲ್ಲಿ ಭಕ್ತಾದಿಗಳು ಪಾಲ್ಗೊಳ್ಳಲು ಅನುಕೂಲವಾಗುವಂತೆ ಇಲವಾಲದಿಂದ ಎರಡೂ ದಿನವೂ ಬಸ್ ವ್ಯವಸ್ಥೆ ಮಾಡಲಾಗಿದೆ ಎಂದು ಶಾಸಕ ಜಿ.ಟಿ. ದೇವೇಗೌಡರು ತಿಳಿಸಿದ್ದಾರೆ.

ನಾಳೆ ಕಾಯಕ ಶರಣರ ಜಯಂತಿ

ಮೈಸೂರು,ಫೆ.20– ಜಿಲ್ಲಾಡಳಿತ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ವತಿಯಿಂದ ಫೆ.22 ರಂದು ಬೆಳಗ್ಗೆ 11 ಗಂಟೆಗೆ ಕರ್ನಾಟಕ ಕಲಾಮಂದಿರದಲ್ಲಿ "ಕಾಯಕ ಶರಣರ" ಜಯಂತಿಯನ್ನು ಹಮ್ಮಿಕೊಳ್ಳಲಾಗಿದೆ. ಪೆದ್ದಿ ಮಹಾಸಂಸ್ಥಾನ ಮಠದ ಪೀಠಾಧಿಪತಿಗಳಾದ ಶ್ರೀ ಜ್ಞಾನಪ್ರಕಾಶ ಸ್ವಾಮೀಜಿಗಳ ದಿವ್ಯ ಸಾನ್ನಿಧ್ಯದಲ್ಲಿ ಕಾರ್ಯಕ್ರಮ ಜರುಗಲಿದೆ.

ಕಾರ್ಯಕ್ರಮವನ್ನು ಸಹಕಾರ ಸಚಿವರು ಹಾಗೂ ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ. ಸೋಮಶೇಖರ್ ಉದ್ಘಾಟಿಸುವರು. ಅಧ್ಯಕ್ಷತೆಯನ್ನು ಶಾಸಕ ಎಲ್.ನಾಗೇಂದ್ರ ವಹಿಸಲಿದ್ದು, ಮುಖ್ಯ ಅತಿಥಿಗಳಾಗಿ ಮೇಯರ್ ಶಿವಕುಮಾರ್, ಲೋಕಸಭಾ ಸದಸ್ಯರಾದ ಪ್ರತಾಪ್ ಸಿಂಹ, ಶ್ರೀನಿವಾಸ್‌ಪ್ರಸಾದ್ ಹಾಗೂ ಸುಮಲತಾ ಅಂಬರೀಶ್ ಭಾಗವಹಿಸುವರು. ಅತಿಥಿಗಳಾಗಿ ವಿಧಾನಸಭಾ ಶಾಸಕರಾದ ತನ್ವೀರ್ ಸೇಠ್, ಸಾರಾ ಮಹೇಶ್, ಜಿ.ಟಿ. ದೇವೇಗೌಡ, ಕೆ.ಮಹದೇವ್, ಹರ್ಷವರ್ಧನ್, ಅಶ್ವಿನ್‌ಕುಮಾರ್, ಹೆಚ್.ಪಿ. ಮಂಜುನಾಥ್, ಎಸ್.ಎ.ರಾಮದಾಸ್, ಡಾ. ಯತೀಂದ್ರ ಎಸ್, ಅನಿಲ್ ಕುಮಾರ್.ಸಿ ಹಾಗೂ ವಿಧಾನಪರಿಷತ್ತಿನ ಶಾಸಕರಾದ ಡಾ.ಡಿ.ತಿಮ್ಮಯ್ಯ, ಮರಿತಿಬ್ಬೇಗೌಡ, ಸಿ.ಎನ್. ಮಂಜೇಗೌಡ, ಎಚ್.ವಿಶ್ವನಾಥ್ ಹಾಗೂ ಮಧು ಜಿ.ಮಾದೇಗೌಡ ಒಳಗೊಂಡಂತೆ ವಿವಿಧ ನಿಗಮ ಮಂಡಳಿಗಳ ಅಧ್ಯಕ್ಷರು ಉಪಸ್ಥಿತರಿರುವರು. ಬೆಳಗ್ಗೆ 10 ಗಂಟೆಗೆ ಲಕ್ಷ್ಮೀರಾವ್ ಮತ್ತು ತಂಡದವರಿಂದ ಸುಗಮ ಸಂಗೀತವನ್ನು ಆಯೋಜಿಸಲಾಗಿದೆ ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಡಾ.ಎಂ.ಡಿ. ಸುದರ್ಶನ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.


ಕೆಬಿಜಿ ಅವರಿಗೆ ಮೈಸೂರು ಜಿಲ್ಲಾ ಪತ್ರಕರ್ತರ ಸಂಘದಿಂದ ಅಭಿನಂದನೆ



ಮೈಸೂರು, ಫೆ.20(ಆರ್‌ಕೆ)– 'ಸ್ಟಾರ್ ಆಫ್ ಮೈಸೂರ್' 46ನೇ ವಾರ್ಷಿಕೋತ್ಸವದ ಅಂಗವಾಗಿ ಮೈಸೂರು ಜಿಲ್ಲಾ ಪತ್ರಕರ್ತರ ಸಂಘದಿಂದ ಪತ್ರಿಕೆಯ ಸಂಸ್ಥಾಪಕ ಸಂಪಾದಕರಾದ ಕೆ.ಬಿ. ಗಣಪತಿ ಅವರನ್ನು ಇಂದು ಬನ್ನಿ ಮಂಟಪದ ಅವರ ಕಚೇರಿಯಲ್ಲಿ ಆತ್ಮೀಯವಾಗಿ ಅಭಿನಂದಿಸಲಾಯಿತು.

ಅದೇ ವೇಳೆ ಪತ್ರಿಕೆಯ ವ್ಯವಸ್ಥಾಪಕ ಸಂಪಾದಕ ಕೆ.ಜಿ. ವಿಕ್ರಂ ಮುತ್ತಣ್ಣ ಹಾಗೂ ಕಾರ್ಯ ನಿರ್ವಾಹಕ ಸಂಪಾದಕಿ ಮೀರಾ ಅಪ್ಪಯ್ಯ ಅವರನ್ನು ಸನ್ಮಾನಿಸಲಾಯಿತು. ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷರೂ ಆದ 'ಸ್ಟಾರ್ ಆಫ್ ಮೈಸೂರ್' ಮತ್ತು 'ಮೈಸೂರು ಮಿತ್ರ' ಮುಖ್ಯ ವರದಿಗಾರ ಎಸ್.ಟಿ. ರವಿಕುಮಾರ್, ನಗರ ಉಪಾಧ್ಯಕ್ಷ ಎಂ.ಎಸ್.ಬಸವಣ್ಣ, ಕಾರ್ಯದರ್ಶಿ ರಂಗಸ್ವಾಮಿ, ಗ್ರಾಮಾಂತರ ಕಾರ್ಯದರ್ಶಿ ಮಹದೇವು, ಖಜಾಂಚಿ ನಾಗೇಶ್ ಪಾಣತ್ತಲೆ, ಕಾರ್ಯಕಾರಿ ಸಮಿತಿ ಸದಸ್ಯ ಕೃಷ್ಣ, ರಾಜ್ಯ ಕಾರ್ಯಕಾರಿ ಸದಸ್ಯ ಬಿ. ರಾಘವೇಂದ್ರ, 'ಸ್ಟಾರ್ ಆಫ್ ಮೈಸೂರ್' ಪತ್ರಿಕೆ ಉಪಸಂಪಾದಕ ಕೆನೆತ್ ಶಿಶಿರ್, ಛಾಯಾಗ್ರಾಹಕ ಎಂ.ಎನ್. ಲಕ್ಷ್ಮೀನಾರಾಯಣ ಯಾದವ್ ಹಾಗೂ 'ಮೈಸೂರು ಮಿತ್ರ' ಉಪಸಂಪಾದಕ ಕುಮಾರ್ ಈ ಸಂದರ್ಭ ಉಪಸ್ಥಿತರಿದ್ದರು.

ಪಾರಂಪರಿಕ ಸ್ನೇಹಿಗಳು ಈ ಗಿಡವನ್ನು ತೆಗೆದುಹಾಕುವರೇ?



ಮೈಸೂರು, ಫೆ.20(ಆರ್‌ಕೆ)– ಮೈಸೂರಿನ ಸುಪ್ರಸಿದ್ಧ ಫೌಂಟನ್‌ನಲ್ಲಿ ಬೆಳೆದಿರುವ ಈ ಗಿಡವೂ ಪಾರಂಪರಿಕ ಕಾರಂಜಿಗೆ ಅಪಾಯ ತಂದೊಡ್ಡುತ್ತಿದೆ. ಮೈಸೂರು–ಬೆಂಗಳೂರು ರಸ್ತೆ ಮತ್ತು ಎನ್.ಆರ್. ಮೊಹಲ್ಲಾದ ಶಿವಾಜಿ ರಸ್ತೆ ಜಂಕ್ಷನ್‌ನಲ್ಲಿ ಶತಮಾನದಷ್ಟು ಹಳೆಯದಾದ ಸುಂದರ ಕಾರಂಜಿಯನ್ನು ಕಲಾತ್ಮಕವಾಗಿ ನಿರ್ಮಿಸಲಾಗಿದೆ. 'ಎಲ್ಗಿನ್ ಫೌಟನ್' ಎಂದೇ ಕರೆಯಲ್ಪಡುವ ಈ ಕಾರಂಜಿಯು ಐತಿಹಾಸಿಕ ಪ್ರಾಮುಖ್ಯತೆ ಹೊಂದಿದೆ.

ಹಲವು ತಿಂಗಳಿಂದ ಈ ಫೌಂಟನ್‌ನಲ್ಲಿ ಗಿಡವೊಂದು ಬೆಳೆಯುತ್ತಿದ್ದು, ಈ ಫೌಂಟನ್‌ಗೆ ಮುಂದೆ ಅಪಾಯ ತಂದೊಡ್ಡುವ ಸಾಧ್ಯತೆ ಇದೆಯಾದರೂ, ಪ್ರತೀ ದಿನ ಲಕ್ಷಾಂತರ ಮಂದಿ ಅದೇ ಮಾರ್ಗ ಸಂಚರಿಸುತ್ತಿದ್ದರೂ, ಪಾರಂಪರಿಕ ನಿರ್ಮಾಣವನ್ನು ಬುಡಮೇಲು ಮಾಡಬಹುದಾದ ಈ ಗಿಡವನ್ನು ಯಾರೊಬ್ಬರೂ ತೆಗೆದು ಹಾಕುವ ಔದಾರ್ಯ ಮೆರೆಯದಿರುವುದು ಅಚ್ಚರಿ ಮೂಡಿಸಿದೆ. ಈ ಕಾರಂಜಿ ನಿರ್ವಹಿಸುವ ಜವಾಬ್ದಾರಿ ಹೊತ್ತಿರುವ ಸಂಬಂಧಪಟ್ಟ ನಗರ ಪಾಲಿಕೆ ಅಧಿಕಾರಿಗಳು ಈಗಲಾದರೂ ಗಿಡವನ್ನು ಬುಡಸಮೇತ ಕಿತ್ತು ಹಾಕಿ ಇತಿಹಾಸ ಸಾರುವ ಸುಂದರ ಪಾರಂಪರಿಕ ಫೌಂಟನ್ ಅನ್ನು ಉಳಿಸಬೇಕೆಂದು 'ಮೈಸೂರು ಮಿತ್ರ' ಓದುಗರು ತಮ್ಮ ಕಳಕಳಿ ವ್ಯಕ್ತಪಡಿಸಿದ್ದಾರೆ.

ಮೈಸೂರು ಲಾರ್ಡ್ ಎಲ್ಗಿನ್ ಅವರು ಮೈಸೂರಿಗೆ ಭೇಟಿ ನೀಡಿದ್ದರ ನೆನಪಿಗಾಗಿ 1895ರ ನವೆಂಬರ್ 20 ರಂದು ಕೆ.ಆರ್.ಸರ್ಕಲ್‌ನಲ್ಲಿ ಈ ಕಾರಂಜಿಯನ್ನು ನಿರ್ಮಿಸಿ ಅದನ್ನು 'ಎಲ್ಗಿನ್ ಫೌಂಟನ್' ಎಂದೇ ಕರೆಯಲಾಗಿತ್ತು. ಮೈಸೂರು ಮಹಾನಗರ ಪಾಲಿಕೆಯಿಂದ ಕೃಷ್ಣರಾಜ ಒಡೆಯರ್ ಪ್ರತಿಮೆ ಸ್ಥಾಪಿಸಿದ ಹಿನ್ನೆಲೆಯಲ್ಲಿ ಫೌಂಟನ್ ಅನ್ನು ಧನ್ವಂತರಿ ರಸ್ತೆ ಜಂಕ್ಷನ್‌ಗೆ ಸ್ಥಳಾಂತರಿಸಲಾಗಿತ್ತು.

ನಂತರ ಸದರಿ ಕಾರಂಜಿಯನ್ನು ಮೈಸೂರು–ಬೆಂಗಳೂರು ರಸ್ತೆಯ ಶಿವಾಜಿ ರಸ್ತೆಗೆ ಸಂಪರ್ಕ ಕಲ್ಪಿಸುವ ಸ್ಥಳಕ್ಕೆ ಪುನಃ ಸ್ಥಳಾಂತರಿಸಲಾಗಿದ್ದು, ಆ ಸರ್ಕಲ್ (ಫೌಂಟನ್ ಸರ್ಕಲ್)ಗೆ, ಭಾರತದ ಮೊದಲ ರಾಷ್ಟ್ರಪತಿ ಡಾ. ರಾಜೇಂದ್ರ ಪ್ರಸಾದ್ ಅವರು ಮೈಸೂರಿಗೆ ಭೇಟಿ ನೀಡಿದ್ದ ನೆನಪಿನಾರ್ಥ ರಾಜೇಂದ್ರ ಪ್ರಸಾದ್ ಸರ್ಕಲ್' ಎಂದು ನಾಮಕರಣ ಮಾಡಲಾಗಿದೆ. ಇಂತಹ ಭವ್ಯ ಇತಿಹಾಸವಿರುವ ಫೌಂಟನ್ ಅನ್ನು ಉಳಿಸಿ, ಸಂರಕ್ಷಿಸುವುದು ಎಲ್ಲರ ಜವಾಬ್ದಾರಿಯಾಗಿದೆ.

ಇಂದು ಅಂತಾರಾಷ್ಟ್ರೀಯ ಮಾತೃಭಾಷಾ ದಿನಾಚರಣೆ

ಮೈಸೂರು,ಫೆ.20–ಭಾರತೀಯ ಭಾಷಾ ಸಂಸ್ಥಾನವು, ಯುನೆಸ್ಕೋ ವಿಷಯಾಧಾರಿತ 'ಬಹುಭಾಷಾ ಶಿಕ್ಷಣ – ಶಿಕ್ಷಣವನ್ನು ಪರಿವರ್ತಿಸುವ ಅವಶ್ಯಕತೆ' ಮತ್ತು ರಾಷ್ಟ್ರದ ಅಭಿವೃದ್ಧಿಗಾಗಿ ಏಕ್ ಭಾರತ್, ಶ್ರೇಷ್ಠ ಭಾರತ್‌ನೊಂದಿಗೆ ಭಾರತೀಯ ಭಾಷೆಗಳನ್ನು ಉನ್ನತೀಕರಿಸುವ ಉದ್ದೇಶದೊಂದಿಗೆ ಫೆ.21 ರಂದು 'ಅಂತಾರಾಷ್ಟ್ರೀಯ ಮಾತೃಭಾಷಾ ದಿನಾಚರಣೆ'ಯನ್ನು ಆಯೋಜಿಸಲಾಗಿದೆ.

ಕಾರ್ಯಕ್ರಮವನ್ನು ಮಾನಸ ಗಂಗೋತ್ರಿಯ ಭಾರತೀಯ ಭಾಷಾ ಸಂಸ್ಥಾನ ಸಂಸ್ಥೆಯ ಆವರಣದಲ್ಲಿ ಬೆಳಗ್ಗೆ 10.30ಕ್ಕೆ ಏರ್ಪಡಿಸಲಾಗಿದ್ದು, ಕಾರ್ಯಕ್ರಮದ ಉದ್ಘಾಟನಾ ಸಮಾರಂಭದ ಅಧ್ಯಕ್ಷತೆಯನ್ನು ಸಂಸ್ಥೆಯ ನಿರ್ದೇಶಕ ಪ್ರೊ. ಶೈಲೇಂದ್ರ ಮೋಹನ್‌ರವರು ವಹಿಸಲಿದ್ದಾರೆ.

ಮುಖ್ಯ ಭಾಷಣಕಾರರಾಗಿ ಐಐಟಿ–ಕಾನ್ಪುರದವರಾದ ಅಂಗ ಮತ್ತು ಭಾಷಾ ವಿಜ್ಞಾನ ವಿಭಾಗದ ನಿವೃತ್ತ ಪ್ರಾಧ್ಯಾಪಕರಾದ ಪ್ರೊ. ಬಿ.ಎನ್. ಪಟ್ನಾಯಕ್, ಗೌರವ ಅತಿಥಿಗಳಾಗಿ ಭಾ.ಭಾಸಂ ಮಾಜಿ ನಿರ್ದೇಶಕರು ಹಾಗೂ ಮಾಜಿ ಪ್ರಾಂಶುಪಾಲ ಪ್ರೊ. ಡಿ.ಜಿ. ರಾವ್ ವಹಿಸಲಿದ್ದಾರೆ. ಸಂಜೆ 5 ಗಂಟೆಗೆ ಕರ್ನಾಟಕದ ಸೋಲಿಗ, ಸಿದ್ದಿ ಮತ್ತು ಜೇನುಕುರುಬ ಸಮುದಾಯದ ಸದಸ್ಯರಿಂದ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಆಯೋಜಿಸಲಾಗಿದೆ ಎಂದು ಭಾರತೀಯ ಭಾಷಾ ಸಂಸ್ಥಾನದ ಸಹಾಯಕ ನಿರ್ದೇಶಕ ನಾರಾಯಣ್ ಕುಮಾರ್ ಚೌಧರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ವಿಜೃಂಭಣೆಯ ಶ್ರೀಆತ್ಮಲಿಂಗೇಶ್ವರ ರಥೋತ್ಸವ



ಭಾರತೀನಗರ, ಫೆ.20– ಇಲ್ಲಿಗೆ ಸಮೀಪದ ಹನುಮಂತನಗರದಲ್ಲಿ ಶಿವರಾತ್ರಿ ಹಬ್ಬದ ಪ್ರಯುಕ್ತ ಆತ್ಮಲಿಂಗೇಶ್ವರ ರಥೋತ್ಸವ ಸಾವಿರಾರು ಭಕ್ತರ ಸಮ್ಮುಖದಲ್ಲಿ ವಿಜೃಂಭಣೆಯಿಂದ ನೆರವೇರಿತು.

ರಥೋತ್ಸವಕ್ಕೆ ವಿಧಾನ ಪರಿಷತ್ ಸದಸ್ಯ ಮಧು ಜಿ.ಮಾದೇಗೌಡ ಚಾಲನೆ ನೀಡಿದರು. ಈ ವೇಳೆ ಸುತ್ತಮುತ್ತಲ ಗ್ರಾಮಗಳ ಭಕ್ತರು ಹಾಗೂ ವಿದ್ಯಾರ್ಥಿಗಳು ರಥ ಎಳೆದು ಹಣ್ಣು ಜವನ ಎಸೆಯುವ ಮೂಲಕ ಭಕ್ತಿಭಾವ ಮೆರೆದರು. ಬೆಳಗ್ಗೆ 6 ರಿಂದ 8 ರವರೆಗೆ ವಿಶೇಷ ಪೂಜೆಗಳು ನಡೆದವು. ನಂತರ ಮಧ್ಯಾಹ್ನ 12 ಗಂಟೆಗೆ ಮಹಾಮಂಗಳಾರತಿ, ಸಂಜೆ 4 ಗಂಟೆಗೆ ಚತುರ್ವಿದಿಗಳಲ್ಲಿ ರಥೋತ್ಸವ ವೈಭವದಿಂದ ನಡೆಯಿತು. ರಥೋತ್ಸವದಲ್ಲಿ ಕೆ.ಶೆಟ್ಟಿಹಳ್ಳಿ ಭೈರೇಶ್ವರಸ್ವಾಮಿ, ಮಾರಮ್ಮನಪೂಜೆ, ಬಿದರಹಳ್ಳಿ ಕಬ್ಬಾಳಮ್ಮನ ಪೂಜೆ, ಮಾದರಹಳ್ಳಿ ದೇವಮ್ಮ ಮತ್ತು ಕಾಳಮ್ಮ ಪೂಜೆ, ಚಿಕ್ಕರಸಿನಕೆರೆಯ ಕಾಲಭೈರೇಶ್ವರನ ಪೂಜೆ, ಅರೆಚಾಕನಹಳ್ಳಿ ಶಂಭುಲಿಂಗೇಶ್ವರ ಸ್ವಾಮಿ ಪೂಜೆ, ಕರಡಕೆರೆ ಆಂಜನೇಯಸ್ವಾಮಿ ಬಿರುದುಗಳು ಪಾಲ್ಗೊಂಡಿದ್ದವು.

ರಥೋತ್ಸವಕ್ಕೆ ವೀರಗಾಸೆ, ಪೂಜಾ ಕುಣಿತ ಸೇರಿದಂತೆ ವಿವಿಧ ಜಾನಪದ ಕಲಾ ತಂಡಗಳು ಮೆರಗು ತಂದವು. 3 ದಿನ ನಡೆದ ಜಾತ್ರೆಯಲ್ಲಿ ಭರ್ಜರಿ ವ್ಯಾಪಾರ ನಡೆಯಿತು. ಪ್ರತಿ ವರ್ಷದಂತೆ ಈ ವರ್ಷವೂ ದನಗಳ ಜಾತ್ರೆ ಹಮ್ಮಿಕೊಳ್ಳಲಾಗಿತ್ತು ಉತ್ತಮ ರಾಸುಗಳಿಗೆ ಬಹುಮಾನ ವಿತರಿಸಲಾಯಿತು. ಯಾವುದೇ ಅಹಿತಕರ ಘಟನೆ ನಡೆಯದಂತೆ ಸೂಕ್ತ ಪೊಲೀಸ್ ಬಂದೋಬಸ್ತ್ ಏರ್ಪಡಿಸಲಾಗಿತ್ತು

ತೆಪ್ಪೋತ್ಸವ: ಶಿವರಾತ್ರಿ ಅಂಗವಾಗಿ ಫೆ.21 ರಂದು ಸಂಜೆ 6.30ಕ್ಕೆ ತೆಪ್ಪೋತ್ಸವ ಜರುಗಲಿದೆ. ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕೆಂದು ಮಧು ಜಿ.ಮಾದೇಗೌಡ ತಿಳಿಸಿದ್ದಾರೆ.

ಪ್ರತಿಫಲಾಪೇಕ್ಷೆ ಇಲ್ಲದೇ 'ಕೈ' ಸೇರ್ಪಡೆ

ಮದ್ದೂರು, ಫೆ.20– ಹಳೇ ಮೈಸೂರು ಭಾಗದಲ್ಲಿ ಕಾಂಗ್ರೆಸ್ ಅನ್ನು ಮತ್ತಷ್ಟು ಬಲಪಡಿಸುವ ಉದ್ದೇಶದಿಂದ ಯಾವುದೇ



ಪ್ರತಿಫಲಾಪೇಕ್ಷೆ ಇಲ್ಲದೇ ಕಾಂಗ್ರೆಸ್ ಪಕ್ಷಕ್ಕೆ ಸೇರ್ಪಡೆಯಾಗುತ್ತಿದ್ದೇನೆ ಎಂದು ಸಮಾಜ ಸೇವಕ ಕುಲೂರು ಉದಯ್ ತಿಳಿಸಿದರು. ಪಟ್ಟಣದ ಶಿಮ್ಷಾದ ಕುಲೂರು ಉದಯ್ ಚಾರಿಟಬಲ್ ಟ್ರಸ್ಟ್ ಕಚೇರಿಯಲ್ಲಿ ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಹಳೇ ಮೈಸೂರು ಭಾಗದಲ್ಲಿ ಪ್ರಾಬಲ್ಯವಿರುವ ಜೆಡಿಎಸ್ ಭದ್ರಕೋಟೆ ಬಗ್ಗುಬಡಿಯಲು ಹಾಗೂ ಕಾಂಗ್ರೆಸ್‌ಗೆ ಹೆಚ್ಚಿನ ಶಕ್ತಿ ತುಂಬುವ ಉದ್ದೇಶದಿಂದ ಕಾಂಗ್ರೆಸ್‌ಗೆ ಸೇರ್ಪಡೆಗೊಳ್ಳುತ್ತಿರುವುದಾಗಿ ತಿಳಿಸಿದರು.

ಮುಖಂಡರಾದ ರವಿ, ಶ್ರೀನಿವಾಸ್, ಮಧು, ರಾಮಚಂದ್ರು, ತಿಮ್ಮೇಗೌಡ, ಯತೀಶ್, ಶಿವು, ನಿಂಗೇಗೌಡ ಇದ್ದರು.

ಬಿ.ಆರ್.ರಾಮಚಂದ್ರ ನೇತೃತ್ವದಲ್ಲಿ ಮನೆ ಮನೆ ಪ್ರಚಾರ



ಮಂಡ್ಯ, ಫೆ.20– ತಾಲೂಕಿನ ತಂಡಸನಹಳ್ಳಿಯಲ್ಲಿ ಸೋಮವಾರ ಮನ್‌ಮುಲ್ ಅಧ್ಯಕ್ಷ ಬಿ.ಆರ್.ರಾಮ ಚಂದ್ರ ನೇತೃತ್ವದಲ್ಲಿ ಜೆಡಿಎಸ್ ಪಂಚರತ್ನ ಯೋಜನೆ ಕುರಿತು ಗ್ರಾಮಸ್ಥರಿಗೆ ಮನವರಿಕೆ ಮಾಡಿ ಮನೆ ಮನೆಗೆ ಕರಪತ್ರ ಹಂಚಲಾಯಿತು.

ಕರಪತ್ರ ಹಂಚಿ ಮಾತನಾಡಿದ ಮನ್‌ಮುಲ್ ಅಧ್ಯಕ್ಷ ಬಿ.ಆರ್.ರಾಮಚಂದ್ರ, ಜೆಡಿಎಸ್ ಪಂಚರತ್ನ ಕಾರ್ಯಕ್ರಮಗಳ ಬಗ್ಗೆ ಪ್ರತಿ ಮನೆ ಮನೆಗೆ ಹೋಗಿ ಜನರಿಗೆ ಅರಿವು ಮೂಡಿಸಲಾಗುತ್ತಿದೆ. ಈ ಮೂಲಕ ಜೆಡಿಎಸ್ ಅಧಿಕಾರಕ್ಕೆ ಬಂದಲ್ಲಿ ರೈತರಿಗೆ ಹಾಗೂ ಸಾಮಾನ್ಯ ಜನರಿಗೆ ಯಾವ ಕಾರ್ಯಕ್ರಮ ರೂಪಿಸಲಾಗಿದೆ ಎಂದು ತಿಳಿಸಲಾಗುತ್ತಿದೆ ಎಂದರು.

2023ರ ಚುನಾವಣೆಯಲ್ಲಿ ಜೆಡಿಎಸ್ ಪಕ್ಷ 123 ಕ್ಷೇತ್ರಗಳಲ್ಲಿ ಗೆಲುವು ಸಾಧಿಸುವ ಮೂಲಕ ಸ್ವತಂತ್ರವಾಗಿ ಅಧಿಕಾರಕ್ಕೆ ಬರಲಿದೆ. ರೈತರ, ಯುವಕರ, ಹೆಣ್ಣು ಮಕ್ಕಳ ಉದ್ಧಾರ ಕೇವಲ ಮಾಜಿ ಸಿಎಂ ಕುಮಾರಸ್ವಾಮಿ ನೇತೃತ್ವದ ಜೆಡಿಎಸ್ ಪಕ್ಷದಿಂದ ಮಾತ್ರ ಸಾಧ್ಯ. ಈಗಾಗಲೇ ಜನರು 2 ರಾಜಕೀಯ ಪಕ್ಷಗಳ ದುರಾಡಳಿತ ನೋಡಿ ಮನನೊಂದಿದ್ದಾರೆ. ಹಾಗಾಗಿ ಮುಂದಿನ ಸರಕಾರ ಜ್ಯಾತ್ಯಾತೀತ ಜನತದಳದ ಸರ್ಕಾರವಾಗಲಿದೆ ಎಂದರು.

ಕಳೆದ ಚುನಾವಣೆಯಲ್ಲಿ ಜಿಲ್ಲೆಯ ಜನರು ಜೆಡಿಎಸ್ ಪಕ್ಷ ಬೆಂಬಲಿಸಿ 7 ಕ್ಷೇತ್ರಗಳಲ್ಲಿ ಜೆಡಿಎಸ್ ಅಭ್ಯರ್ಥಿಗಳನ್ನು ಆಯ್ಕೆ ಮಾಡಿದ್ದಾರೆ. ಅದೇ ರೀತಿ ಈ ಸಲ ಕೂಡ ಜಿಲ್ಲೆಯ ಜನರು ಮಾಜಿ ಸಿಎಂ ಕುಮಾರಸ್ವಾಮಿ ಅವರನ್ನು ಮುಖ್ಯಮಂತ್ರಿ ಮಾಡಲು ಜೆಡಿಎಸ್ ಅಭ್ಯರ್ಥಿಗಳನ್ನು ಗೆಲ್ಲಿಸಿ ಇತಿಹಾಸ ನಿರ್ಮಿಸಲಿದ್ದಾರೆ ಎಂದರು.

ಈ ವೇಳೆ ತಾಪಂ ಮಾಜಿ ಅಧ್ಯಕ್ಷ ಟಿ.ಸಿ.ಶಂಕರಗೌಡ, ಕಲ್ಪನಾ ರಾಮಚಂದ್ರ, ಗ್ರಾಪಂ ಸದಸ್ಯರಾದ ಜಯಮ್ಮ, ನಿರ್ಮಲ, ಪವಿತ್ರ ಮಮತಾ, ಮುಖಂಡರಾದ ಬಿ.ಆರ್.ಸುರೇಶ್, ನವೀನ್, ಮೋಹನ್, ಹೇಮಂತ್, ರಾಘು, ಮಹೇಶ್ ಹಾಜರಿದ್ದರು.

ಕಾರೇಕುರ ಗ್ರಾಮದಲ್ಲಿ ವಿದ್ಯುತ್ ಅದಾಲತ್



ಶ್ರೀರಂಗಪಟ್ಟಣ, ಫೆ.20– ಹಳ್ಳಿಗಳಲ್ಲಿ ವಿದ್ಯುತ್ ಸಮಸ್ಯೆಗಳನ್ನು ಪರಿಹರಿಸುವಂತೆ ಇಂಧನ ಸಚಿವರು ಆದೇಶಿಸಿರುವ ಹಿನ್ನೆಲೆಯಲ್ಲಿ ಸಹಾಯಕ ಕಾರ್ಯ ನಿರ್ವಾಹಕ ಇಂಜಿನಿಯರ್ ತಾಲೂಕಿನ ಕಾರೇಕುರ ಗ್ರಾಮದಲ್ಲಿ ವಿದ್ಯುತ್ ಅದಾಲತ್ ನಡೆಸಿ ಅಹವಾಲು ಸ್ವೀಕರಿಸಿದರು.

ಎಇಇ ಮಂಜು ಪ್ರಸಾದ್ ಮಾತನಾಡಿ, ಕಂದಾಯ ಇಲಾಖೆಯಿಂದ ನಡೆಸುತ್ತಿರುವ ಜಿಲ್ಲಾಧಿಕಾರಿಗಳ ನಡೆ ಹಳ್ಳಿ ಕಡೆ ಕಾರ್ಯಕ್ರಮದ ರೀತಿ ಇಂಧನ ಇಲಾಖೆಯಿಂದ ವಿದ್ಯುತ್ ಗ್ರಾಹಕರಿಗೆ ಹಲವು ವರ್ಷಗಳಿಂದ ಬಗೆಹರಿಯದ ಸಮಸ್ಯೆಗಳನ್ನು ತಕ್ಷಣ ಪರಿಹರಿಸುವ ನಿಟ್ಟಿನಲ್ಲಿ ನೂತನವಾಗಿ ತಿಂಗಳ 3ನೇ ಶನಿವಾರ ವಿದ್ಯುತ್ ಅದಾಲತ್ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಇಲ್ಲಿ ಸ್ವೀಕರಿಸಿದ ಅಹವಾಲಿ ನನ್ವಯ ಕಾನೂನಿನ ಚೌಕಟ್ಟಿನಲ್ಲಿ 90 ದಿನಗಳಲ್ಲಿ ಬಹುತೇಕ ಸಮಸ್ಯೆ ಬಗೆಹರಿಸಲಾ ಗುವುದು. ಒಂದು ವೇಳೆ ನಮ್ಮ ಹಂತದಲ್ಲಿ ಬಗೆಹರಿಸಲಾಗದಿದ್ದರೇ ಇಂಧನ ಸಚಿವರು ದೂರವಾಣಿ ಮೂಲಕ ಸಮಸ್ಯೆ ಆಲಿಸಿ ಪರಹಾರ ನೀಡಲಿದ್ದಾರೆ ಆದ್ದರಿಂದ ಸಾರ್ವಜನಿಕರು ವಿದ್ಯುತ್ ಅದಾಲತ್ ಕಾರ್ಯಕ್ರಮ ಬಳಸಿಕೊಳ್ಳುವಂತೆ ಸಲಹೆ ನೀಡಿದರು.

ಅದಾಲತ್‌ನಲ್ಲಿ ವಿದ್ಯುತ್ ಮಾರ್ಗ ಬದಲಾವಣೆ, ಪರಿವರ್ತಕಗಳ ಮತ್ತು ವೋಲ್ಟೇಜ್ ಸಮಸ್ಯೆಗಳು, ಮಾಪನಗಳು ಹಾಗೂ ಬಿಲ್ಲಿಗೆ ಸಂಬಂಧಿಸಿದ ದೂರುಗಳು, ವಿದ್ಯುತ್ ಪೂರೈಕೆ ಮತ್ತು ನಿಲುಗಡೆ, ವಿದ್ಯುತ್ ಕಳ್ಳತನ, ವಿದ್ಯುತ್ ಸುರಕ್ಷತೆ ಹಾಗೂ ಅಪಘಾತಗಳು, ಸ್ಥಾವರಗಳ ಹೆಸರು ಬದಲಾವಣೆಗೆ ಸಂಬಂಧಿಸಿದಂತೆ ಗ್ರಾಹಕರು ದೂರು ನೀಡಬಹುದು ಎಂದರು. ಕಾರ್ಯಕ್ರಮದಲ್ಲಿ ಗ್ರಾಮಸ್ಥರು 13 ಸಮಸ್ಯೆಗಳನ್ನು ಲಿಖಿತ ರೂಪದಲ್ಲಿ ಸಲ್ಲಿಸಿದರು. ಈ ವೇಳೆ ಗ್ರಾಪಂ ಸದಸ್ಯ ಮುರಳೀಧರ್, ಗ್ರಾಮದ ಯಜಮಾನರಾದ ನರಸಿಂಹೇಗೌಡ, ನಾಗಣ್ಣ, ಗ್ರಾಮಸ್ಥರಾದ ಮಂಜುನಾಥ್, ಸುರೇಶ್, ಆರ್.ಕೆ.ಮಂಜುನಾಥ್ ಸೇರಿದಂತೆ ಇತರರರಿದ್ದರು.

ನಾಳೆ ಮಂಡ್ಯದಲ್ಲಿ ರಾಜ್ಯ ಯುವ ಮೋರ್ಚಾ ಸಮಾವೇಶ



ಮಂಡ್ಯ, ಫೆ.20– ಬಿಜೆಪಿ ಹಳೇ ಮೈಸೂರು ಭಾಗಕ್ಕೆ ಹೆಚ್ಚಿನ ಒತ್ತು ನೀಡುವ ಮೂಲಕ ರಾಜ್ಯದಲ್ಲಿ ಮುಂದಿನ ಚುನಾವಣೆಯಲ್ಲಿ 150 ಸ್ಥಾನಗಳನ್ನು ಗೆಲ್ಲುವ ಕಾರ್ಯತಂತ್ರ ರೂಪಿಸುತ್ತಿದೆ. ಅದರ ಮೊದಲ ಹಂತವಾಗಿ ಯುವ ಮೋರ್ಚಾ ಸಮಾವೇಶ ಫೆ.22 ರಂದು ನಗರದ ಮೈಷುಗರ್ ಮೈದಾನದಲ್ಲಿ ನಡೆಯಲಿದೆ ಎಂದು ಬಿಜೆಪಿ ರಾಜ್ಯ ಕಾರ್ಯದರ್ಶಿ ಹಾಗೂ ಸಮಾವೇಶಗಳ ರಾಜ್ಯ ಸಂಚಾಲಕ ಜಗದೀಶ್ ಹಿರೇಮನಿ ತಿಳಿಸಿದರು.

ಮುಂಬರುವ ಚುನಾವಣೆ ಹಿನ್ನಲೆಯಲ್ಲಿ ರಾಜ್ಯದ 224 ವಿಧಾನಸಭಾ ಕ್ಷೇತ್ರಗಳಲ್ಲಿ ವಿವಿಧ ಮೋರ್ಚಾಗಳ ಸಮಾವೇಶ ನಡೆಸಲಾಗುತ್ತಿದೆ. ಪಕ್ಷದ 7 ಮೋರ್ಚಾಗಳಾದ ಯುವ, ಎಸ್ಸಿ, ಎಸ್ಟಿ, ಒಬಿಸಿ, ಮಹಿಳಾ, ರೈತ, ಅಲ್ಪಸಂಖ್ಯಾತ ಮೋರ್ಚಾಗಳನ್ನು ಸಕ್ರಿಯಗೊಳಿಸಲು ಸಮಾವೇಶ ನಡೆಸಲಾಗುತ್ತಿದೆ. ಎಲ್ಲ ಸಮಾವೇಶಗಳಲ್ಲೂ ಕೇಂದ್ರ ಹಾಗೂ ರಾಜ್ಯ ನಾಯಕರು ಭಾಗವಹಿಸಲಿದ್ದಾರೆ ಎಂದು ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಮೋರ್ಚಾಗಳ ಸಮಾವೇಶ ಫೆ.22 ರಿಂದ ಆರಂಭಗೊಳ್ಳಲಿವೆ. ಮೊದಲ ಯುವ ಮೋರ್ಚಾ ಮಂಡ್ಯದಿಂದಲೇ ಪ್ರಾರಂಭವಾಗಲಿದೆ. ನಂತರ ರಾಜ್ಯಾದ್ಯಂತ ವಿಸ್ತಾರಗೊಳ್ಳಲಿದೆ. ರಾಜ್ಯ ಪ್ರಧಾನ ಕಾರ್ಯದರ್ಶಿ ಬಿ.ವೈ.ವಿಜಯೇಂದ್ರ ನೇತೃತ್ವದಲ್ಲಿ ನಡೆಯಲಿದೆ. ಸಮಾವೇಶಕ್ಕೆ ರಾಷ್ಟ್ರೀಯ ಯುವ ಮೋರ್ಚಾ ಅಧ್ಯಕ್ಷ ತೇಜಸ್ವಿ ಸೂರ್ಯ, ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ.ರವಿ ಸೇರಿದಂತೆ ಮತ್ತಿತರ ನಾಯಕರು ಭಾಗವಹಿಸಲಿದ್ದಾರೆ ಎಂದು ವಿವರಿಸಿದರು. ಯುವ ಮೋರ್ಚಾ ಸಮಾವೇಶಕ್ಕೂ ಮೊದಲು ಫೆ.21ರಂದು ನಾಗಮಂಗಲದಲ್ಲಿ ಮಹಿಳಾ ಸಮಾವೇಶ ನಡೆಯಲಿದೆ. ಸಮಾವೇಶಕ್ಕೆ ಕೇಂದ್ರ ಹಾಗೂ ರಾಜ್ಯದ ಪಕ್ಷದ ಮಹಿಳಾ ನಾಯಕರು ಭಾಗವಹಿಸಲಿದ್ದಾರೆ. ಸಮಾವೇಶಗಳ ಮೂಲಕ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಸಾಧನೆಗಳನ್ನು ಮನೆ ಮನೆಗೆ ತಲುಪಿಸುವ ಉದ್ದೇಶ ಹೊಂದಲಾಗಿದೆ. ಇದರಿಂದ ರಾಜ್ಯದಲ್ಲಿ ಮತ್ತೊಮ್ಮೆ ಬಿಜೆಪಿ ಅಧಿಕಾರಕ್ಕೆ ತರಲು ಎಲ್ಲ ಮೋರ್ಚಾದ ಸಮಾವೇಶಗಳು ಬಿಜೆಪಿ ಗೆಲುವಿಗೆ ಪೂರಕವಾಗಲಿವೆ ಎಂದರು.

ಗೋಷ್ಠಿಯಲ್ಲಿ ಜಿಲ್ಲಾಧ್ಯಕ್ಷ ಸಿ.ಪಿ. ಉಮೇಶ್, ರಾಷ್ಟ್ರೀಯ ಕಾರ್ಯಕಾರಿಣಿ ಸದಸ್ಯ ಡಾ. ಸಿದ್ದರಾಮಯ್ಯ, ಜಿಪಂ ಮಾಜಿ ಸದಸ್ಯ ಚಂದಗಾಲು ಶಿವಣ್ಣ ಮುಖಂಡರಾದ ಡಾ.ಇಂದ್ರೇಶ್, ಅಶೋಕ್ ಜಯರಾಂ ಇದ್ದರು.

ಶಿವಮೊಗ್ಗದಲ್ಲಿ ಕೆಲಸವಿರುವುದರಿಂದ ಮಂಡ್ಯ ಉಸ್ತುವಾರಿ ಬೇಡ: ಕೆಸಿಎನ್

ಮಂಡ್ಯ: ನನಗೆ ಶಿವಮೊಗ್ಗದಲ್ಲಿ ಹೆಚ್ಚಿನ ಕೆಲಸವಿರುವುದರಿಂದ ಮಂಡ್ಯ ಜಿಲ್ಲಾ ಉಸ್ತುವಾರಿ ಸಚಿವ ಸ್ಥಾನ ಸದ್ಯಕ್ಕೆ ನನಗೆ ಅಗತ್ಯವಿಲ್ಲ ಎಂದು ರೇಷ್ಮೆ ಹಾಗೂ ಕ್ರೀಡಾ ಸಚಿವ ಕೆ.ಸಿ.ನಾರಾಯಣಗೌಡ ಪರೋಕ್ಷವಾಗಿ ಹೇಳಿದರು.

ಸಚಿವರಾದ ಕೆ.ಗೋಪಾಲಯ್ಯ, ಆರ್.ಅಶೋಕ್ ಹಾಗೂ ಡಾ.ಸಿ.ಎನ್.ಅಶ್ವತ್‌ನಾರಾಯಣ ಅವರಲ್ಲಿ ಯಾರನ್ನೇ ನೇಮಕ ಮಾಡಿದರೂ ನಾನು ಸ್ವಾಗತಿಸುತ್ತೇನೆ. ಜಿಲ್ಲಾ ಉಸ್ತುವಾರಿ ಸಚಿವರನ್ನು ನೇಮಕ ಮಾಡುವುದು ಸಿಎಂಗೆ ಬಿಟ್ಟ ವಿಚಾರ. ನನಗೆ ಶಿವಮೊಗ್ಗ ಜಿಲ್ಲೆ ಉಸ್ತುವಾರಿ ನೀಡಿದ್ದಾರೆ. ಅಲ್ಲಿ ಸಾಕಷ್ಟು ಕೆಲಸಗಳು ನಡೆಯುತ್ತಿವೆ. ಅಲ್ಲದೆ ಪ್ರಧಾನಿ ಮೋದಿ ಅವರು ಬರಲಿದ್ದಾರೆ. ಆ ಹಿನ್ನೆಲೆಯಲ್ಲಿ ಅದನ್ನು ಅರ್ಧಕ್ಕೆ ಬಿಟ್ಟು ಬರಲು ಸಾಧ್ಯವಿಲ್ಲ. ಅಲ್ಲಿಯೂ ಅರ್ಧ ಕೆಲಸ, ಇಲ್ಲಿಯೂ ಅರ್ಧ ಕೆಲಸವಾಗಲಿದೆ ಎಂದು ಜಿಲ್ಲಾ ಉಸ್ತುವಾರಿ ವಹಿಸಿಕೊಳ್ಳಲ್ಲ ಪರೋಕ್ಷವಾಗಿ ಹೇಳಿದರು.

ನಾನು ಕಾಂಗ್ರೆಸ್ ಸೇರ್ಪಡೆಯಾಗಲ್ಲ: ನಾನು ಯಾವುದೇ ಕಾರಣಕ್ಕೂ ಕಾಂಗ್ರೆಸ್ ಸೇರ್ಪಡೆಯಾಗಲ್ಲ. ಇದೆಲ್ಲ ಕಾಂಗ್ರೆಸ್‌ನವರು ಹರಡಿಸುತ್ತಿರುವ ಸುದ್ದಿಯಾಗಿದೆ. ನನ್ನ ಅಭಿವೃದ್ಧಿ ಕೆಲಸಗಳನ್ನು ನೋಡಿ ಕಾಂಗ್ರೆಸ್ ಬರುತ್ತಾರೆ. ನಾವು ಟಿಕೆಟ್ ನೀಡುತ್ತೇವೆ ಎಂದು ಸುಳ್ಳು ಸುದ್ದಿ ಹಬ್ಬಿಸುತ್ತಿದ್ದಾರೆ ಸ್ಪಷ್ಟಪಡಿಸಿದರು.

ಅಘಲಯ ಪಿಎಸಿಎಸ್‌ಗೆ ಮಂಜಮ್ಮ ಅಧ್ಯಕ್ಷೆ



ಕೆ.ಆರ್.ಪೇಟೆ, ಫೆ.20– ತಾಲೂಕಿನ ಅಘಲಯ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ನೂತನ ಅಧ್ಯಕ್ಷರಾಗಿ ಮಂಜಮ್ಮ ಜಯರಾಂ ಅವಿರೋಧ ಆಯ್ಕೆಯಾಗಿದ್ದಾರೆ.

ಈ ಹಿಂದಿನ ಅಧ್ಯಕ್ಷ ಎನ್.ಡಿ.ಕೃಷ್ಣಸಿಂಗ್ ಅವರ ರಾಜೀನಾಮೆಯಿಂದ ತೆರವಾದ ಸ್ಥಾನಕ್ಕೆ ಮಂಜಮ್ಮ ಅವರನ್ನು ಹೊರತುಪಡಿಸಿ ಬೇರೆ ಯಾರೂ ನಾಮಪತ್ರ ಸಲ್ಲಿಸದ ಕಾರಣ ಚುನಾವಣಾಧಿಕಾರಿ ತಾಲೂಕು ಸಹಕಾರ ಅಭಿವೃದ್ಧಿ ಅಧಿಕಾರಿ ಆನಂದ್ ನಾಯಕ್ ಅವರು ಮಂಜಮ್ಮ ಅವರ ಅವಿರೋಧ ಆಯ್ಕೆಯನ್ನು ಘೋಷಿಸಿದರು. ಸಹ ಚುನಾವಣಾಧಿಕಾರಿಯಾಗಿ ಸಂಘದ ಸಿಇಓ ಮುರುಳೀಧರ್ ಕಾರ್ಯ ನಿರ್ವಹಿಸಿದರು.

ನೂತನ ಅಧ್ಯಕ್ಷೆಯನ್ನು ತಾಪಂ ಮಾಜಿ ಅಧ್ಯಕ್ಷ ಎ.ಎನ್.ಜಾನಕೀರಾಂ, ತಾಲೂಕು ಪಿಎಲ್‌ಡಿ ಬ್ಯಾಂಕ್ ಮಾಜಿ ಅಧ್ಯಕ್ಷ ಎ.ಎಸ್.ರಮೇಶ್, ಗ್ರಾಪಂ ಮಾಜಿ ಅಧ್ಯಕ್ಷರಾದ ಆಶಾ, ಹೇಮಾವತಿ, ಸಂಘದ ಉಪಾಧ್ಯಕ್ಷ ಮಂಜು, ನಿರ್ದೇಶಕರಾದ ಎನ್.ಎಸ್.ಆಶಾ, ಅನಂತು, ಕೃಷ್ಣಸಿಂಗ್, ದೇವಮ್ಮ, ರಾಜೇಗೌಡ, ಡಿಸಿಸಿ ಪ್ರತಿನಿಧಿ ಹಾಗೂ ಸಂಘದ ಮೇಲ್ವಿಚಾರಕ ಕೆ.ಆರ್.ರಘು, ಮುಖಂಡರಾದ ಡಿ.ಎಸ್.ನಾಗೇಂದ್ರ, ಎ.ಎಲ್.ನಂಜಪ್ಪ, ಎ.ಜೆ.ಗಣೇಶ್, ಗ್ರಾಪಂ ಸದಸ್ಯರಾದ ಯೋಗೇಶ್, ಕಾಲಭೈರವೇಶ್ವರ ಯುವಕರ ಸಂಘದ ಎಲ್ಲಾ ಪದಾಧಿಕಾರಿಗಳು ಹಾಗೂ ಗ್ರಾಮಸ್ಥರು ಅಭಿನಂದಿಸಿದರು.

ಇಂದು ವಿದ್ಯುತ್ ವ್ಯತ್ಯಯ

ಮಂಡ್ಯ, ಫೆ.20– ಹಂಪಾಪುರ ವಿದ್ಯುತ್ ವಿತರಣಾ ಕೇಂದ್ರಗಳಲ್ಲಿ ತ್ರೈಮಾಸಿಕ ಕಾರ್ಯ ಹಮ್ಮಿಕೊಂಡಿರುವುದರಿಂದ ಫೆ.21ರ ಬೆಳಗ್ಗೆ 9 ರಿಂದ ಸಂಜೆ 5ರವರೆಗೆ ಕೆರಗೋಡು, ದೊಡ್ಡಗರುಡನಹಳ್ಳಿ, ಬಿಳಿದೇಗಲು, ಮುದಗಂದೂರು, ಮಾರಗೌಡನಹಳ್ಳಿ, ಬಿ.ಹೊಸೂರು, ಹಂಪಾಪುರ, ಕಲ್ಮಂಟಿದೊಡ್ಡಿ, ಸೌದೇನಹಳ್ಳಿ, ಬೆಟ್ಟಹಳ್ಳಿ, ಬೀಚನಹಳ್ಳಿ, ಪುರದಕೊಪ್ಪಲು, ಎಂ.ಹೊನ್ನೇನಹಳ್ಳಿ, ಬಿದರಕಟ್ಟೆ, ಬೆನ್ನಹಟ್ಟಿ, ಮನುಗನಹಳ್ಳಿ ಹಾಗೂ ಸುತ್ತಮುತ್ತಲಿನ ಗ್ರಾಮಗಳಲ್ಲಿ ವಿದ್ಯುತ್ ವ್ಯತ್ಯಯ ಉಂಟಾಗಲಿದೆ ಎಂದು ಪ್ರಕಟಣೆ ತಿಳಿಸಿದೆ.

ಒಂದನೇ ಪುಟದಿಂದ

ವಿಸ್ತೃತ ಯೋಜನೆಗೆ ಸಂಪುಟ ಅಸ್ತು

ತಾವು (ಪ್ರತಾಪ್ ಸಿಂಹ), ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ. ದೇವೇಗೌಡ ಮತ್ತು ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ. ಸೋಮಶೇಖರ್ ಸೇರಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರನ್ನು ಭೇಟಿ ಮಾಡಿ ಮೈಸೂರು ನಗರ, ಚಾಮುಂಡೇಶ್ವರಿ ಕ್ಷೇತ್ರ ಮಾತ್ರವಲ್ಲದೇ ಹುಣಸೂರಿನ 277 ಗ್ರಾಮಗಳಿಗೆ ಕುಡಿಯುವ ನೀರು ಒದಗಿಸಲು 593 ಕೋಟಿ ರೂ. ಮಂಜೂರು ಮಾಡಬೇಕೆಂದು ಒತ್ತಾಯಪೂರ್ವಕವಾಗಿ ಮನವಿ ಮಾಡಿದ್ದೆವು. ನಮ್ಮ ಮನವಿಗೆ ಸ್ಪಂದಿಸಿದ ಮುಖ್ಯಮಂತ್ರಿಗಳು ಇಂದು ನಡೆದ ಸಂಪುಟ ಸಭೆಯಲ್ಲಿ ಹಳೇ ಉಂಡುವಾಡಿ ಯೋಜನೆಗೆ 593 ಕೋಟಿ ರೂ.ಗಳನ್ನು ನೀಡಿದ್ದಾರೆ. ಈ ಕಾರ್ಯಕ್ಕೆ ನಗರಾಭಿವೃದ್ಧಿ ಸಚಿವ ಬೈರತಿ ಬಸವರಾಜ್, ಕರ್ನಾಟಕ ನೀರು ಸರಬರಾಜು ಮತ್ತು ಒಳಚರಂಡಿ ಅಭಿವೃದ್ಧಿ ಮಂಡಳಿ ಅಧ್ಯಕ್ಷರೂ ಆದ ಶಾಸಕ ರಾಜುಗೌಡ ನಾಯಕ್ ಸಹಕರಿಸಿದ್ದಾರೆ ಎಂದು ಪ್ರತಾಪ್ ಸಿಂಹ ಹೇಳಿದರು. ಈ ಯೋಜನೆ ಇನ್ನೆರಡು ವರ್ಷಗಳಲ್ಲಿ ಪೂರ್ಣಗೊಳ್ಳಲಿದ್ದು, ಆಗ ಮೈಸೂರು ನಗರ, ಚಾಮುಂಡೇಶ್ವರಿ ಕ್ಷೇತದ್ರ 139 ಗ್ರಾಮಗಳು ಹಾಗೂ ಹುಣಸೂರು ತಾಲೂಕಿನ 377 ಗ್ರಾಮಗಳಿಗೆ ಕುಡಿಯುವ ನೀರಿನ ಸೌಲಭ್ಯ ದೊರೆಯಲಿದೆ. ಈ ಯೋಜನೆ ಮೂಲಕ ಒಟ್ಟಾರೆ 150 ಎಂಎಲ್‌ಡಿ ನೀರು ದೊರೆಯಲಿದ್ದು, ಅದರಲ್ಲಿ 16 ಎಂಎಲ್‌ಡಿ ಚಾಮುಂಡೇಶ್ವರಿ ಕ್ಷೇತ್ರಕ್ಕೆ ಹಾಗೂ 26 ಎಂಎಲ್‌ಡಿ ನೀರು ಹುಣಸೂರು ಕ್ಷೇತ್ರಕ್ಕೆ ಸರಬರಾಜಾಗಲಿದ್ದು, ಉಳಿದ ನೀರು ಮೈಸೂರು ನಗರಕ್ಕೆ ಪೂರೈಕೆಯಾಗಲಿದೆ. ಎಂದು ಪ್ರತಾಪ್ ಸಿಂಹ ಹೇಳಿದರು.

ಮಂಡ್ಯ ಬಳಿ ಎಕ್ಸ್‌ಪ್ರೆಸ್ ವೇ ತಡೆ

ಸ್ಥಳದಲ್ಲಿ ನಿರ್ಮಾಣ ಮಾಡದೇ ಇರುವುದರಿಂದ ಜನ ಸಾಮಾನ್ಯರು ಶಾಲೆ–ಕಾಲೇಜು ಗಳು, ಆಸ್ಪತ್ರೆ, ಡೈರಿ, ಪಶು ಚಿಕಿತ್ಸಾಲಯಕ್ಕೆ ಹೋಗಬೇಕಾದರೆ ಸುತ್ತಿ ಬಳಸಿ ಹೋಗು ವಂತಾಗಿದೆ. ಇದರಿಂದ ಸ್ಥಳೀಯರಿಗೆ ತೊಂದರೆಯಾಗಿದೆ. ಅಲ್ಲದೇ ಈ ಹೆದ್ದಾರಿ ನಿರ್ಮಾಣದ ನಂತರ ಈ ಭಾಗದಲ್ಲಿ ಕಳ್ಳತನ ಹೆಚ್ಚಾಗಿದ್ದು, ಆದ್ದರಿಂದ ಜನರಿಗೆ ಅನುಕೂಲವಾಗುವಂತೆ ಗ್ರಾಮಗಳ ಬಳಿಯೇ ಸೇತುವೆ ನಿರ್ಮಿಸುವಂತೆ ಆಗ್ರಹಿಸಿದರು.

ಈ ವೇಳೆ ಸ್ಥಳಕ್ಕೆ ಭೇಟಿ ನೀಡಿದ ಎಸ್ಪಿ ಎನ್.ಯತೀಶ್, ರಸ್ತೆ ಬಂದ್‌ನಿಂದ ಸಾರ್ವಜನಿಕರ ಓಡಾಟಕ್ಕೆ ತೊಂದರೆಯಾಗುತ್ತಿದ್ದು, ಹೋರಾಟ ಕೈಬಿಡುವಂತೆ ಮನವಿ ಮಾಡಿದರು. ಇದಕ್ಕೆ ಸೊಪ್ಪು ಹಾಕದ ರೈತ ಮುಖಂಡ ಮಧು ಚಂದನ್ ಹಾಗೂ ಗ್ರಾಮಸ್ಥರು ಈ ಭಾಗದಲ್ಲಿ ಕೆಳಸೇತುವೆ ನಿರ್ಮಾಣ ಮಾಡುತ್ತೇವೆಂದು ಲಿಖಿತವಾಗಿ ಪತ್ರ ನೀಡುವವರೆಗೂ ಪ್ರತಿಭಟನೆ ಹಿಂಪಡೆಯುವುದಿಲ್ಲ ಎಂದು ಪಟ್ಟು ಹಿಡಿದರು. ರೈತರ ಹೋರಾಟ ತೀವ್ರಗೊಳ್ಳುತ್ತಿರುವುದನ್ನು ಅರಿತ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಅಧಿಕಾರಿಗಳು ಅಂಡರ್ ಪಾಸ್ ನಿರ್ಮಿಸಲು ಈಗಾಗಲೇ ಸೂಚನೆ ಇದೆ ಎಂಬ ಆರ್ಡರ್ ಕಾಪಿ ತೋರಿಸಿದರು. ಇದನ್ನು ಓದಿದ ಮಧುಚಂದನ್, ಇದು ಹಳೆಯ ಪತ್ರ, ಇದಕ್ಕೆ ಯಾವುದೇ ಕಿಮ್ಮತ್ತಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿ, ಅಧಿಕಾರಿಗಳ ಎದುರಲ್ಲೇ ಪತ್ರವನ್ನು ಹರಿದು ಹಾಕಿದರು. ನಿಮ್ಮ ಮೇಲಿನ ಅಧಿಕಾರಿಗಳಿಗೆ ಹೇಳಿ, ನಮಗೆ ಅಧಿಕೃತ ಲಿಖಿತ ಭರವಸೆ ನೀಡುವವರೆಗೆ ಈ ಹೋರಾಟ ನಿಲ್ಲುವುದಿಲ್ಲ ಎಂದು ಸ್ಪಷ್ಟಪಡಿಸಿದರು. ಆಗ ಅಧಿಕಾರಿಗಳು ಬಂದ ದಾರಿಗೆ ಸುಂಕವಿಲ್ಲ ಎಂಬಂತೆ ಹಿಂತಿರುಗಿದರು.

ಈ ವೇಳೆ ಎಸ್ಪಿ ಯತೀಶ್ ಧರಣಿ ಕೈ ಬಿಡುವಂತೆ ಮತ್ತೊಮ್ಮೆ ಮನವಿ ಮಾಡಿ ಸಂಬಂಧಪಟ್ಟ ಅಧಿಕಾರಿಗಳ ಜೊತೆ ಮಾತನಾಡಿ ನಿಮ್ಮ ಸಮಸ್ಯೆ ಬಗೆಹರಿಸಲು ಪ್ರಯತ್ನಿಸುತ್ತೇನೆ ಎಂದರು. ಇದಕ್ಕೆ ಹೋರಾಟಗಾರರು ಒಪ್ಪದ ಕಾರಣ ಪೊಲೀಸರು ಪ್ರತಿಭಟನಾಕಾರರ ಮೇಲೆ ಲಘು ಲಾಠಿ ಪ್ರಹಾರ ನಡೆಸಿ, ಹೋರಾಟಗಾರರನ್ನು ಚದುರಿಸಿದರು. ಅಲ್ಲದೇ ರೈತ ಮುಖಂಡ ಮಧು ಚಂದನ್ ಬಂಧಿಸಿದರು. ಮೈಸೂರು–ಬೆಂಗಳೂರು ರಾಷ್ಟ್ರೀಯ ಹೆದ್ದಾರಿ ಬಂದ್ ಮಾಡಿದ್ದ ಪ್ರತಿಭಟನಾಕಾರರಿಗೆ ಇನ್ನು 2 ತಿಂಗಳಲ್ಲಿ ಅಂಡರ್ ಪಾಸ್ ಕಾಮಗಾರಿ ಆರಂಭಿಸುವ ಭರವಸೆಯನ್ನು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಅಧಿಕಾರಿಗಳು ನೀಡಿದ್ದಾರೆ. 2 ತಿಂಗಳಲ್ಲಿ ಕಾಮಗಾರಿ ಆರಂಭಿಸುವ ಬಗ್ಗೆ ದೆಹಲಿಯಿಂದ ಫ್ಯಾಕ್ಸ್ ಮೂಲಕ ಸಂದೇಶ ಬಂದ ಹಿನ್ನಲೆಯಲ್ಲಿ ಹೋರಾಟಗಾರರು ಧರಣಿಯನ್ನು ತಾತ್ಕಾಲಿಕವಾಗಿ ಹಿಂಪಡೆದರು. ಪ್ರತಿಭಟನೆಯಿಂದ ಮೈಸೂರು–ಬೆಂಗಳೂರು ರಾಷ್ಟ್ರೀಯ ಹೆದ್ದಾರಿಯ ಸಂಚಾರ ಸಂಪೂರ್ಣ ಅಸ್ತವ್ಯಸ್ತಗೊಂಡಿತ್ತು. ಬೆಳಗ್ಗೆ 8.30ಕ್ಕೆ ಆರಂಭವಾದ ಹೆದ್ದಾರಿ ತಡೆ ಮಧ್ಯಾಹ್ನ 12 ಗಂಟೆಯವರೆಗೂ ನಡೆದ ಪರಿಣಾಮ ಕಿಲೋ ಮೀಟರ್‌ಗಟ್ಟಲೇ ವಾಹನ ಸಂಚಾರ ಅಸ್ತವ್ಯಸ್ತಗೊಂಡಿತ್ತು. ಪ್ರತಿಭಟನೆಯಲ್ಲಿ ರೈತ ಮುಖಂಡರಾದ ಪ್ರಸನ್ನಗೌಡ, ನಾಗರೇವಕ್ಕ, ಕೆಂಪೂಗೌಡ, ಚಿಕ್ಕದೇಗೌಡ, ಮಹೇಶ್, ಸಿದ್ದೇಗೌಡ, ಜಯರಾಂ, ಹರೀಶ್ ಸೇರಿದಂತೆ ಹನಕೆರೆ, ಕನ್ನಲಿ, ಗೌಡಗೆರೆ ಗ್ರಾಪಂ ವ್ಯಾಪ್ತಿಯ 35 ಗ್ರಾಮಸ್ಥರು ಪಾಲ್ಗೊಂಡಿದ್ದರು.

ವಿವರಣೆ ಪಡೆದ ಮುಖ್ಯ ಕಾರ್ಯದರ್ಶಿ

ಮಾನಮರ್ಯಾದೆ ಹರಾಜು ಆಗುತ್ತಿದೆ ಎಂದು ತಮ್ಮ ಆಪ್ತ ಸಚಿವರ ಬಳಿ ಅಸಮಾಧಾನ ತೋಡಿಕೊಂಡಿರುವ ಮುಖ್ಯಮಂತ್ರಿಯವರು, ಇಬ್ಬರ ಬಗ್ಗೆ ಯಾವ ಶಿಸ್ತಿನ ಕ್ರಮ ಕೈಗೊಳ್ಳಬೇಕು ಎಂಬುದರ ಬಗ್ಗೆ ಹಿರಿಯ ಸಚಿವರಿಂದ ಮಾಹಿತಿ ಪಡೆದಿದ್ದಾರೆ.

ವಿಧಾನಸಭೆಯ ಅಧಿವೇಶನ ಆರಂಭವಾಗುವುದಕ್ಕೂ ಮುನ್ನವೇ ಇಬ್ಬರೂ ಅಧಿಕಾರಿಗಳಿಗೆ ನೋಟಿಸ್ ಜಾರಿ ಮಾಡಿ, ತುರ್ತು ವಿಚಾರಣೆ ನಡೆಸಿ ವರದಿ ನೀಡುವಂತೆ ಮುಖ್ಯಕಾರ್ಯದರ್ಶಿಯವರಿಗೆ ಸಿಎಂ ಆದೇಶಿಸಿದ್ದರು. ಇದರ ಬೆನ್ನಲ್ಲೇ ಮುಖ್ಯಕಾರ್ಯದರ್ಶಿಯವರು ಐಎಎಸ್ ಅಧಿಕಾರಿ ರೋಹಿಣಿ ಸಿಂಧೂರಿ ಅವರನ್ನು ಮೊದಲ ಅರ್ಧ ದಿನ, ಮಧ್ಯಾಹ್ನದ ನಂತರ ಡಿ. ರೂಪಾ ಅವರನ್ನು ವಿಧಾನಸೌಧದ ತಮ್ಮ ಕಚೇರಿಗೆ ಕರೆಸಿಕೊಂಡು ಅವರ ಬೀದಿ ಕಾಳಗದ ಬಗ್ಗೆ ಮಾಹಿತಿ ಪಡೆದಿದ್ದಲ್ಲದೆ, ಎಚ್ಚರಿಕೆ ನೀಡಿದ್ದಾರೆ ಎಂದು ಉನ್ನತ ಮೂಲಗಳು ತಿಳಿಸಿವೆ. ಪರಸ್ಪರ ದೂರುಗಳಿದ್ದರೆ, ಸಂಬಂಧಪಟ್ಟವರಿಗೆ ಲಿಖಿತ ಹೇಳಿಕೆ ನೀಡಿ, ಕ್ರಮಕ್ಕೆ ಒತ್ತಾಯಿಸುವ ಬದಲು ಮಾಧ್ಯಮಗಳಲ್ಲಿ ನಿಮ್ಮ ಜಗಳವನ್ನು ಬೀದಿಗೆ ತಂದಿರುವುದು ಸರಿಯಲ್ಲ ಎಂದು ಮುಖ್ಯಕಾರ್ಯದರ್ಶಿಯವರು ಖಾರವಾಗಿ ಹೇಳಿದ್ದಾರೆ ಎಂದು ಇದೇ ಮೂಲಗಳು ತಿಳಿಸಿವೆ.

ಭಾರಿ ಪ್ರಭಾವಿಗಳಾದ ಈ ಇಬ್ಬರೂ ಹಿರಿಯ ಅಧಿಕಾರಿಗಳು ಮುಖ್ಯಕಾರ್ಯದರ್ಶಿಯವರ ಭೇಟಿ ಸಂದರ್ಭದಲ್ಲಿ ಪರಸ್ಪರ ಒಬ್ಬರಿಗೊಬ್ಬರು ದೂರಿನ ಸರಮಾಲೆಯನ್ನಿಟ್ಟು ಸೇವೆಯಿಂದ ಅಮಾನತು ಮಾಡುವಂತೆ ಮತ್ತು ಕಾನೂನು ಕ್ರಮ ಜರುಗಿಸುವಂತೆ ಒತ್ತಾಯಿಸಿಕೊಂಡಿದ್ದಾರೆ. ರೋಹಿಣಿ ಮತ್ತು ರೂಪಾ ಅವರು ಎರಡನೇ ದಿನವಾದ ಇಂದೂ ಸಾಮಾಜಿಕ ಜಾಲತಾಣಗಳಲ್ಲಿ ವಾಕ್ಸಮರ ಮುಂದುವರೆಸುವುದರ ಜೊತೆಗೆ ಮಾಧ್ಯಮಗಳ ಮುಂದೆಯು ಹೇಳಿಕೆ ನೀಡಿದ್ದಾರೆ. ಮುಖ್ಯಕಾರ್ಯದರ್ಶಿಯವರ ಸೂಚನೆಯ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ರೋಹಿಣಿ ಅವರು, ಐಪಿಎಸ್ ಅಧಿಕಾರಿ ರೂಪಾ ಅವರಿಗೆ ಮಾನಸಿಕ ಚಿಕಿತ್ಸೆ ಅಗತ್ಯವಿದೆ. ನನ್ನ ವಿವರಣೆ ಸಂದರ್ಭದಲ್ಲಿ ಇದನ್ನೂ ತಿಳಿಸಿದ್ದೇನೆ. ಆಕೆ ಮಾಡಿರುವ ಆರೋಪದಲ್ಲಿ ಯಾವುದೇ ಹುರುಳಿಲ್ಲ. ನನ್ನನ್ನು ತೇಜೋವಧೆ ಮಾಡುವ ಮತ್ತು ಮಾಧ್ಯಮಗಳಲ್ಲಿ ಬಿಂಬಿಸಿಕೊಳ್ಳಲು ಇಂತಹ ಆರೋಪ ಮಾಡುತ್ತಿದ್ದಾರೆ ಎಂದು ದಾಖಲೆ ಸಮೇತ ಮುಖ್ಯಕಾರ್ಯದರ್ಶಿಯವರಿಗೆ ದೂರು ನೀಡಿದ್ದೇನೆ. ರೂಪಾ ಅವರು ಸೇವಾ ನಿಯಮಗಳನ್ನು ಉಲ್ಲಂಘಿಸಿದ್ದಾರೆ.

ಅವರ ವಿರುದ್ಧ ಕಾನೂನು ಕ್ರಮ ಜರುಗಿಸಬೇಕು. ನಾವು ಅಧಿಕಾರಿಗಳು ಮಾಧ್ಯಮದ ಮುಂದೆ ಬರಬಾರದು ಎಂಬ ನಿಯಮವಿದೆ. ಆದರೆ ಅವರು ಇಲ್ಲ ಸಲ್ಲದ ಆರೋಪ ಮಾಡಿದ್ದಾರೆ. ಅವರ ಕಾರ್ಯವ್ಯಾಪ್ತಿಯೇ ಬೇರೆ. ನನ್ನ ವೈಯಕ್ತಿಕ ಜೀವನದ ಬಗ್ಗೆ ಮಾತನಾಡಿದ್ದಾರೆ. ಅವರು ನನ್ನ ಮೇಲೆ ಮಾಡಿರುವ ಎಲ್ಲಾ ಆರೋಪಗಳಿಗೂ ಮುಖ್ಯಕಾರ್ಯದರ್ಶಿಯವರಿಗೆ ಸ್ಪಷ್ಟೀಕರಣ ನೀಡಿದ್ದೇನೆ ಎಂದರು. ತದನಂತರ ಮುಖ್ಯಕಾರ್ಯದರ್ಶಿಯವರನ್ನು ಭೇಟಿ ಮಾಡಿದ ರೂಪಾ ಅವರು, ಸರ್ಕಾರಿ ಆಡಳಿತವನ್ನು ತಮ್ಮ ಪತಿ ಹಾಗೂ ಮಾವನ ರಿಯಲ್ ಎಸ್ಟೇಟ್‌ಗೆ ದುರುಪಯೋಗ ಮಾಡಿಕೊಳ್ಳುತ್ತಿದ್ದಾರೆ ಎಂದು ಕೆಲವು ದಾಖಲೆ ಸಮೇತ ಮಾಹಿತಿ ನೀಡಿದ್ದಾರೆ. ತಮ್ಮ ಕುಟುಂಬದ ರಿಯಲ್ ಎಸ್ಟೇಟ್‌ಗೆ ಅನುಕೂಲ ಮಾಡಿಕೊಡಲು ಹಿರಿಯ ಅಧಿಕಾರಿಗಳನ್ನು ಬಳಕೆ ಮಾಡಿಕೊಂಡಿದ್ದಾರೆ. ಈಕೆ ಎಲ್ಲಿ ಎಲ್ಲಿ ಅಧಿಕಾರದಲ್ಲಿದ್ದರೋ ಅಂತಹ ಕಡೆ ಇವರ ಮೇಲೆ ಭ್ರಷ್ಟಾಚಾರದ ಆರೋಪಗಳು ಕೇಳಿ ಬಂದಿವೆ. ಈ ಬಗ್ಗೆ ತನಿಖೆ ನಡೆಸಬೇಕೆಂದು ಒತ್ತಾಯಿಸಿದ್ದಾರೆ.

ಮುಖ್ಯಕಾರ್ಯದರ್ಶಿಯವರನ್ನು ಭೇಟಿ ಮಾಡುವುದಕ್ಕೂ ಮುನ್ನ ರೂಪಾ ಅವರು ಆಕೆಯ ಚಿತ್ರವನ್ನು ತಮ್ಮ ಸಾಮಾಜಿಕ ಮಾಧ್ಯಮ ಖಾತೆಯಲ್ಲಿ ಹಂಚಿಕೊಂಡಿದ್ದಾರೆ. ರೋಹಿಣಿ ಅವರು ಡಿಲೀಟೆಡ್ ನಗ್ನಚಿತ್ರಗಳ ಬಗ್ಗೆ ಮಾತನಾಡುತ್ತಾರಾ ಎಂದು ಪ್ರಶ್ನಿಸಿದ ಅವರು ಈ ಚಿತ್ರಗಳನ್ನು ಅಧಿಕಾರಿಗಳಿಗೆ ಕಳುಹಿಸಿ ತಮ್ಮ ಮೇಲಿರುವ ಭ್ರಷ್ಟಾಚಾರ ಆರೋಪಗಳ ತನಿಖೆಯಿಂದ ಮುಕ್ತರಾಗಲು ಯತ್ನಿಸಿದ್ದಾರೆ ಎಂದು ಬಲವಾಗಿ ಆರೋಪಿಸಿದ್ದಾರೆ. ತಮ್ಮ ಫೇಸ್‌ಬುಕ್‌ನಲ್ಲಿ ಮೆಸೇಜ್ ಡಿಲಿಟ್ ಆಗಿರುವ ಚಿತ್ರಗಳ ಸ್ಕ್ರೀನ್‌ಶಾಟ್ ಹಂಚಿಕೊಂಡಿರುವ ರೂಪಾ ಈ ಚಿತ್ರಗಳ ಬಗ್ಗೆ ಮಾಧ್ಯಮಗಳಿಗೆ ಹೇಳಿಕೆ ನೀಡಿ ಎಂದು ಸಿಂಧೂರಿ ಅವರನ್ನು ಪ್ರಶ್ನಿಸಿದ್ದಾರೆ.

ರೋಹಿಣಿ ಸಿಂಧೂರಿ ವಿರುದ್ಧ ಮುಖ್ಯ ಕಾರ್ಯದರ್ಶಿ ಬಳಿ ದೂರಿನ ಪಟ್ಟಿ ಸಲ್ಲಿಸಿರುವ ರೂಪ

ತನಿಖೆ ವೇಳೆ ತಮ್ಮನ್ನು ಸಾಕ್ಷ್ಯವಾಗಿ ಪರಿಗಣಿಸಲು ಮನವಿ




ಡಿ.ರೂಪ

ಬೆಂಗಳೂರು, ಫೆ.20– ರಾಜ್ಯದ ಮುಖ್ಯ ಕಾರ್ಯದರ್ಶಿ ವಂದಿತಾ ಶರ್ಮಾ ಅವರನ್ನು ಇಂದು ಮಧ್ಯಾಹ್ನ ಭೇಟಿ ಮಾಡಿದ ಹಿರಿಯ ಐಪಿಎಸ್ ಅಧಿಕಾರಿ ಡಿ.ರೂಪ ಅವರು ಐಎಎಸ್ ಅಧಿಕಾರಿ ರೋಹಿಣಿ ಸಿಂಧೂರಿ ವಿರುದ್ಧ 7 ಭ್ರಷ್ಟಾಚಾರ ಹಾಗೂ ಕರ್ತವ್ಯ ಲೋಪದ ಆರೋಪಗಳನ್ನು ಮಾಡಿದ್ದು, ರೋಹಿಣಿ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ಮನವಿ ಮಾಡಿದ್ದಾರೆ.

ರೂಪ ಸಲ್ಲಿಸಿರುವ ಮನವಿಯಲ್ಲಿ ರೋಹಿಣಿ ವಿರುದ್ಧದ ಹಳೆಯ ಪ್ರಕರಣಗಳನ್ನು ಉಲ್ಲೇಖಿಸಲಾಗಿದ್ದು, ಈ ಪ್ರಕರಣಗಳ ಸಂಬಂಧ ಯಾವುದೇ ರೀತಿಯ ಕ್ರಮ ಜರುಗದೇ ಇರುವುದನ್ನು ಮುಖ್ಯ ಕಾರ್ಯದರ್ಶಿಗಳ ಗಮನಕ್ಕೆ ತರಲಾಗಿದೆ.

ಕೋವಿಡ್ ಸಂದರ್ಭದಲ್ಲಿ ಸಾವಿರಾರು ಮಂದಿ ಸಾವನ್ನಪ್ಪುತ್ತಿದ್ದರೂ ಮೈಸೂರಿನ ಜಿಲ್ಲಾಧಿಕಾರಿಗಳ ನಿವಾಸದ ಆವರಣದಲ್ಲಿ ರೋಹಿಣಿ ಸಿಂಧೂರಿ ಈಜುಕೊಳ ನಿರ್ಮಿಸಿದ ಸಂಬಂಧ ಪ್ರಾಥಮಿಕ ತನಿಖೆ ನಡೆಸಿದ್ದ ಐಎಎಸ್ ಅಧಿಕಾರಿ ಡಾ.ರವಿಶಂಕರ್ ಅವರು ರೋಹಿಣಿ ತಪ್ಪಿತಸ್ಥರೆಂದು ವರದಿ ನೀಡಿದ್ದಾರೆ. ಪ್ರಾಥಮಿಕ ವಿಚಾರಣೆಯಲ್ಲಿ ಆರೋಪ ಸಾಬೀತಾಗಿರುವಾಗ ಮುಂದಿನ ತಾರ್ಕಿಕ ಹಂತವು ವಿವರವಾದ ಶಿಸ್ತಿನ ವಿಚಾರಣೆ ನಡೆಸುವುದೇ ಆಗಿದ್ದು, ಹಿರಿಯ ಐಎಎಸ್ ಅಧಿಕಾರಿ ಡಾ.ರವಿಶಂಕರ್ ತಮ್ಮ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿ ತಿಂಗಳುಗಳೇ ಕಳೆದಿದ್ದು, ಇನ್ನೂ ಶಿಸ್ತಿನ ವಿಚಾರಣೆ ಆರಂಭವಾಗದಿರುವ ಕಾರಣ ನ್ಯಾಯದ ಹಿತದೃಷ್ಟಿಯಿಂದ ರೋಹಿಣಿ ಸಿಂಧೂರಿ ವಿರುದ್ಧ ಶಿಸ್ತಿನ ಪ್ರಕ್ರಿಯೆಯನ್ನು ತ್ವರಿತಗೊಳಿಸಿ ಎಂದು ಮನವಿ ಮಾಡಿರುವ ರೂಪ ಈ ಪ್ರಕರಣಕ್ಕೆ ಸಂಬಂಧಪಟ್ಟ ಕಡತವನ್ನು ರೋಹಿಣಿಗೆ ಸಹಾಯ ಮಾಡುವ ಉದ್ದೇಶದಿಂದ ನಿಮ್ಮ (ಮುಖ್ಯ ಕಾರ್ಯದರ್ಶಿ) ಮುಂದೆ ಇಡಲು ವಿಳಂಬ ಮಾಡಲಾಗುತ್ತಿದೆ ಎಂಬ ಮಾತುಗಳು ಕೇಳಿ ಬರುತ್ತಿದ್ದು, ನಿಮ್ಮ ಮುಂದೆ ಕಡತ ಇಡಲು ವಿಳಂಬಕ್ಕೆ ಕಾರಣರಾದ ಅಧಿಕಾರಿಗಳ ವಿರುದ್ಧ ಕ್ರಮ ಜರುಗಿಸಬೇಕು ಎಂದು ಕೋರಿದ್ದಾರೆ.

ವೆಬ್‌ಸೈಟ್‌ನಲ್ಲಿ ಲಭ್ಯವಿರುವ 2022ನೇ ವರ್ಷದ ಜನವರಿಯಿಂದ 2023ನೇ ವರ್ಷದ ಜನವರಿವರೆಗೆ ರೋಹಿಣಿ ಸಿಂಧೂರಿ ಸಲ್ಲಿಸಿರುವ ಸ್ಥಿರ ಆಸ್ತಿ ರಿಟರ್ನ್‌ನಲ್ಲಿ ಅವರು ಜಾಲಹಳ್ಳಿಯಲ್ಲಿ ನಿರ್ಮಿಸುತ್ತಿರುವ ಬೃಹತ್ ಮನೆಯನ್ನು ನಮೂದಿಸಿಲ್ಲ. ಆದರೆ ಅವರು ಬೃಹತ್ ಮನೆ ನಿರ್ಮಿಸುತ್ತಿರುವ ಬಗ್ಗೆ ಚಾಟ್ ಮೂಲಕ ಬಹಿರಂಗಪಡಿಸಿದ್ದಾರೆ. ಈ ಮನೆಗೆ ಇಟಲಿಯಿಂದ ಒಂದರಿಂದ ಎರಡು ಕೋಟಿ ಮೌಲ್ಯದ ಪೀಠೋಪಕರಣಗಳನ್ನು ತರಲು ವೆಚ್ಚ ಮಾಡಲಾಗಿದೆ. ಬಾಗಿಲುಗಳ ಹಿಂಜ್‌ಗಳಿಗೆ 6 ಲಕ್ಷ ರೂ. ಹಾಗೂ ಬೇರೊಂದು ಖರ್ಚು 26 ಲಕ್ಷ ಮಾಡಲಾಗಿದೆ ಎಂಬುದನ್ನು ಚಾಟ್ ಸಂಭಾಷಣೆಗಳಲ್ಲಿ ಕಂಡು ಬಂದಿದೆ.

> ಶಾಸಕ ಸಾರಾ ಮಹೇಶ್ ಬಳಿ ಐಎಎಸ್ ಅಧಿಕಾರಿ ರೋಹಿಣಿ ಸಿಂಧೂರಿ ಸಂಧಾನಕ್ಕೆ ಹೋಗಿರಲಿಲ್ಲ. ನಾನೇ ಆಕೆಯನ್ನು ಕಳುಹಿಸಿದ್ದೆ. ಅದಕ್ಕೆ ನಾನೇ ಜವಾಬ್ದಾರನು. ಈ ವಿಚಾರ ವಿಧಾನಸಭೆಯಲ್ಲಿ ಪ್ರಸ್ತಾಪವಾಗುತ್ತದೆ ಎಂದು ತಿಳಿದಾಗ ನಾನೇ ರೋಹಿಣಿಯನ್ನು ಕರೆದು ಕೇಳಿದೆ. ಆಗ ಆಕೆ ಯಾರೋ ಮಾಹಿತಿ ನೀಡಿದ್ದರು ಅದಕ್ಕೆ ಸರ್ವೇ ಮಾಡಿಸಿದೆ. ಆದರೆ ಅದು ತಪ್ಪಾಗಿದೆ ಎಂದು ಹೇಳಿದರು. ರೋಹಿಣಿ ಮೈಸೂರು ಜಿಲ್ಲಾಧಿಕಾರಿಯಾಗಿದ್ದರು. ಅವರಿಗೆ ಬಂದ ಮಾಹಿತಿಯಂತೆ ಸರ್ವೇ ಮಾಡಿಸಿದ್ದಾರೆ. ತಪ್ಪಾಗಿದೆ ಎಂಬುದನ್ನು ಅರ್ಥೈಸಿಕೊಂಡಿದ್ದಾರೆ. ಹೀಗಾಗಿ ನಾನೇ ಅವರನ್ನು ಸಾರಾ ಮಹೇಶ್ ಬಳಿ ಕಳುಹಿಸಿದ್ದೇನೆ
>
> 
>
> ಹೊರತು ಅವಾಗಿ ಹೋಗಿಲ್ಲ. ಒಂದು ಸಮಸ್ಯೆ ಬಗೆಹರಿಯುತ್ತದೆ ಎಂದಾದರೆ ಸಂಧಾನ ತಪ್ಪೇನಲ್ಲ. ಸಮಸ್ಯೆ ಬಗೆಹರಿಯುವುದು ಮುಖ್ಯವಾಗುತ್ತದೆ.
>
> – ಜೆ.ಸಿ. ಮಾಧುಸ್ವಾಮಿ, ಕಾನೂನು ಸಚಿವ.

ಕೆಲವು ಕಚೇರಿಗಳ ಮೇಲೆ ತನ್ನ ಪ್ರಭಾವ ಬಳಸಿಕೊಂಡು ಜರ್ಮನ್‌ನಿಂದ ತಂದ ಉಪಕರಣಗಳಿಗೆ ಸುಂಕವನ್ನು ಮುಕ್ತಗೊಳಿಸಲು ರೋಹಿಣಿ ಪ್ರಯತ್ನಿಸಿದ್ದಾರೆ(ಚಾಟ್ ಸಂಭಾಷಣೆಯಲ್ಲಿ 2005ರ ಬ್ಯಾಚ್ ಅಧಿಕಾರಿ ಕಾನ್ಸೂಲ್ ಜನರಲ್ ಫ್ರಾಂಕ್ ಫರ್ಟ್ ಅವರ ಹೆಸರು ಉಲ್ಲೇಖಿಸಲಾಗಿದೆ) ಈ ಚಾಟ್ ಸಂಭಾಷಣೆಯು 2022ರ ಜನವರಿ 7ರಂದು ನಡೆದಿದ್ದು, ಇದು ಆದಾಯಕ್ಕೆ ಅಸಮಾನವಾದ ಆಸ್ತಿ ಹಾಗೂ ಭ್ರಷ್ಟಚಾರದ ವಿಷಯವಾಗಿರುವುದರಿಂದ ದಯವಿಟ್ಟು ಇದರ ಬಗ್ಗೆ ವಿಚಾರಿಸಿ ಈ ವಿಚಾರದಲ್ಲಿ ನನ್ನನ್ನು ಸಾಕ್ಷಿಯಾಗಿ ಕರೆಯಬಹುದು. ಚಾಟ್ ಸಂಭಾಷಣೆಗಳ ಮೂಲಗಳನ್ನು ನಾನು ಒದಗಿಸುತ್ತೇನೆ. ಈ ಬೃಹತ್ ಮನೆ ಆಕೆಯ ಗಂಡ ಅಥವಾ ಅತ್ತೆಯ ಮನೆಯಾಗಿದ್ದರೂ ಸಹ ಅದಕ್ಕೆ ಖರ್ಚು ಮಾಡಿರುವವರು ಯಾರು ಎಂಬುದು ಚಾಟ್ ಸಂಭಾಷಣೆಯಲ್ಲಿ ಬಹಿರಂಗವಾಗಿರುವುದರಿಂದ ರೋಹಿಣಿ ತಾನೂ ಮಾಡಿದ ಸ್ಥಿರ ಆಸ್ತಿ ರಿಟರ್ನ್‌ನಲ್ಲಿ ಈ ಆಸ್ತಿಯನ್ನು ಉಲ್ಲೇಖಿಸಬೇಕು. ಅಲ್ಲದೇ ಈ ಆಸ್ತಿಗಾಗಿ ಖರ್ಚು ಮಾಡಿರುವ ಹಣದ ಆದಾಯದ ಮೂಲವನ್ನು ವಿಚಾರಿಸಬೇಕು ಎಂದು ರೂಪ ಮನವಿ ಮಾಡಿದ್ದಾರೆ.

ರೋಹಿಣಿ ಸಿಂಧೂರಿ ವಿರುದ್ಧ ದಾಖಲಾಗಿರುವ ಪ್ರಕರಣವೊಂದರ ತನಿಖೆ ಕೈಗೆತ್ತಿಕೊಳ್ಳಲು ಅನುಮತಿ ಕೋರಿ ಸರ್ಕಾರಕ್ಕೆ ಲೋಕಾಯುಕ್ತದಿಂದ ಪತ್ರ ಬರೆಯಲಾಗಿತ್ತು. ಆದರೆ ಅದಕ್ಕೆ ಸರ್ಕಾರದಿಂದ ಅನುಮತಿ ತಿರಸ್ಕರಿಸಲಾಗಿದೆ. ಆದ್ದರಿಂದ ಸರ್ಕಾರದ ಈ ನಿರ್ಧಾರವನ್ನು ಮರುಪರಿಶೀಲನೆ ಮಾಡಿ ಪ್ರಕರಣದ ತನಿಖೆಗೆ ಲೋಕಾಯುಕ್ತಾಗೆ ಅನುಮತಿ ನೀಡಬೇಕು ಎಂದು ಕೋರಿದ್ದಾರೆ.

ರೋಹಿಣಿ ಅವರು ತಮ್ಮ ತವರು ರಾಜ್ಯದಲ್ಲಿರುವ ತಿರುಪತಿಯ ಟಿಟಿಡಿ ಪ್ರದೇಶದಲ್ಲಿ ನಿರ್ಮಾಣವಾಗುತ್ತಿರುವ ಕರ್ನಾಟಕ ಭವನಕ್ಕೆ ಕೇವಲ ವಾಸ್ತು ವಿನ್ಯಾಸಕ್ಕೆ ಮಾತ್ರ ಆರ್ಕಿಟೆಕ್ಚರಲ್ ಕಂಪನಿಗೆ 10 ಕೋಟಿ ರೂ.ಗಳ ಆರ್ಡರ್ ನೀಡಿದ್ದಾರೆ ಎಂಬ ಆರೋಪವಿದೆ. ದತ್ತಿ ಆಯುಕ್ತರಾಗಿ ಟೆಂಡರ್ ಕರೆಯದೇ ಕರ್ನಾಟಕ ಪಾರದರ್ಶಕತೆ ಕಾಯ್ದೆಯನ್ನು ಉಲ್ಲಂಘಿಸಲಾಗಿದೆ. ದಯವಿಟ್ಟು ಈ ವಿಷಯದ ಬಗ್ಗೆ ತನಿಖೆ ಮಾಡಿ ಎಂದು ಮನವಿಯಲ್ಲಿ ಕೋರಿದ್ದಾರೆ.

ಮೈಸೂರಿನ ಆಡಳಿತ ತರಬೇತಿ ಸಂಸ್ಥೆಯಿಂದ ರೋಹಿಣಿ ಸಿಂಧೂರಿ ಅವರು ಕೆಲ ವಸ್ತುಗಳನ್ನು ಬೆಂಗಳೂರಿನಲ್ಲಿರುವ ಅವರ ವೈಯಕ್ತಿಕ ನಿವಾಸಕ್ಕೆ ಕೊಂಡೊಯ್ದಿದ್ದಾರೆ ಎಂದು ನೋಟಿಸ್ ನೀಡಲಾಗಿತ್ತು. ದಯವಿಟ್ಟು ಈ ವಿಷಯದಲ್ಲಿ ಕ್ರಮವನ್ನು ತ್ವರಿತಗೊಳಿಸಿ ಎಂದು ಕೇಳಿರುವ ರೂಪ ಈ ವಿಷಯದಲ್ಲಿ ವಿಚಾರಣೆಯನ್ನು ಚುರುಕುಗೊಳಿಸಿದರೆ ನನ್ನ ಬಳಿ ಚಾಟ್ ಸಂಭಾಷಣೆಗಳು ಇರುವುದರಿಂದ ನನ್ನನ್ನು ಸಾಕ್ಷಿಯಾಗಿ ಕರೆಯಬಹುದು. ಆಡಳಿತ ತರಬೇತಿ ಸಂಸ್ಥೆಯ ವಸ್ತುಗಳನ್ನು ತಮ್ಮ ತಾಯಿ ತೆಗೆದುಕೊಂಡು ಹೋಗಿದ್ದಾರೆ ಎಂದು ರೋಹಿಣಿ ತಮ್ಮ ಚಾಟ್‌ನಲ್ಲಿ ತಿಳಿಸಿದ್ದಾರೆ ಎಂದು ರೂಪ ತಮ್ಮ ದೂರಿನಲ್ಲಿ ಉಲ್ಲೇಖಿಸಿದ್ದಾರೆ.

ಐಎಎಸ್ ಅಧಿಕಾರಿ ಹರ್ಷಗುಪ್ತ ಅವರು ಆಹಾರ ಮತ್ತು ನಾಗರಿಕ ಪೂರೈಕೆ ಇಲಾಖೆ ಕಾರ್ಯದರ್ಶಿಯಾಗಿದ್ದಾಗ ಆ ಇಲಾಖೆಯ ಆಯುಕ್ತರಾಗಿದ್ದ ರೋಹಿಣಿ ಸಿಂಧೂರಿ ವಿರುದ್ಧ 2 ವರದಿಗಳನ್ನು ಸರ್ಕಾರಕ್ಕೆ ಕಳುಹಿಸಿದ್ದರು. ಸಕ್ಕರೆಗೆ ಸಂಬಂಧಿಸಿದಂತೆ ರಾಜ್ಯದ ಆದಾಯಕ್ಕೆ ರೋಹಿಣಿ ನಷ್ಟವನ್ನುಂಟು ಮಾಡಿದ್ದಾರೆ. ಆ ಸಮಯದಲ್ಲಿ 2 ಕೋಟಿ ಟನ್‌ಗಳಷ್ಟು ಸಕ್ಕರೆ ರಾಜ್ಯಕ್ಕೆ ನಷ್ಟವಾಗಿದೆ ಎಂದು ವರದಿಯಲ್ಲಿ ಉಲ್ಲೇಖಿಸಲಾಗಿದೆ. ಆದರೂ ಇದರ ಬಗ್ಗೆ ಯಾವುದೇ ಕ್ರಮ ಕೈಗೊಳ್ಳದ ಕಾರಣ ಈಗ ಕ್ರಮ ಕೈಗೊಳ್ಳಬೇಕು ಎಂದು ಅವರು ಕೋರಿದ್ದಾರೆ.

ರೋಹಿಣಿ ಸಿಂಧೂರಿ ಅವರು ತಮ್ಮ ಸಮಸ್ಯೆಗಳನ್ನು ರಾಜೀ ಮಾಡಿಕೊಳ್ಳಲು ಬಂದಿದ್ದರು ಎಂದು ಶಾಸಕ ಸಾ.ರಾ.ಮಹೇಶ್ ಅವರು ಸದನದಲ್ಲೇ ಹೇಳಿಕೆ ನೀಡಿದ್ದಾರೆ. ಒಂದು ಜಿಲ್ಲೆಯ ಜಿಲ್ಲಾಧಿಕಾರಿಯಾಗಿ ಅವರು ಮಾಡಿರುವ ಅಧಿಕೃತ ಕೆಲಸಗಳಿಗೆ ಯಾವುದೇ ರೀತಿಯ ರಾಜೀಗೆ ಅನುಮತಿ ನೀಡುವ ನಿಯಮವಿಲ್ಲ. ಆದರೆ ಈ ವಿಷಯದಲ್ಲಿ ರೋಹಿಣಿ ಸಿಂಧೂರಿ ಸೇವಾ ನೀತಿ ನಿಯಮಗಳನ್ನು ಉಲ್ಲಂಘಿಸಿರುವುದರಿಂದ ಅವರ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ರೂಪ ಮುಖ್ಯ ಕಾರ್ಯದರ್ಶಿಗಳಿಗೆ ನೀಡಿರುವ ದೂರಿನಲ್ಲಿ ಕೋರಿದ್ದಾರೆ.

ಮೈಸೂರು ಮಿತ್ರ ಮಂಗಳವಾರ 21 ಫೆಬ್ರವರಿ 2023

ಅನಧಿಕೃತ ಕಟ್ಟಡದಲ್ಲಿ ಪ್ರಾರ್ಥನೆ, ಮತಾಂತರ ಆರೋಪ

20 ಮಂದಿ ವಶಕ್ಕೆ, ಸೂಕ್ತ ಕಾನೂನು ಕ್ರಮಕ್ಕೆ ಒತ್ತಾಯಿಸಿ ಪ್ರತಿಭಟನೆ



ಕುಶಾಲನಗರ, ಫೆ.20– ಇಲ್ಲಿನ ಮಾರುಕಟ್ಟೆ ರಸ್ತೆಯ ಅಭಿಗೌಡ ಕಾಂಪ್ಲೆಕ್ಸ್‌ನಲ್ಲಿ ಅನಧಿಕೃತವಾಗಿ ಇಂಡಿಯನ್ ಪೆಂಟಕಾಸ್ಟಲ್ ಚರ್ಚ್ ಆಫ್ ಗಾಡ್ ಎಂಬ ಹೆಸರಿನಲ್ಲಿ ಪ್ರಾರ್ಥನೆ ಹಾಗೂ ಮತಾಂತರ ನಡೆಯುತ್ತಿದೆ ಎಂದು ಬಿಜೆಪಿ ಮತ್ತು ಹಿಂದೂಪರ ಸಂಘಟನೆ ಕಾರ್ಯಕರ್ತರು ಆಕ್ರೋಶ ವ್ಯಕ್ತಪಡಿಸಿ ಪ್ರತಿಭಟನೆ ನಡೆಸಿದ ಪರಿಣಾಮ 20 ಮಂದಿಯನ್ನು ವಶಕ್ಕೆ ಪಡೆಯಲಾಗಿದೆ. ಭಾನುವಾರ ಕಟ್ಟಡದ ಮೇಲಂತಸ್ತಿನಲ್ಲಿ ಪ್ರಾರ್ಥನೆ ನಡೆಯುತ್ತಿದ್ದ ಸ್ಥಳಕ್ಕೆ ಮುತ್ತಿಗೆ ಹಾಕಿದ ಸಂಘ ಪರಿವಾರದವರು ಈ ಕೃತ್ಯದಲ್ಲಿ ತೊಡಗಿರುವವರ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು. ಮಾಹಿತಿ ತಿಳಿದು ಸ್ಥಳಕ್ಕೆ ಆಗಮಿಸಿದ ಡಿವೈಎಸ್ಪಿ ಗಂಗಾಧರಪ್ಪ ಮತ್ತು ಪೊಲೀಸ್ ಸಿಬ್ಬಂದಿ ಈ ಸಂಬಂಧ ಚರ್ಚ್ ಮುಖ್ಯಸ್ಥ ರವಿ ಸೇರಿದಂತೆ 20ಕ್ಕೂ ಅಧಿಕ ಮಂದಿಯನ್ನು ವಶಕ್ಕೆ ಪಡೆದುಕೊಂಡರು.

ಇದೇ ಸಂದರ್ಭ ಚರ್ಚ್ ನಡೆಸುತ್ತಿರುವ ಕಟ್ಟಡ ಅನಧಿಕೃತವಾಗಿದೆ ಎಂದು ಆರೋಪಿಸಿ ಪುರಸಭೆ ಸದಸ್ಯ, ಬಿಜೆಪಿ ಜಿಲ್ಲಾ ಪ್ರಮುಖ ಅಮೃತ್‌ರಾಜ್ ನೇತೃತ್ವದಲ್ಲಿ ಸ್ಥಳದಲ್ಲಿ ಪ್ರತಿಭಟನೆ ನಡೆಯಿತು. ಕೂಡಲೆ ಈ ಅನಧಿಕೃತ ಕಟ್ಟಡದ ವಿರುದ್ಧ ಪುರಸಭೆ ಸೂಕ್ತ ಕ್ರಮ ಕೈಗೊಳ್ಳುವಂತೆ ಅಮೃತ್ ರಾಜ್ ಒತ್ತಾಯಿಸಿದರು. ಚರ್ಚ್‌ಗೆ ಸಂಬಂಧಿಸಿದವರ ವಿರುದ್ಧ ಸೂಕ್ತ ಕ್ರಮ ವಹಿಸುವಂತೆ ಜಿಲ್ಲಾಧಿಕಾರಿಗಳನ್ನು ಆಗ್ರಹಿಸಿದರು.

ವಿಎಚ್‌ಪಿ ಜಿಲ್ಲಾ ಸಹ ಕಾರ್ಯದರ್ಶಿ ಸಂತೋಷ್ ಮಾತನಾಡಿ, ಮತಾಂತರ ನಿಷೇದ ಕಾಯ್ದೆ ಜಾರಿಯಲ್ಲಿದ್ದರೂ ಎಗ್ಗಿಲ್ಲದೆ ಮತಾಂತರ ಪ್ರಕರಣಗಳು ಮರುಕಳಿಸುತ್ತಿವೆ. ನಾಲ್ಕಂತಸ್ತಿನ ಈ ಅನಧಿಕೃತ ಕಟ್ಟಡದಲ್ಲಿ 150 ರಿಂದ 200 ಮಂದಿ ನಿರಂತರ ಪ್ರಾರ್ಥನೆಯಲ್ಲಿ ತೊಡಗಿದ್ದಾರೆ. ಕೂಡಿಗೆ, ಕೊಪ್ಪ, ಬ್ಯಾಡಗೊಟ್ಟ, ಗುಡ್ಡೆಹೊಸೂರು ಮತ್ತಿತರ ಕಡೆಗಳ ಹಲವಾರು ಮಂದಿ ಇಲ್ಲಿ ಪ್ರಾರ್ಥನೆಯಲ್ಲಿ ತೊಡಗಿಸಿಕೊಳ್ಳುತ್ತಿದ್ದು ಎಲ್ಲರನ್ನು ಮತಾಂತರಗೊಳಿಸಲಾಗಿದೆ ಎಂದು ಆರೋಪಿಸಿದ ಅವರು, ಪೊಲೀಸರು ಈ ಬಗ್ಗೆ ಸೂಕ್ತ ತನಿಖೆ ನಡೆಸಿ ಕ್ರಮವಹಿಸುವಂತೆ ಆಗ್ರಹಿಸಿದರು. ಈ ಸಂದರ್ಭ ಸಂಘ ಪರಿವಾರದ ಪ್ರಮುಖರಾದ ರಾಜೀವ, ಸುಧೀರ್, ಹರ್ಷ, ಅನಂತು, ಗಣಪತಿ, ಲಾಲು, ಪ್ರವೀಣ್, ಹರೀಶ್ ಮತ್ತಿತರರು ಇದ್ದರು.

ಪೀಠೋಪಕರಣ ದಾಸ್ತಾನು ಕಟ್ಟಡಕ್ಕೆ ಬೆಂಕಿ

ಲಕ್ಷಾಂತರ ರೂ. ಮೌಲ್ಯದ ಮರ ಭಸ್ಮ



ಮಡಿಕೇರಿ, ಫೆ20– ನಗರದ ಹೆಸರಾಂತ ಮರದ ಪೀಠೋಪಕರಣ ಮಳಿಗೆಯೊಂದರ ಮರ ದಾಸ್ತಾನು ಕಟ್ಟಡಕ್ಕೆ ಬೆಂಕಿ ಬಿದ್ದು ಲಕ್ಷಾಂತರ ರೂ. ಮೌಲ್ಯದ ಪೀಠೋಪಕರಣ ಸುಟ್ಟು ಭಸ್ಮವಾದ ಘಟನೆ ಸೋಮವಾರ ನಸುಕಿನ 2 ಗಂಟೆಯ ವೇಳೆ ನಡೆದಿದೆ.

ವಿದ್ಯುತ್ ಶಾರ್ಟ್ ಸರ್ಕ್ಯೂಟ್‌ನಿಂದ ಈ ಬೆಂಕಿ ಅನಾಹುತ ಸಂಭವಿಸಿದೆ ಎಂದು ಶಂಕಿಸಲಾಗಿದ್ದು, ದಾಸ್ತಾನು ಕಟ್ಟಡದಲ್ಲಿದ್ದ ಮರ ಕೆಲಸ ಮಾಡುವ ಕಾರ್ಮಿಕರು ಪ್ರಾಣಾಪಾಯದಿಂದ ಪಾರಾಗಿದ್ದಾರೆ. ಅಗ್ನಿ ಶಾಮಕ ದಳದ ನಿರಂತರ ಕಾರ್ಯಾಚರಣೆಯ ಬಳಿಕ ಅಗ್ನಿ ತಹಬದಿಗೆ ಬಂದಿದೆ. ಘಟನೆ ಕುರಿತು ಮಡಿಕೇರಿ ನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ವಿವರಣೆ: ಕೈಗಾರಿಕಾ ಬಡಾವಣೆಯಲ್ಲಿರುವ ಹೆಸರಾಂತ ಪೀಠೋಪಕರಣ ಮಳಿಗೆಗೆ ಸೇರಿದ ದಾಸ್ತಾನು ಮಳಿಗೆಯಲ್ಲಿ ಸೋಮವಾರ ಬೆಳಗಿನ ಜಾವ ಆಕಸ್ಮಿಕವಾಗಿ ಬೆಂಕಿ ಕಾಣಿಸಿಕೊಂಡಿತು. ನೋಡು ನೋಡುತ್ತಿದ್ದಂತೆಯೇ ಒಣಗಿದ ಮರದ ದಾಸ್ತಾನು ಇದ್ದ ಕಾರಣ ಮೊದಲಿಗೆ ಕಟ್ಟಡದ ಹಿಂಬದಿಯ 2 ಅಂತಸ್ತು ಕಟ್ಟಡಕ್ಕೆ ಬೆಂಕಿ ವ್ಯಾಪಿಸಿದೆ. ಬಳಿಕ ಮುಂಭಾಗಕ್ಕೂ ಬೆಂಕಿಯ ಕೆನ್ನಾಲಿಗೆ ಹರಡಿ ಬೆಲೆ ಬಾಳುವ ಮರಗಳು, ಮರದಿಂದ ತಯಾರಿಸಲಾಗಿದ್ದ ಪೀಠೋಪಕರಣಗಳು ಸುಟ್ಟು ಬೂದಿಯಾಗಿವೆ.

ಬೆಂಕಿ ಹತೋಟಿಯೇ ಸವಾಲು: ಬೆಂಕಿ ಅವಘಡದ ಮಾಹಿತಿ ತಿಳಿದ ತಕ್ಷಣವೇ ಮಡಿಕೇರಿ ಅಗ್ನಿ ಶಾಮಕ ದಳದ ಸಿಬ್ಬಂದಿ 2 ಅಗ್ನಿ ನಂದಕ ವಾಹನಗಳಲ್ಲಿ ಆಗಮಿಸಿ ಬೆಂಕಿ ನಂದಿಸಲು ಹರ ಸಾಹಸಪಟ್ಟರು. ಆದರೆ ಸಂಪೂರ್ಣ ಕಟ್ಟಡಕ್ಕೆ ಬೆಂಕಿ ಕೆನ್ನಾಲಿಗೆ ವ್ಯಾಪಿಸಿದ್ದ ಹಿನ್ನೆಲೆ ಮತ್ತು ಈ ಕಟ್ಟಡಕ್ಕೆ ಹೊಂದಿಕೊಂಡಂತಿರುವ ಮತ್ತೊಂದು ಮರದ ಮಿಲ್ ಹಾಗೂ ಬೇಕರಿಗೆ ಬೆಂಕಿ ವ್ಯಾಪಿಸುವುದನ್ನು ತಪ್ಪಿಸಬೇಕಾದ ಸವಾಲು ಅಗ್ನಿಶಾಮಕ ದಳಕ್ಕೆ ಎದುರಾಗಿತ್ತು. ಮಾತ್ರವಲ್ಲದೇ ದಾಸ್ತಾನು ಕಟ್ಟಡ ಸಂಪೂರ್ಣವಾಗಿ ಒಣಗಿದ ಮರಗಳಿಂದ ತುಂಬಿದ್ದ ಕಾರಣ ಬೆಂಕಿಯನ್ನು ಹತೋಟಿಗೆ ತರುವುದೇ ದೊಡ್ಡ ಸವಾಲಾಗಿತ್ತು. ಈ ಹಿನ್ನೆಲೆಯಲ್ಲಿ ತುರ್ತಾಗಿ ಕುಶಾಲನಗರ ಹಾಗೂ ಗೋಣಿಕೊಪ್ಪ ಕಡೆಗಳಿಂದ ಹೆಚ್ಚುವರಿಯಾಗಿ 2 ಅಗ್ನಿ ನಂದಕ ವಾಹನ ಸಹಿತ ಸಿಬ್ಬಂದಿಗಳನ್ನು ಮಡಿಕೇರಿಗೆ ಕರೆಸಲಾಗಿತ್ತು.

ನಿರಂತರ ಕಾರ್ಯಾಚರಣೆ: ಕಟ್ಟಡದ ಒಳಭಾಗದಿಂದ ಬೆಂಕಿಯ ಕೆನ್ನಾಲಿಗೆ ಹೊರ ಬರುತ್ತಿದ್ದ ಕಾರಣ ಸಮೀಪಕ್ಕೆ ತೆರಳಿ ಬೆಂಕಿ ನಂದಿಸುವುದು ಸುಲಭವಾಗಿರಲಿಲ್ಲ. ಏಕಕಾಲದಲ್ಲಿ ಮಡಿಕೇರಿ, ಕುಶಾಲನಗರ ಮತ್ತು ಗೋಣಿಕೊಪ್ಪದಿಂದ ಆಗಮಿಸಿದ ಒಟ್ಟು 4 ಅಗ್ನಿಶಾಮಕ ವಾಹನಗಳ ಸಹಿತ 20ಕ್ಕೂ ಹೆಚ್ಚು ಸಿಬ್ಬಂದಿಗಳು ನಿರಂತರ ಕಾರ್ಯಾಚರಣೆ ನಡೆಸಿದರು. ಸತತ ಪರಿಶ್ರಮ ನಡೆಸಿದ ಪರಿಣಾಮ ಬೆಳಗಿನ 9 ಗಂಟೆಯ ವೇಳೆಗೆ ಬೆಂಕಿಯನ್ನು ನಿಯಂತ್ರಣಕ್ಕೆ ತರಲಾಯಿತು. ಕಟ್ಟಡದ ಒಳಗೆ ಬೆಂಕಿ ನಂದಿದ್ದರೂ, ದಟ್ಟ ಹೊಗೆ ಆವರಿಸಿತ್ತು. ಈ ಹಿನ್ನೆಲೆಯಲ್ಲಿ ಕಾರ್ಯಾಚರಣೆಯನ್ನು ಸೋಮವಾರ ಸಂಜೆ 5 ಗಂಟೆಯವರೆಗೂ ಮುಂದುವರೆಸಲಾಗಿತ್ತು. ನಿರಂತರ ಕಾರ್ಯಚರಣೆ ನಡೆಸುವ ಸಲುವಾಗಿ ಕೈಗಾರಿಕಾ ಬಡಾವಣೆಯ ರಸ್ತೆಯಲ್ಲಿ ಸಂಚರಿಸುವ ಎಲ್ಲಾ ಖಾಸಗಿ ಬಸ್‌ಗಳ ಸಂಚಾರವನ್ನು ಬಂದ್ ಮಾಡಿ, ಬದಲಿ ಮಾರ್ಗದಲ್ಲಿ ಸಂಚರಿಸಲು ಅನುವು ಮಾಡಿಕೊಡಲಾಗಿತ್ತು. ಅಗ್ನಿ ಆಕಸ್ಮಿಕದ ಮಾಹಿತಿ ಅರಿತು ನೂರಾರು ಮಂದಿ ಸಾರ್ವಜನಿಕರು ಘಟನಾ ಸ್ಥಳದಲ್ಲಿ ಜಮಾಯಿಸಿದ ಕಾರಣ ಸ್ಥಳದಲ್ಲಿ ಪೊಲೀಸ್ ಸಿಬ್ಬಂದಿಗಳನ್ನು ನಿಯೋಜಿಸಲಾಗಿತ್ತು. ಬೆಂಕಿ ಅನಾಹುತದಿಂದ ಪೀಠೋಪಕರಣ ಮಳಿಗೆ ಮಾಲೀಕರಿಗೆ ಲಕ್ಷಾಂತರ ರೂ. ನಷ್ಟ ಉಂಟಾಗಿದೆ.

ಕೊಡಗಿನ ವಿದ್ಯಾರ್ಥಿ ಪ್ರಜ್ವಲ್‌ಗೆ ಸಿಎಂ ಮೆಡಲ್



ಮಡಿಕೇರಿ, ಫೆ.20– ಎನ್‌ಸಿಸಿಯ ಥಲ್ ಸೈನಿಕ್ ಕ್ಯಾಂಪ್‌ನಲ್ಲಿ ಕರ್ನಾಟಕ ಗೋವಾ ಡೈರೆಕ್ಟೋರೇಟ್ ಕಾಂಟಿಜೆಂಟ್ ಅನ್ನು ನವದೆಹಲಿಯಲ್ಲಿ ಪ್ರತಿನಿಧಿಸಿ ರಾಷ್ಟ್ರಮಟ್ಟದ ಕಂಚಿನ ಪದಕ ಪಡೆದು ಅತ್ಯುನ್ನತ ಸಾಧನೆ ಮಾಡಿದ ಸೀನಿಯರ್ ಅಂಡರ್ ಆಫೀಸರ್ ಅಪ್ಪಚ್ಚಂಡ ಪ್ರಜ್ವಲ್ ಅಯ್ಯಪ್ಪಗೆ ಮುಖ್ಯಮಂತ್ರಿಗಳ ಪ್ರಶಂಸನಾ ಪತ್ರ ಮತ್ತು ಮೆಡಲ್ ಲಭಿಸಿದೆ.

ಬೆಂಗಳೂರಿನ ಕ್ರೈಸ್ಟ್ ಜಯಂತಿ ಕಾಲೇಜಿನಲ್ಲಿ ನಡೆದ ಸಮಾರಂಭದಲ್ಲಿ ಮುಖ್ಯಮಂತ್ರಿಗಳ ಪರವಾಗಿ ಮುಖ್ಯಮಂತ್ರಿ ಕಾರ್ಯಾಲಯದ ಅಧಿಕಾರಿಗಳು ಪ್ರಶಸ್ತಿ ಪತ್ರ ಮತ್ತು ಮೆಡಲ್ ಪ್ರಧಾನ ಮಾಡಿದರು. ಗೋಣಿಕೊಪ್ಪಲು ಕಾವೇರಿ ಕಾಲೇಜು ಅಂತಿಮ ವರ್ಷದ ಪದವಿ ವಿದ್ಯಾರ್ಥಿಯಾಗಿರುವ ಪ್ರಜ್ವಲ್, ಎಂ.ಬಾಡಗ ಗ್ರಾಮದ ಅಪ್ಪಚ್ಚಂಡ ಕುಶಾಲಪ್ಪ ಮತ್ತು ಶಶಿ ದಂಪತಿಯ ಪುತ್ರರಾಗಿದ್ದಾರೆ.

ಕೋರಿಕ್ಕಾರು ಕೇಶವ ಭಟ್ಟರಿಗೆ ನುಡಿನಮನ



ವಿರಾಜಪೇಟೆ, ಫೆ.20– ಸನಾತನ ಧರ್ಮ ಸಭಾ ವೇದಿಕೆ ಕೊಡಗು ಇವರ ವತಿಯಿಂದ ಸದ್ಗುರು ಅಪ್ಪಯ್ಯ ಸ್ವಾಮಿ ರಸ್ತೆಯಲ್ಲಿರುವ ಶ್ರೀ ಕಾವೇರಿ ಆಶ್ರಮದಲ್ಲಿ ದಿವಂಗತ ಕೋರಿಕ್ಕಾರು ಕೇಶವ ಭಟ್ಟ ಅವರಿಗೆ ನುಡಿನಮನ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು

ಈ ಸಂದರ್ಭ ಶಿಕ್ಷಕ ದಂಪತಿಗಳಾದ ಕೇಶವ ಭಟ್ಟ ಹಾಗೂ ಶಾರದಮ್ಮ ಅವರ ಹೆಸರಿನಲ್ಲಿ ಅವರ ಪುತ್ರಿಯರಾದ ವಾಣಿಶ್ರೀ, ಜ್ಯೋತಿ ಹಾಗೂ ಗೀತಾ ಇವರು ಕನ್ನಡ ಸಾಹಿತ್ಯ ಪರಿಷತ್ತಿಗೆ ದತ್ತಿನಿಧಿಯನ್ನು ಸ್ಥಾಪಿಸಲು 50 ಸಾವಿರ ರೂ. ಡಿ.ಡಿ ಯನ್ನು ವಿರಾಜಪೇಟೆ ತಾಲೂಕು ಕನ್ನಡ ಸಾಹಿತ್ಯ ಪರಿಷತ್ತು ಅಧ್ಯಕ್ಷ ರಾಜೇಶ್ ಪದ್ಮನಾಭ ಇವರಿಗೆ ಹಸ್ತಾಂತರಿಸಿದರು. ಈ ವೇಳೆ ಕ.ಸಾ.ಪ. ಕೋಶಾಧಿಕಾರಿ ಶಬರೀಶ್ ಶೆಟ್ಟಿ, ಗೌರವ ಕಾರ್ಯದರ್ಶಿ ಹೆಚ್.ಜಿ, ಸಾವಿತ್ರಿ, ಸದಸ್ಯರಾದ ಪುಷ್ಪಲತಾ ಶಿವಪ್ಪ ಹಾಗೂ ವಿಮಲಾ ದಶರಥ ಮತ್ತಿತರರು ಹಾಜರಿದ್ದರು.

ನುಡಿನಮನ ಕಾರ್ಯಕ್ರಮದಲ್ಲಿ ವಿರಾಜಪೇಟೆ ಬಳಿಯ ಪುದುಪಾಡಿ ವಿಘ್ನೇಶ್ವರ ಸೇವಾ ಸಮಿತಿ ಸದಸ್ಯರು ಭಜನೆ–ಗೀತಗಾಯನ ನಡೆಸಿಕೊಟ್ಟರು. ನಂತರ ನಡೆದ ಸಭಾ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಭವಾನಿ ಶಂಕರ್ ವಹಿಸಿದ್ದರು. ಪೊನ್ನಂಪೇಟೆ ಸಾಯಿಶಂಕರ್ ಕಾಲೇಜಿನ ಪ್ರಾಂಶುಪಾಲ ಪಿ.ಎ.ನಾರಾಯಣ ಹಾಗೂ ವಿರಾಜಪೇಟೆ ವಕೀಲ ನರೇಂದ್ರ ಕಾಮತ್ ಮಾತನಾಡಿ, ದಿವಂಗತ ಕೋರಿಕ್ಕಾರು ಕೇಶವ ಭಟ್ಟ ಅವರು ಸಂಸ್ಕೃತ ಉಪಾಧ್ಯಾಯರಾಗಿದ್ದು, ವಿರಾಜಪೇಟೆ ತಾಲೂಕು ಮೊದಲ ಸಮ್ಮೇಳನದ ಅಧ್ಯಕ್ಷರಾಗಿದ್ದರು, ಅವರ ಜೀವನದಲ್ಲಿ ಯಶಸ್ಸನ್ನು ಕಂಡಂತಹ ಮಹಾನ್ ವ್ಯಕ್ತಿಯಾಗಿದ್ದರು ಎಂದರು. ವೇದಿಕೆಯಲ್ಲಿ ಸರಸ್ವತಿ ಪುಸ್ತಕ ಅಂಗಡಿ ಮಾಲೀಕ ನರಸಿಂಹ ಭಟ್ಟ ಹಾಗೂ ಇತರರು ಉಪಸ್ಥಿತರಿದ್ದರು. ಕೆ.ಸಿ. ಶಭರಿಸ್ ಶೆಟ್ಟಿ ಕಾರ್ಯಕ್ರಮ ನಡೆಸಿಕೊಟ್ಟರು. ಶಿಕ್ಷಕಿ ಸಾವಿತ್ರಿ ಅವರು ಸ್ವಾಗತಿಸಿ ನಿರೂಪಿಸಿದರು.

ಫೆ.28, ನಿವೃತ್ತ ಪೊಲೀಸ್ ಅಧಿಕಾರಿಗಳ ಸಂಘದ ಮಹಾಸಭೆ



ಮಡಿಕೇರಿ, ಫೆ.20– ಕೊಡಗು ಜಿಲ್ಲಾ ನಿವೃತ್ತ ಪೊಲೀಸ್ ಅಧಿಕಾರಿಗಳ ಕ್ಷೇಮಾಭಿವೃದ್ಧಿ ಸಂಘದ ವಾರ್ಷಿಕ ಮಹಾಸಭೆ ಫೆ28ರಂದು ನಗರದ ಪೊಲೀಸ್ 'ಮೈತ್ರಿ ಭವನ'ದಲ್ಲಿ ನಡೆಯಲಿದೆ ಎಂದು ಸಂಘದ ಉಪಾಧ್ಯಕ್ಷ ಬಿ.ಆರ್. ಲಿಂಗಪ್ಪ ತಿಳಿಸಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಈ ಬಗ್ಗೆ ಮಾಹಿತಿ ನೀಡಿದ ಅವರು, ಅಂದು ಬೆಳಗ್ಗೆ 10 ಗಂಟೆಗೆ ಸಂಘದ ಅಧ್ಯಕ್ಷ ಎ.ಕೆ. ಸುರೇಶ್ ಅಧ್ಯಕ್ಷತೆಯಲ್ಲಿ ನಡೆಯಲಿದೆ. ಮುಖ್ಯ ಅತಿಥಿಗಳಾಗಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ.ರಾಮರಾಜನ್, ವಿಶೇಷ ಆಹ್ವಾನಿತರಾಗಿ ಬೆಂಗಳೂರಿನ ಕರ್ನಾಟಕ ರಾಜ್ಯ ನಿವೃತ್ತ ಪೊಲೀಸ್ ಅಧಿಕಾರಿಗಳ ಸಂಘದ ಅಧ್ಯಕ್ಷ ಬಿ.ಕೆ.ಶಿವರಾಮ್, ರಾಜ್ಯ ಕಾರ್ಯದರ್ಶಿ ಕುಮಾರ್ ಎಸ್.ಕರ್ನಿಂಗ್, ಮೈಸೂರು ಜಿಲ್ಲಾ ನಿವೃತ್ತ ಪೊಲೀಸ್ ಅಧಿಕಾರಿಗಳ ಸಂಘದ ಅಧ್ಯಕ್ಷ ಮರಿಸ್ವಾಮಿ, ಕೊಡಗು ಜಿಲ್ಲಾ ನಿವೃತ್ತ ಪೊಲೀಸ್ ಅಧಿಕಾರಿಗಳ ಸಂಘದ ಗೌರವಾಧ್ಯಕ್ಷ ಎಂ.ಎ.ಅಪ್ಪಯ್ಯ ಪಾಲ್ಗೊಳ್ಳಲಿದ್ದಾರೆಂದು ಹೇಳಿದರು.

ಸನ್ಮಾನ–ಪ್ರತಿಭಾ ಪುರಸ್ಕಾರ: ಮಹಾಸಭೆಯಲ್ಲಿ ಸಂಘದ ಹಿರಿಯ 10 ಮಂದಿ ಸದಸ್ಯರನ್ನು ಸನ್ಮಾನಿಸಿ ಗೌರವಿಸಲಾಗುತ್ತದೆ ಮತ್ತು ಪಿಯುಸಿ ವಿಜ್ಞಾನ ವಿಭಾಗದಲ್ಲಿ ಅತ್ಯಧಿಕ ಅಂಕ ಗಳಿಸಿದ ಸಂಘದ ಸದಸ್ಯರ ಇಬ್ಬರು ಮಕ್ಕಳ ಪ್ರತಿಭಾ ಪುರಸ್ಕಾರ ನಡೆಯಲಿದೆಯೆಂದು ಹೇಳಿದರು.

ಆರೋಗ್ಯ ಸೌಲಭ್ಯ ಹೊಂದಿ : ಕೊಡಗು ಜಿಲ್ಲಾ ನಿವೃತ್ತ ಪೊಲೀಸ್ ಅಧಿಕಾರಿಗಳ ಕ್ಷೇಮಾಭಿವೃದ್ಧಿ ಸಂಘದಲ್ಲಿ 925 ಸದಸ್ಯರುಗಳಿದ್ದಾರೆ. ಇವರುಗಳು ಯೋಗ್ಯ ಆರೋಗ್ಯ ಸೇವೆಯನ್ನು ಪಡೆದುಕೊಳ್ಳುವ ನಿಟ್ಟಿನಲ್ಲಿ 'ಆರೋಗ್ಯ ಭಾಗ್ಯ' ಯೋಜನೆಗೆ ಒಳಪಡುವುದು ಅವಶ್ಯ. ಈಗಾಗಲೆ ಸಾಕಷ್ಟು ಸದಸ್ಯರು ಆರೋಗ್ಯ ಸೇವೆಯ ಸೌಲಭ್ಯ ಪಡೆಯುತ್ತಿದ್ದಾರೆ. ಮತ್ತಷ್ಟು ಮಂದಿ ಇನ್ನೂ ಇದರ ವ್ಯಾಪ್ತಿಗೆ ಬಂದಿಲ್ಲ. ಈ ಹಿನ್ನೆಲೆಯಲ್ಲಿ ಸದಸ್ಯರು ಅಗತ್ಯ ದಾಖಲೆಗಳನ್ನು ಒದಗಿಸುವ ಮೂಲಕ ಸಂಘದ ಮೂಲಕ ಆರೋಗ್ಯ ಸೇವೆಗೆ ಒಳಪಡುವಂತೆ ಮನವಿ ಮಾಡಿ, ಈ ಬಗ್ಗೆ ಸಂಘದ ಕಾರ್ಯದರ್ಶಿ ಅಚ್ಚುತನ್ ನಾಯರ್ ದೂ. 9972265296 ನ್ನು ಸಂಪರ್ಕಿಸಬಹುದೆಂದು ತಿಳಿಸಿದರು.

ಜಿಲ್ಲೆಯಲ್ಲಿರುವ ಸಾಕಷ್ಟು ನಿವೃತ್ತ ಪೊಲೀಸ್ ಅಧಿಕಾರಿಗಳು ಇನ್ನೂ ಸಂಘದ ಸದಸ್ಯತ್ವವನ್ನು ಪಡೆದುಕೊಂಡಿಲ್ಲ. ಮಹಾಸಭೆಯ ಸಂದರ್ಭ ಸದಸ್ಯತ್ವವನ್ನು ಹೊಂದಿಕೊಳ್ಳಬೇಕೆಂದು ಬಿ.ಆರ್.ಲಿಂಗಪ್ಪ ಮನವಿ ಮಾಡಿದರು. ಸುದ್ದಿಗೋಷ್ಠಿಯಲ್ಲಿ ಸಂಘದ ಕಾರ್ಯದರ್ಶಿ ಅಚ್ಚುತನ್ ನಾಯರ್, ಖಜಾಂಚಿ ಬಿ.ಎಂ.ಭೀಮಯ್ಯ, ನಿರ್ದೇಶಕರಾದ ಎಂ.ಕೆ. ಕಾವೇರಪ್ಪ ಮತ್ತು ಸಿ.ಟಿ.ಚೀಯಣ್ಣ ಉಪಸ್ಥಿತರಿದ್ದರು.

ನಾಳೆ ವಿವಿಧೆಡೆ ವಿದ್ಯುತ್ ವ್ಯತ್ಯಯ

ಮಡಿಕೇರಿ ಫೆ.20– ಮಡಿಕೇರಿ ರಾಜಾಸೀಟ್ ಫೀಡರ್‌ನಲ್ಲಿ ತುರ್ತು ನಿರ್ವಹಣೆ ಕಾರ್ಯವನ್ನು ನಿರ್ವಹಿಸ ಬೇಕಿರುವುದರಿಂದ ಫೆ.22 ರಂದು ಬೆಳಗ್ಗೆ 10 ಗಂಟೆಯಿಂದ ಸಂಜೆ 5 ಗಂಟೆಯವರೆಗೆ ವಿದ್ಯುತ್ ಉಪ ಕೇಂದ್ರಗಳಲ್ಲಿ ವಿದ್ಯುತ್ ಸರಬರಾಜು ಸ್ಥಗಿತಗೊಳಿಸಲಾಗುವುದು. ಆದ್ದರಿಂದ ಮಂಗಳೂರು ರಸ್ತೆ, ಡಿಸಿ ಆಫೀಸ್, ಇಂದಿರಾನಗರ, ಹೊಸ ಬಡಾವಣೆ, ಹಾಕಿ ಮೈದಾನ, ಡೇರಿಫಾರಂ, ಎಫ್‌ಎಂಸಿ ಕಾಲೇಜು, ವಿದ್ಯಾನಗರ, ಮುಳಿಯ ಲೇಔಟ್, ಕನ್ನಿಕಾ ಬಡಾವಣೆ ಹಾಗೂ ಸುತ್ತಮುತ್ತಲ ವ್ಯಾಪ್ತಿಯ ಪ್ರದೇಶಗಳಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ. ಸಾರ್ವಜನಿಕರು ಸಹಕರಿಸುವಂತೆ ಸೆಸ್ಕ್ ಕಾರ್ಯ ನಿರ್ವಾಹಕ ಎಂಜಿನಿಯರ್ ಅವರು ಕೋರಿದ್ದಾರೆ.

ದೇವಮ್ಮ ನಿಧನ



ಮಡಿಕೇರಿ, ಫೆ.20– ಕುಶಾಲನಗರ ತಾಲೂಕಿನ ಹೆಬ್ಬಾಲೆ ಗ್ರಾಮದ ಕನಕ ಬ್ಲಾಕ್ ನಿವಾಸಿ ಪತ್ರಕರ್ತ ರಘು ಹೆಬ್ಬಾಲೆ ಅವರ ತಾಯಿ ದೇವಮ್ಮ (85)ಅವರು ಸೋಮವಾರ ನಿಧನರಾದರು. ಮೃತರು ವಕೀಲ ಎಚ್.ಎಂ.ರವೀಂದ್ರ ಹಾಗೂ ರಘು ಹೆಬ್ಬಾಲೆ, ನಾಲ್ವರು ಪುತ್ರಿಯರು ಹಾಗೂ ಅಪಾರ ಬಂಧು ಮಿತ್ರರನ್ನು ಅಗಲಿದ್ದಾರೆ. ಮೃತರ ಅಂತ್ಯಸಂಸ್ಕಾರವನ್ನು ಸೋಮವಾರ ಸ್ವಗ್ರಾಮ ಹೆಬ್ಬಾಲೆಯಲ್ಲಿ ನೆರವೇರಿಸಲಾಗಿದೆ.

ಚುನಾವಣೆಯಲ್ಲಿ ಗೆದ್ದ ನಂತರ ಈಗ ನಮ್ಮ ಗ್ರಾಮ ನೆನಪಾಯಿತೆ...

ಗ್ರಾಮಸ್ಥರಿಂದ ಶಾಸಕ ಎನ್. ಮಹೇಶ್‌ಗೆ ತರಾಟೆ



ಯಳಂದೂರು, ಫೆ.20– ತಾಲೂಕಿನ ಉಪ್ಪಿನಮೋಳೆ ಗ್ರಾಮದಲ್ಲಿ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಭೂಮಿ ಪೂಜೆಗೆ ಬಂದಿದ್ದ ಶಾಸಕ ಎನ್. ಮಹೇಶ್ ಅವರನ್ನು ಗ್ರಾಮಸ್ಥರು ತರಾಟೆಗೆ ತೆಗೆದುಕೊಂಡ ಪ್ರಸಂಗ ಜರುಗಿತು.

ಗ್ರಾಮದಲ್ಲಿ ನೆರೆ ಪರಿಹಾರ ನಿಧಿಯಿಂದ 10 ಲಕ್ಷ ರೂ. ವೆಚ್ಚದಲ್ಲಿ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಶಾಸಕ ಎನ್. ಮಹೇಶ್ ಭೂಮಿಪೂಜೆ ನೆರವೇರಿಸುವ ಕಾರ್ಯಕ್ರಮ ನಿಗದಿಯಾಗಿತ್ತು. ಅದರಂತೆ ಬೆಳಿಗ್ಗೆ ಗ್ರಾಮಕ್ಕೆ ಬಂದ ಶಾಸಕರಿಗೆ ಗ್ರಾಮಸ್ಥರು ಈ ಕಾಮಗಾರಿಯನ್ನು ಮಾಡಬಾರದು ಎಂದು ತಡೆಯೊಡ್ಡಿದರು. ನೀವು ಬಿಎಸ್‌ಪಿ ಪಕ್ಷದ ಅಭ್ಯರ್ಥಿಯಾಗಿ ಕಳೆದ ಚುನಾವಣೆಯಲ್ಲಿ ಕಣದಲ್ಲಿ ಇದ್ದಾಗ ನಮ್ಮ ಗ್ರಾಮದಿಂದ 317 ಮತಗಳನ್ನು ನೀಡಿದ್ದೇವೆ. ನಿಮ್ಮ ಗೆಲುವಿನಲ್ಲಿ ನಮ್ಮ ಪಾತ್ರವೂ ಹಿರಿದಾಗಿದೆ. ಬಿಎಸ್‌ಪಿ ಪಕ್ಷದ ಕಾರ್ಯಕರ್ತರಾಗಿ ನಾವು ಕೆಲಸ ಮಾಡಿದ್ದೇವೆ. ಗೆದ್ದ ನಂತರ ಇದೇ ಪ್ರಥಮ ಬಾರಿಗೆ ನೀವು ನಮ್ಮ ಗ್ರಾಮಕ್ಕೆ ಬಂದಿದ್ದೀರಿ, ನಮ್ಮ ಗ್ರಾಮಕ್ಕೆ ನಯಾಪೈಸೆಯ ಅನುದಾನವನ್ನೂ ನೀಡಿಲ್ಲ. ಕಾರ್ಯಕರ್ತರನ್ನೂ ವಿಶ್ವಾಸಕ್ಕೆ ತೆಗೆದುಕೊಳ್ಳದೆ ಕೆಲಸ ಮಾಡಿದ್ದೀರಿ, ಈಗ ಬೇರೆ ಪಕ್ಷಕ್ಕೆ ತೆರಳಿದ್ದೀರಿ. ಚುನಾವಣೆ ಹತ್ತಿರ ಬರುತ್ತಿದ್ದಂತೆಯೇ ನಿಮಗೆ ನಮ್ಮ ಗ್ರಾಮ ನೆನಪಾಯಿತೇ ಎಂದು ಗ್ರಾಮದ ಪರ್ವಶೆಟ್ಟಿ, ಶಾಂತರಾಜು, ಮಾದೇಶ, ಸತೀಶ ಸೇರಿದಂತೆ ಹಲವರು ತರಾಟೆಗೆ ತೆಗೆದುಕೊಂಡರು.

ನಂತರ ಶಾಸಕ ಎನ್. ಮಹೇಶ್ ಗ್ರಾಮದ ಪ್ರಮುಖ ಬೀದಿಗಳಿಗೆ ಭೇಟಿ ನೀಡಿ ಇಲ್ಲಿನ ಸಮಸ್ಯೆಗಳನ್ನು ಆಲಿಸಿ ಮುಂದಿನ ಬಾರಿ ನಾನೇ ಮತ್ತೊಮ್ಮೆ ಶಾಸಕನಾಗಿ ಈ ಸಮಸ್ಯೆಯನ್ನು ಬಗೆಹರಿಸುತ್ತೇನೆ ಎಂದು ಭರವಸೆ ನೀಡಿ ತರಾತುರಿಯಿಂದ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಚಾಲನೆ ನೀಡಿ ಅಲ್ಲಿಂದ ಕಾಲ್ಕಿತ್ತರು.

ನಂತರ ಕೃಷ್ಣಾಪುರ ಗ್ರಾಮದ ಕಾಲುವೆ ಅಭಿವೃದ್ಧಿಯ 10 ಲಕ್ಷ ರೂ. ಕಾಮಗಾರಿಗೆ ಭೂಮಿಪೂಜೆ ನೆರವೇರಿಸಿದರು. ಗ್ರಾಪಂ ಅಧ್ಯಕ್ಷೆ ಮಮತಾ ಮುಖಂಡರಾದ ಕೃಷ್ಣಾಪುರ ಚಿಕ್ಕಣ್ಣ, ಮಹೇಶ್, ರಾಮು, ಪಿಎಸ್‌ಐ ಚಂದ್ರಹಾಸ ಸೇರಿದಂತೆ ಹಲವರು ಇದ್ದರು.

ಸಿದ್ದಮಲ್ಲೇಶ್ವರ ವಿರಕ್ತ ಮಠದಲ್ಲಿ ಇಷ್ಟಲಿಂಗ ಪೂಜೆ



ಚಾಮರಾಜನಗರ, ಫೆ20– ಹನ್ನೆರಡನೆ ಶತಮಾನದ ಬಸವಾದಿ ಶರಣರು ಸಾರಿದ ವಚನ ಸಂದೇಶವನ್ನು ಪಾಲಿಸುವ ಮೂಲಕ ಸಾರ್ಥಕ ಬದುಕು ನಮ್ಮದಾಗಿಸಿಕೊಳ್ಳಬೇಕು ಎಂದು ಚಾಮರಾಜನಗರ ಶ್ರೀ ಸಿದ್ದಮಲ್ಲೇಶ್ವರ ವಿರಕ್ತ ಮಠದ ಶ್ರೀ ಚನ್ನಬಸವ ಸ್ವಾಮೀಜಿ ಸಲಹೆ ನೀಡಿದರು.

ನಗರದ ಜೋಡಿ ರಸ್ತೆಯಲ್ಲಿರುವ ಸಿದ್ದಮಲ್ಲೇಶ್ವರ ವಿರಕ್ತ ಮಠದಲ್ಲಿ ಶನಿವಾರ ರಾತ್ರಿ ಮಹಾಶಿವರಾತ್ರಿ ಪ್ರಯುಕ್ತ ಏರ್ಪಡಿಸಿದ್ದ ಇಷ್ಟಲಿಂಗ ಪೂಜೆ ಹಾಗೂ ಶಿವಕಥೆ ಕಾರ್ಯಕ್ರಮದಲ್ಲಿ ಆಶೀರ್ವಚನ ನೀಡಿದರು. ಪಾಲಕರು ತಮ್ಮ ಮಕ್ಕಳಿಗೆ ಸನ್ಮಾರ್ಗದ ದಾರಿ ತೋರಿಸಬೇಕು. ವಚನಗಳ ಸಾರವನ್ನು ಅರಿಯುವ ಮೂಲಕ ಉತ್ತಮ ವ್ಯಕ್ತಿತ್ವ ಬೆಳೆಸಿಕೊಳ್ಳಬೇಕು. ಬದುಕಿರುವಾಗಲೇ ಭಗವಂತನನ್ನು ಕಾಣುವ ಅವಕಾಶ ಮಾಡಿಕೊಟ್ಟಿರುವುದು ನಮ್ಮ ಧರ್ಮ. 12ನೇ ಶತಮಾನದ ಶತಮಾನದ ಸಂತರು ನಮಗೆ ಇಷ್ಟಲಿಂಗವನ್ನು ಕೊಟ್ಟು ಅದರ ಮೂಲಕ ಭಗವಂತನನ್ನು ಕಾಣುವ ದಾರಿ ತೋರಿಸಿಕೊಟ್ಟಿದ್ದಾರೆ. ಶರಣರು ಕೊಟ್ಟಿರುವ ಇಷ್ಟ ಲಿಂಗದ ಮೂಲಕ ಮುಕ್ತಿ ಕಾಣಬೇಕು. ಬದುಕಿರುವಾಗಲೇ ಮೋಕ್ಷ ಸಾಧಿಸುವುದೇ ನಮ್ಮ ಧ್ಯೇಯವಾಗಬೇಕು. ಅದಕ್ಕೆ ಇಷ್ಟಲಿಂಗ ನೆರವಾಗುತ್ತದೆ ಎಂದರು.

ವಿದ್ವಾನ್ ಶ್ರೀ ಶಿವಕುಮಾರ ಶಾಸ್ತ್ರೀಯವರ ಪುತ್ರರಾದ ಭರತಶಾಸ್ತ್ರಿ ಅವರು ಶಿವಕಥೆ ಕುರಿತು ಉಪನ್ಯಾಸ ನೀಡಿದರು. ನಗರದ ಸಾವಿರಾರು ಮಕ್ಕಳು, ಮಹಿಳೆಯರು ಹಾಗೂ ಪುರುಷರು ಇಷ್ಟಲಿಂಗ ಪೂಜೆಯಲ್ಲಿ ಭಾಗವಹಿಸಿದ್ದರು. ಕಾರ್ಯಕ್ರಮಕ್ಕೆ ಆಗಮಿಸಿದ ಭಕ್ತರಿಗೆ ನಿರಂತರ ಪ್ರಸಾದ ವಿತರಿಸಲಾಯಿತು.

ಗುಂಡ್ಲುಪೇಟೆಯಲ್ಲಿ ಇಂದು ಕಾಂಗ್ರೆಸ್ ಪ್ರಜಾಧ್ವನಿ

ಗುಂಡ್ಲುಪೇಟೆ, ಫೆ20– ಕಾಂಗ್ರೆಸ್ ವತಿಯಿಂದ ಹಮ್ಮಿಕೊಂಡಿರುವ ಪ್ರಜಾಧ್ವನಿ ಯಾತ್ರೆ ಕಾರ್ಯಕ್ರಮವು ಫೆ.21ರಂದು ಸಂಜೆ 5 ಗಂಟೆಗೆ ಪಟ್ಟಣದ ಹಳೇ ಬಸ್ ನಿಲ್ದಾಣದಲ್ಲಿ ನಡೆಯಲಿದೆ ಎಂದು ಕಾಂಗ್ರೆಸ್ ಮುಖಂಡ ಹೆಚ್.ಎಂ. ಗಣೇಶ್‌ಪ್ರಸಾದ್ ತಿಳಿಸಿದ್ದಾರೆ. ಈ ಕುರಿತು ಮಾಹಿತಿ ನೀಡಿರುವ ಅವರು, ಈ ಕಾರ್ಯಕ್ರಮದಲ್ಲಿ ಕಾಂಗ್ರೆಸ್ ರಾಜ್ಯಾಧ್ಯಕ್ಷ ಡಿ.ಕೆ.ಶಿವಕುಮಾರ್, ಕಾರ್ಯಾಧ್ಯಕ್ಷ ಆರ್.ಧ್ರುವನಾರಾಯಣ್, ಮಾಜಿ ಸಚಿವೆ ಡಾ.ಗೀತಾ ಮಹದೇವಪ್ರಸಾದ್ ಸೇರಿದಂತೆ ಹಲವು ಮುಖಂಡರು ಭಾಗವಹಿಸಲಿದ್ದಾರೆ. ಈ ಕಾರ್ಯಕ್ರಮಕ್ಕೆ ಅಭಿಮಾನಿಗಳು ಮತ್ತು ಮುಖಂಡರು ಹಾಗೂ ಕಾರ್ಯಕರ್ತರು ಭಾಗವಹಿಸುವಂತೆ ಕೋರಿದ್ದಾರೆ.

ನಾಳೆ ಕೊಳ್ಳೇಗಾಲದಲ್ಲಿ ಉದ್ಯೋಗ ಮೇಳ

ಚಾಮರಾಜನಗರ, ಫೆ.20– ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಮತ್ತು ಜಿಲ್ಲಾ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ ಇವರ ಸಹಯೋಗದಲ್ಲಿ ಉದ್ಯೋಗ ಮೇಳ ಕಾರ್ಯಕ್ರಮವನ್ನು ಫೆ.22ರಂದು ಬೆಳಗ್ಗೆ 10 ರಿಂದ ಸಂಜೆ 4 ಗಂಟೆಯವರೆಗೆ ಕೊಳ್ಳೇಗಾಲದ ಶಿಕ್ಷಕರ ಭವನ (ಗುರು ಭವನ)ದಲ್ಲಿ ಹಮ್ಮಿಕೊಳ್ಳಲಾಗಿದೆ.

ನಂಜನಗೂಡು, ಮೈಸೂರು ಹಾಗೂ ಬೆಂಗಳೂರಿನ ಖಾಸಗಿ ಕಂಪನಿಗಳಲ್ಲಿ ಮಾರುಕಟ್ಟೆ ಸೇವೆಗಳು, ಹಣಕಾಸು, ಇನ್ಸೂರೆನ್ಸ್, ಎಂಜಿನಿಯರಿಂಗ್ ಕ್ಷೇತ್ರಗಳು, ಕೈಗಾರಿಕಾ, ಬ್ಯಾಂಕಿಂಗ್ ಮತ್ತು ಆಸ್ಪತ್ರೆ ಸೇವೆಗಳು ಹಾಗೂ ಇತರೆ ಎಲ್ಲಾ ರೀತಿಯ ಸೇವೆಗಳ ಸುಮಾರು 25ಕ್ಕೂ ಹೆಚ್ಚಿನ ಕಂಪನಿಗಳು ಉದ್ಯೋಗ ಮೇಳದಲ್ಲಿ ಭಾಗವಹಿಸಲಿವೆ.

ಎಸ್.ಎಸ್.ಎಲ್.ಸಿ, ಪಿಯುಸಿ, ಐಟಿಐ ಹಾಗೂ ಡಿಪ್ಲೊಮಾ, ನರ್ಸಿಂಗ್ (ಎಎನ್‌ಎಂ ಮತ್ತು ಜಿಎನ್‌ಎಂ), ಜಿ.ಡಿ.ಎ ಮತ್ತು ಎಲ್ಲಾ ಪದವಿ, ಸ್ನಾತಕೋತ್ತರ ಪದವಿ ವಿದ್ಯಾರ್ಹತೆಯುಳ್ಳ 18 ರಿಂದ 35 ವರ್ಷ ವಯೋಮಿತಿಯೊಳಗಿನ ಪುರುಷ ಮತ್ತು ಮಹಿಳಾ ನಿರುದ್ಯೋಗಿಗಳು ಉದ್ಯೋಗ ಮೇಳದಲ್ಲಿ ಭಾಗವಹಿಸಬಹುದು.

ಅಭ್ಯರ್ಥಿಗಳು ತಮ್ಮ ವೈಯಕ್ತಿಕ ವಿವರಗಳನ್ನೊಳಗೊಂಡ ಕನಿಷ್ಠ 10 ಪ್ರತಿಗಳೊಂದಿಗೆ ಸ್ವಂತ ಖರ್ಚಿನಲ್ಲಿ ಸಂದರ್ಶನಕ್ಕೆ ಹಾಜರಾಗಬೇಕು. ಸಂದರ್ಶನಕ್ಕೆ ಹಾಜರಾಗುವ ಮೊದಲು ನೊಂದಣಿ ಕೌಂಟರ್‌ನಲ್ಲಿ ಕಡ್ಡಾಯವಾಗಿ ನೊಂದಣಿಯಾಗಬೇಕು. ಜೊತೆಗೆ https://skillconnect.kaushalkar.com/candidatereg ಲಿಂಕ್ ಮೂಲಕವು ಸಹ ನೊಂದಾಯಿಸಿಕೊಳ್ಳಬೇಕು. ಹೆಚ್ಚಿನ ಮಾಹಿತಿಗಾಗಿ ನಗರದ ಜಿಲ್ಲಾಡಳಿತ ಭವನದಲ್ಲಿರುವ ಜಿಲ್ಲಾ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ ಅಥವಾ ದೂ.ಸಂ 08226–295080, ಮೊ.ಸಂ 9900677922, 7892190137, ಸಂಪರ್ಕಿಸುವಂತೆ ಜಿಲ್ಲಾ ಕೌಶಲ್ಯಾಭಿವೃದ್ಧಿ ಅಧಿಕಾರಿ ಎ. ಮಹಮ್ಮದ್ ಅಕ್ಬರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಇಂದು ಸವಿತಾ ಮಹರ್ಷಿ ಜಯಂತಿ

ಚಾಮರಾಜನಗರ, ಫೆ.20– ಜಿಲ್ಲಾಡಳಿತ, ಜಿಪಂ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಂಯುಕ್ತಾಶ್ರಯದಲ್ಲಿ ಸವಿತಾ ಮಹರ್ಷಿ ಜಯಂತಿ ಆಚರಣೆ ಕಾರ್ಯಕ್ರಮವನ್ನು ಫೆ21ರಂದು ಬೆಳಗ್ಗೆ 11 ಗಂಟೆಗೆ ನಗರದ ವರನಟ ಡಾ. ರಾಜ್‌ಕುಮಾರ್ ಜಿಲ್ಲಾ ರಂಗಮಂದಿರದಲ್ಲಿ ಏರ್ಪಡಿಸಲಾಗಿದೆ. ಜಿಲ್ಲಾ ಉಸ್ತುವಾರಿ ಸಚಿವ ವಿ. ಸೋಮಣ್ಣ ಕಾರ್ಯಕ್ರಮ ಉದ್ಘಾಟಿಸುವರು. ಶಾಸಕ ಸಿ. ಪುಟ್ಟರಂಗಶೆಟ್ಟಿ ಅಧ್ಯಕ್ಷತೆ ವಹಿಸುವರು. ಸಂಸದ ವಿ. ಶ್ರೀನಿವಾಸಪ್ರಸಾದ್, ಶಾಸಕರಾದ ಎನ್. ಮಹೇಶ್, ಆರ್. ನರೇಂದ್ರ, ಸಿ.ಎಸ್. ನಿರಂಜನ ಕುಮಾರ್, ಮರಿತಿಬ್ಬೇಗೌಡ, ಡಾ. ಡಿ. ತಿಮ್ಮಯ್ಯ, ಸಿ.ಎನ್. ಮಂಜೇಗೌಡ, ಮಧು ಜಿ. ಮಾದೇಗೌಡ, ಕಾವೇರಿ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಜಿ. ನಿಜಗುಣರಾಜು ಇತರರು ಪಾಲ್ಗೊಳ್ಳುವರು.

ಡಾ. ಬಿ.ಆರ್. ಅಂಬೇಡ್ಕರ್ ನಿಂದಿಸಿದ ಜೈನ್ ವಿವಿ ವಿದ್ಯಾರ್ಥಿಗಳ ಗಡಿಪಾರಿಗೆ ಆಗ್ರಹ



ಚಾಮರಾಜನಗರ, ಫೆ20– ಡಾ.ಬಿ.ಆರ್. ಅಂಬೇಡ್ಕರ್ ಹಾಗೂ ದಲಿತ ಸಮುದಾಯದ ಬಗ್ಗೆ ಕೀಳಾಗಿ ವರ್ತಿಸಿರುವ ಜೈನ್ ವಿಶ್ವ ವಿದ್ಯಾಲಯದ ವಿದ್ಯಾರ್ಥಿಗಳನ್ನು ಗಡಿಪಾರು ಮಾಡುವಂತೆ ಒತ್ತಾಯಿಸಿ, ಪೂರ್ವ ಪೊಲೀಸ್ ಠಾಣೆ ಇನ್ಸ್‌ಪೆಕ್ಟರ್ ಶ್ರೀಕಾಂತ್ ಅವರಿಗೆ ಬ್ಲಾಕ್ ಕಾಂಗ್ರೆಸ್ ಎಸ್ಸಿ ಘಟಕದ ಅಧ್ಯಕ್ಷ ಪಿ. ಸೋಮಣ್ಣ ಹಾಗೂ ಮುಖಂಡರು ಮನವಿ ಸಲ್ಲಿಸಿದರು.

ಬೆಂಗಳೂರು ಜೈನ್ ವಿಶ್ವ ವಿದ್ಯಾಲಯದ ವಿದ್ಯಾರ್ಥಿಗಳ ಗುಂಪೊಂದು ಇತ್ತೀಚಿಗೆ ಕಿರುನಾಟಕ ಒಂದನ್ನು ಆಯೋಜಿಸಿದ್ದು, ಪ್ರದರ್ಶನದ ವೇಳೆಯಲ್ಲಿ ಡಾ.ಬಿ.ಆರ್. ಅಂಬೇಡ್ಕರ್ ಹಾಗೂ ದಲಿತ ಸಮುದಾಯದ ಬಗ್ಗೆ ಅವಾಚ್ಯ ಶಬ್ದ ಬಳಸಿರುವುದಲ್ಲದೆ ಜಾತಿ ನಿಂದನೆ ಮಾಡಿರುತ್ತಾರೆ. ಇವರ ಮೇಲೆ ದೇಶದ್ರೋಹ ಹಾಗೂ ಜಾತಿ ನಿಂದನೆ ಕೇಸನ್ನು ಹಾಕಿ ಇದಕ್ಕೆ ಕುಮ್ಮಕ್ಕು ಕೊಟ್ಟವರನ್ನು ಸಹ ಕೂಡಲೇ ಬಂಧಿಸಿ, ಗಡಿಪಾರು ಮಾಡಬೇಕೆಂದು ಪಿ.ಸೋಮಣ್ಣ ಆಗ್ರಹಿಸಿದ್ದಾರೆ.

ಈ ಸಂದರ್ಭದಲ್ಲಿ ನಾಗಯ್ಯ ನಾಗವಳ್ಳಿ, ಸಂಘಸೇನಾ, ರಂಗಸ್ವಾಮಿ, ವೀರಭದ್ರ, ರಾಜು, ನಾಗರಾಜು, ಜಿಪಂ ಮಾಜಿ ಸದಸ್ಯ ರಮೇಶ್, ವಿ.ಛತ್ರ ಕೃಷ್ಣರಾಜು, ಹೊಂಗಲವಾಡಿ ಶಿವಮಲ್ಲು ಇತರರು ಹಾಜರಿದ್ದರು.

ಮದ್ಯದ ಅಮಲಿನಲ್ಲಿ ಕೊಳದಲ್ಲಿ ಮುಳುಗಿ ಇಬ್ಬರು ಸಾವು



ಸಾವಿಗೀಡಾದ ಕಾರ್ತಿಕ್ ಹಾಗೂ ವಿನೋದ್

ಗುಂಡ್ಲುಪೇಟೆ, ಫೆ.20– 'ಕುಡಿತದ ಮತ್ತೇ ಗಮ್ಮತ್ತು, ಅಳತೆ ಮೀರಿದರೆ ಆಪತ್ತು' ಎಂಬ ಗಾದೆಯಂತೆ ಮದ್ಯದ ಅಮಲಿನಲ್ಲಿ ಕೊಳದಲ್ಲಿ ಮುಳುಗಿ ಇಬ್ಬರು ಯುವಕರು ಸಾವಿಗೀಡಾಗಿರುವ ಘಟನೆ ತಾಲೂಕಿನ ತೆರಕಣಾಂಬಿ ಗ್ರಾಮದಲ್ಲಿ ನಡೆದಿದೆ.

ತೆರಕಣಾಂಬಿ ಗ್ರಾಮದ ಕಾರ್ತಿಕ್(26) ಹಾಗೂ ವಿನೋದ್(31) ಮೃತರು. ಇವರಿಬ್ಬರು ಭಾನುವಾರ ರಾತ್ರಿ ಕೊಳದ ಪಕ್ಕದಲ್ಲಿರುವ ವೈನ್ ಷಾಪ್‌ನಲ್ಲಿ ಮದ್ಯಪಾನ ಮಾಡಿದ್ದರು. ಕುಡಿದ ಮತ್ತಿನಲ್ಲಿ ನೀರಿಗೆ ಧುಮುಕಿದ ಇಬ್ಬರಿಗೂ ಈಜುಬಾರದೇ ಮುಳುಗಿ ಸಾವಿಗೀಡಾಗಿದ್ದಾರೆಂದು ಪೊಲೀಸರು ತಿಳಿಸಿದ್ದಾರೆ.

ಈ ಬಗ್ಗೆ ವಿಷಯ ತಿಳಿದ ತೆರಕಣಾಂಬಿ ಠಾಣೆಯ ಪೊಲೀಸರು ಅಗ್ನಿ ಶಾಮಕ ದಳದ ಸಿಬ್ಬಂದಿ ನೆರವಿನಿಂದ ಮೃತ ದೇಹಗಳನ್ನು ಹೊರ ತೆಗೆಸಿದರು. ಅಸಹಜ ಸಾವು ಪ್ರಕರಣ ದಾಖಲಿಸಿದ ಪೊಲೀಸರು ಚಾಮರಾಜನಗರ ಜಿಲ್ಲಾಸ್ಪತ್ರೆಯಲ್ಲಿ ಮರಣೋತ್ತರ ಪರೀಕ್ಷೆ ನಡೆಸಿದ ನಂತರ ವಾರಸುದಾರರ ವಶಕ್ಕೆ ನೀಡಲಾಯಿತು.

ಕನ್ನಡ ಸಾಹಿತ್ಯ ಸಮ್ಮೇಳನಾಧ್ಯಕ್ಷರಾಗಿ ಸಾಹಿತಿ ಕೊತ್ತಲವಾಡಿ ಶಿವಕುಮಾರ್



ಚಾಮರಾಜನಗರ, ಫೆ.20– ಚಾಮರಾಜನಗರ ತಾಲೂಕು 7ನೇ ಕನ್ನಡ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷರಾಗಿ ಸಾಹಿತಿ, ಜೆಎಸ್‌ಎಸ್ ಪದವಿ ಪೂರ್ವ ಕಾಲೇಜಿನ ಪ್ರಾಚಾರ್ಯ ಕೊತ್ತಲವಾಡಿ ಶಿವಕುಮಾರ್ ಆಯ್ಕೆಯಾಗಿದ್ದಾರೆ.

ಚಾಮರಾಜನಗರ ತಾಲೂಕು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಸುರೇಶ್ ಎನ್. ಋಗ್ವೇದಿ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಏಳನೇ ಕನ್ನಡ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷರಾಗಿ ಸಾಹಿತಿ ಕೊತ್ತಲವಾಡಿ ಶಿವಕುಮಾರ್ ಅವರನ್ನು ಸರ್ವಾನುಮತದಿಂದ ಆಯ್ಕೆ ಮಾಡಲಾಯಿತು.

ಮಾರ್ಚ್ 2ರಂದು ವರನಟ ಡಾ.ರಾಜಕುಮಾರ್ ರಂಗಮಂದಿರದಲ್ಲಿ ಏಳನೇ ಕನ್ನಡ ಸಾಹಿತ್ಯ ಸಮ್ಮೇಳನ ಜರುಗಲಿದೆ. ಭಾನುವಾರ ಸಂಜೆ ಸರ್ವಾಧ್ಯಕ್ಷರಾಗಿ ಆಯ್ಕೆಯಾದ ಕೊತ್ತಲವಾಡಿ ಶಿವಕುಮಾರ್ ರವರ ಕೊತ್ತಲವಾಡಿ ಸ್ವಗೃಹದಲ್ಲಿ ಮೈಸೂರು ಪೇಟ, ಫಲ ತಾಂಬೂಲ ನೀಡಿ ಸರ್ವಾಧ್ಯಕ್ಷರಾಗಿ ಕಾರ್ಯಕ್ರಮವನ್ನು ಯಶಸ್ವಿಯಾಗಿ ನೆರವೇರಿಸಿ ಕೊಡಬೇಕೆಂದು ಗೌರವಿಸಿ ಆಹ್ವಾನಿಸಲಾಯಿತು.

ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಅಧ್ಯಕ್ಷರಾದ ಶೈಲ ಕುಮಾರ್, ತಾಲೂಕು ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಸುರೇಶ್ ಎನ್.ಋಗ್ವೇದಿ, ಕೋಶಾಧ್ಯಕ್ಷ ಆರ್.ವಿ. ಮಹದೇವಪ್ಪ, ನಿರ್ದೇಶಕರಾದ ರವಿಚಂದ್ರ ಪ್ರಸಾದ್, ಬಿ.ಕೆ. ಆರಾಧ್ಯ, ನಾಗರಾಜು ಮದ್ದೈಯನ ಹುಂಡಿ ಉಪಸ್ಥಿತರಿದ್ದರು.

ಮೈಸೂರು ಮಿತ್ರ ಮಂಗಳವಾರ 21 ಫೆಬ್ರವರಿ 2023

ಒಂದನೇ ಪುಟದಿಂದ

ಲೋಕಾಯುಕ್ತ ತನಿಖೆ

ಆ ತನಿಖೆಯ ಬಗ್ಗೆಯೇ ನಮಗೆ ಸಂಶಯವಿದೆ. ಈ ಕಾರಣದಿಂದ ಎಸಿಬಿಯಲ್ಲಿ ಅಂದಿನ ದಿನಗಳಲ್ಲಿ ದಾಖಲಾದ ಎಲ್ಲಾ ಪ್ರಕರಣಗಳನ್ನು ಲೋಕಾಯುಕ್ತಕ್ಕೆ ವಹಿಸುವುದಾಗಿ ತಿಳಿಸಿದರು. ನಿಮ್ಮ ಆಡಳಿತದಲ್ಲಿ ಪಿಡಬ್ಲ್ಯುಡಿ ಸೇರಿದಂತೆ ಹಲವು ಇಲಾಖೆಗಳಲ್ಲಿ ಭ್ರಷ್ಟಾಚಾರ ನಡೆದು, ಬೀದಿಗೆ ಬರುವ ಸಮಯದಲ್ಲಿ ಎಲ್ಲವನ್ನೂ ಮುಚ್ಚಿ ಹಾಕಿದ್ದೀರಿ. ನೀವು ಮಾಡಿದ ಪಾಪಗಳನ್ನು ನಮ್ಮ ಮೇಲೆ ಹೇರುವ ಕೆಲಸ ಮಾಡುತ್ತಿದ್ದೀರಿ.

ಹಗರಣಗಳನ್ನು ಮುಚ್ಚಿ ಹಾಕಲು ಕೆಂಪಣ್ಣ ಆಯೋಗ ರಚಿಸಿ, ಆರೋಪಗಳಿಂದ ಮುಕ್ತಿ ದೊರಕಿಸಿಕೊಳ್ಳುವ ಪ್ರಯತ್ನ ಮಾಡಿದ್ದೀರಿ. ನಿಮ್ಮ ಕಾಲದಲ್ಲಿ ನಡೆದಿರುವ ಎಲ್ಲಾ ಹಗರಣ ಸತ್ಯಾ-ಸತ್ಯತೆ ಸಂವಿಧಾನಾತ್ಮಕವಾದ ಲೋಕಾಯುಕ್ತದಲ್ಲೇ ಹೊರಬರಲಿ ಎಂದರು. ತೆರಿಗೆ ದಕ್ಷತೆ, ತೆರಿಗೆ ವಂಚಕರನ್ನು ಪತ್ತೆ ಮಾಡುವುದರ ಜತೆಗೆ ಎಲ್ಲ ಬಾಬ್ತುಗಳಿಂದ ಬರಬೇಕಾದ ತೆರಿಗೆ ಸಂಗ್ರಹಕ್ಕೆ ವಿಶೇಷ ಗಮನ ಹರಿಸಿದ್ದರಿಂದ ರಾಜಸ್ವ ಸಂಗ್ರಹದಲ್ಲಿ ಹೆಚ್ಚಳ ಕಂಡುಬಂದಿದೆ. ಆದರೆ ನೀವು ಕಾಂಗ್ರೆಸ್‌ನವರು ಸರ್ಕಾರದ ವಿರುದ್ಧ 40 ಪರ್ಸೆಂಟ್ ಕಮಿಷನ್ ಆರೋಪ ಹೊರಿಸಿ ಜನರನ್ನು ದಿಕ್ಕು ತಪ್ಪಿಸುವ ಕೆಲಸ ಮಾಡುತ್ತಿದ್ದೀರಿ. ನಿಮ್ಮ ಕಾಲದ ಎಲ್ಲ ಹಗರಣಗಳು ತನಿಖೆಯಿಂದ ಬಯಲಾಗಲಿ ಎಂದರು. ರಾಜ್ಯಪಾಲರ ಭಾಷಣದಲ್ಲಿ ತಿಳಿಸಿರುವ ಸಂಗತಿಗಳನ್ನು ಬಲವಾಗಿ ಸಮರ್ಥಿಸಿಕೊಂಡ ಅವರು, ರಾಜ್ಯಪಾಲರು ಸತ್ಯ ಮತ್ತು ವಾಸ್ತವಾಂಶದ ಆಧಾರದ ಮೇಲೆ ಭಾಷಣ ಮಾಡಿದ್ದಾರೆ. ರಾಜಕಾರಣ ಇದರಲ್ಲಿ ಇಲ್ಲ ಎಂದು ಪ್ರತಿಪಕ್ಷಗಳ ಟೀಕೆಗಳಿಗೆ ತಿರುಗೇಟು ನೀಡಿದರು. ಕೋವಿಡ್, ಪ್ರವಾಹದಂತಹ ಸವಾಲುಗಳ ನಡುವೆಯೂ ಕರ್ನಾಟಕ ಸರ್ಕಾರ ಕಳೆದ ಆರ್ಥಿಕ ವರ್ಷದಲ್ಲಿ ವಿವಿಧ ಮೂಲಗಳಿಂದ ಹದಿನೈದು ಸಾವಿರ ಕೋಟಿ ರೂ.ಗೂ ಹೆಚ್ಚು ತೆರಿಗೆ ಸಂಗ್ರಹಿಸಿರುವುದು ರಾಜ್ಯದ ಆರ್ಥಿಕ ಚಕ್ರ ಮೇಲ್ಮುಖವಾಗಿರುವುದಕ್ಕೆ ಕನ್ನಡಿ ಎಂದರು. ಕಳೆದ ಐದು ವರ್ಷಗಳಲ್ಲಿ ಎರಡು ಸರ್ಕಾರಗಳು ಆಡಳಿತ ನಡೆಸಿದವು. ಕೋವಿಡ್ ಸಂಕಷ್ಟವನ್ನು ಸಮರ್ಥವಾಗಿ ಎದುರಿಸಲಾಯಿತು. ಆರ್ಥಿಕ ಮತ್ತು ಸಾಮಾಜಿಕ ಚಕ್ರ ನಿರಂತರವಾಗಿ ತಿರುಗುತ್ತಿರಬೇಕು. ಇದು ನಿಂತರೆ ಮರು ಆರಂಭಕ್ಕೆ ಬಹಳ ಯತ್ನ ಮಾಡಬೇಕಾಗುತ್ತದೆ. ಶಾಲೆಯಲ್ಲಿ ಅನುತ್ತೀರ್ಣನಾದ ವಿದ್ಯಾರ್ಥಿಯ ಗತಿ ನಾಡಿಗೆ ಬರುತ್ತದೆ ಎಂದರು. ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಸರ್ಕಾರ ಹಾಗೂ ರಾಜ್ಯ ಸರ್ಕಾರ ಕೋವಿಡ್‌ನಿಂದಾದ ಪರಿಸ್ಥಿತಿಯನ್ನು ಸಮರ್ಥವಾಗಿ ನಿಭಾಯಿಸಿದವು. ಆಮ್ಲಜನಕದ ಆಕ್ಸಿಜನ್ ಬೇರೆ ಬೇರೆ ರಾಜ್ಯಗಳಲ್ಲಿ ಬಹಳ ಕಷ್ಟವಿತ್ತು. ಜನ ರಸ್ತೆಯ ಮೇಲೆ ಪರದಾಡುತ್ತಿದ್ದರು. ಅಂದಿನ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಆಕ್ಸಿಜನ್ ತಯಾರಕರನ್ನು ಕರೆಸಿ ಉತ್ಪಾದನೆ ಹೆಚ್ಚಿಸಿದರು. ಕರ್ನಾಟಕಕ್ಕೆ ಗರಿಷ್ಠ ಮಿತಿಯಲ್ಲಿ ಆಕ್ಸಿಜನ್ ಕೊಟ್ಟಿವು ಎಂದು ಹೇಳಿದರು.

ಜನರು ಸಂಕಷ್ಟದಲ್ಲಿದ್ದಾಗ ಸ್ಪಂದಿಸಿದಾಗಲೇ ಸರ್ಕಾರದ ಜೀವಂತಿಕೆ ಗೊತ್ತಾಗುವುದು. ಆರೋಗ್ಯ ಸಿಬ್ಬಂದಿ, ಪೊಲೀಸ್ ಸೇರಿದಂತೆ ಎಲ್ಲರೂ ತ್ವರಿತವಾಗಿ ಕೆಲಸ ಮಾಡಿದರು. ಅವರಿಗೆ ಧನ್ಯವಾದ ಸಲ್ಲಿಸುವುದಾಗಿ ತಿಳಿಸಿದರು. ರೈತ ಶಕ್ತಿ ಯೋಜನೆಯಿಂದ 53 ಲಕ್ಷ ರೈತರಿಗೆ 330 ಕೋಟಿ ರೂ. ವಿವಿಧ ರೂಪದ ಪರಿಹಾರ ಒದಗಿಸಲಾಗಿದೆ. ಕಳೆದ ವರ್ಷ 20 ಸಾವಿರ ರೈತರಿಗೆ ಸಾಲ ನೀಡಿದ್ದೇವೆ. ಮಾರ್ಚ್ ಅಂತ್ಯದ ಒಳಗೆ 30 ಸಾವಿರ ರೈತರಿಗೆ ಸಾಲ ವಿತರಣೆ ಮಾಡುವ ಗುರಿ ಇದೆ ಎಂದರು. 'ಯಶಸ್ವಿನಿ'ಗೆ 300 ಕೋಟಿ ಮೀಸಲಿಟ್ಟು ರೈತರಿಗಾಗಿ ಈ ಯೋಜನೆಯನ್ನು ಮರು ಜಾರಿ ಮಾಡಲಾಗಿದೆ. ಆಹಾರ ಉತ್ಪಾದನಾ ಘಟಕಗಳಿಗೆ ಉತ್ತೇಜಿಸಲು ಸರಿಯಾದ ಮಾರುಕಟ್ಟೆ ಕಲ್ಪಿಸಲಾಗಿದೆ. ರೈತರಿಗೋಸ್ಕರ, ರೈತರಿಂದ ದೊಡ್ಡ ಪ್ರಮಾಣದ ಮಾರುಕಟ್ಟೆ ಈ ವಲಯದಲ್ಲಿ ಸೃಜನೆಯಾಗಿದ್ದು, ಸರ್ಕಾರದ ಪ್ರೋತ್ಸಾಹದಿಂದ ಇದು ಇನ್ನಷ್ಟು ದೊಡ್ಡ ಪ್ರಮಾಣದಲ್ಲಿ ಬೆಳೆಯಲಿದೆ ಎಂದು ಅಂಕಿ- ಅಂಶ ಸಹಿತ ವಿವರಿಸಿದರು.

5 ಲಕ್ಷ ಮೆಟ್ರಿಕ್ ಟನ್‌ಗಿಂತ ಹೆಚ್ಚು ರಾಗಿಯನ್ನು ಬೆಂಬಲ ಬೆಲೆ ನೀಡಿ ಖರೀದಿಸಲಾಗಿದೆ. ಇದು ದಾಖಲೆ. ಎಂಎಸ್‌ಪಿ ದರವನ್ನು ಕೇಂದ್ರ ಹೆಚ್ಚಿಸಿದ್ದರಿಂದ ಎಲ್ಲ ರೈತರ ರಾಗಿಯನ್ನು ಖರೀದಿಸಿ ರೈತರ ಬೆಂಬಲಕ್ಕೆ ನಿಲ್ಲಲಾಯಿತು.

ತೊಗರಿ ಬೆಳೆಗೆ ರೋಗ ಬಂದಿದ್ದರಿಂದ ಹೆಕ್ಟೇರ್‌ಗೆ ಹತ್ತು ಸಾವಿರ ರೂಪಾಯಿ ನೀಡಲಾಗಿದೆ. ಜೋಳ, ಕುಚಲಕ್ಕಿ ಮೊದಲಾದವುಗಳನ್ನೂ ಬೆಂಬಲ ಬೆಲೆ ನೀಡಿ ಖರೀದಿಸಲಾಗಿದೆ ಎಂದು ತಿಳಿಸಿದರು. 2015–16ರ ನಂತರ ಶಾಲಾ ಕೊಠಡಿಗಳು ಆಗುತ್ತಿರಲಿಲ್ಲ. ಜೊತೆಗೆ ಮಳೆಯಿಂದ ಕಟ್ಟಡಗಳು ಶಿಥಿಲವಾಗಿದ್ದವು. ರಾಜ್ಯದ ಇತಿಹಾಸದಲ್ಲಿ ಮೊದಲ ಬಾರಿಗೆ 8 ಸಾವಿರ ಶಾಲಾ ಕೊಠಡಿಗಳನ್ನು ಕಟ್ಟಿದ್ದೇವೆ ಎಂದು ಹೇಳಿದರು. ಈಗಾಗಲೇ ಕಟ್ಟಡ ನಿರ್ಮಾಣ ಪ್ರಗತಿಯಲ್ಲಿದ್ದು, ವಿವೇಕ ಯೋಜನೆಯಡಿ ಇವುಗಳ ಕಾಮಗಾರಿ ಶುರುವಾಗಿದೆ. ಜೂನ್ ಒಳಗೆ ಕೆಲಸ ಮುಗಿಯಲಿದೆ. ಇದಕ್ಕಾಗಿ 1900 ಕೋಟಿ ರೂ. ಅನುದಾನ ಒದಗಿಸಲಾಗಿದೆ. ಹೊಸ ಶಿಕ್ಷಣ ನೀತಿಯನ್ನು ಜಾರಿಗೆ ತರುವ ಮೂಲಕ ಕ್ರಾಂತಿಕಾರಕ ಬದಲಾವಣೆ ತರಲಾಗಿದೆ. ಎಲ್ಲ ಪಠ್ಯಗಳನ್ನು ಕನ್ನಡದಲ್ಲಿ ಅನುದಾನ ಮಾಡುವುದಕ್ಕಾಗಿ ಬಜೆಟ್‌ನಲ್ಲಿ ಪ್ರತ್ಯೇಕ ಹಣವನ್ನು ಕಾದಿರಿಸಲಾಗಿದೆ ಎಂದು ಹೇಳಿದರು.

25 ಲಕ್ಷ ಮನೆಗೆ ನಲ್ಲಿ ನೀರು ಪೂರೈಕೆ

ಉತ್ತಮ ನೀರು ಕೊಟ್ಟಾಗ ಜನರ ಸ್ವಾಸ್ಥ್ಯವೂ ಹೆಚ್ಚುತ್ತದೆ ಎಂದರು. ಹಿಂದುಳಿದ ವರ್ಗದ ಎರಡೂವರೆ ಲಕ್ಷ ವಿದ್ಯಾರ್ಥಿಗಳು ಹಾಸ್ಟೆಲ್ ಸೌಲಭ್ಯ ಪಡೆದಿದ್ದಾರೆ. ಹೆಚ್ಚುವರಿ 30 ಸಾವಿರ ವಿದ್ಯಾರ್ಥಿಗಳಿಗೆ ಹಾಸ್ಟೆಲ್ ಸೌಲಭ್ಯ ಕಲ್ಪಿಸಲು 250 ಕೋಟಿ ರೂ. ಒದಗಿಸಲಾಗಿದೆ. ಕಳೆದ ವರ್ಷಕ್ಕಿಂತ ಒಂದು ಲಕ್ಷಕ್ಕೂ ಹೆಚ್ಚು ವಿದ್ಯಾರ್ಥಿಗಳಿಗೆ ಹಾಸ್ಟೆಲ್ ಹಾಗೂ ವಿದ್ಯಾರ್ಥಿ ಸೌಲಭ್ಯ ಕೊಟ್ಟಿದ್ದೇವೆ ಎಂದು ಹೇಳಿದರು.

ಪರಿಶಿಷ್ಟ ಜಾತಿ ಮತ್ತು ಪಂಗಡ ವಿದ್ಯಾರ್ಥಿಗಳಿಗೆ ರಾಜ್ಯದ 5ಕಡೆ ಮೆಗಾ ಹಾಸ್ಟೆಲ್ ನಿರ್ಮಾಣಕ್ಕೆ ಟೆಂಡರ್ ಪ್ರಕ್ರಿಯೆ ಮುಗಿದೆ. ತಲಾ ಒಂದು ಸಾವಿರ ವಿದ್ಯಾರ್ಥಿಗಳಿಗೆ ಹಾಸ್ಟೆಲ್ ಸೌಲಭ್ಯ ದೊರೆಯಲಿದೆ. ಇದು ಹೊಸ ಪರಿಕಲ್ಪನೆಯಾಗಿದ್ದು, ಇನ್ನಷ್ಟು ಮೆಗಾ ಹಾಸ್ಟೆಲ್ ನಿರ್ಮಿಸಲಾಗುವುದು ಎಂದರು. ಪರಿಶಿಷ್ಟ ಜಾತಿ ಮತ್ತು ಪಂಗಡದ ಸಮುದಾಯದವರನ್ನು ಮುಖ್ಯವಾಹಿನಿಗೆ ತರಲು ಹಲವು ಕಾರ್ಯಕ್ರಮಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನವಾಗಬೇಕು ಎಂದು ಹೇಳಿದರು.

ನನ್ನ ವಿಧಾನಸೌಧದ 3ನೇ ಮಹಡಿಗೇರಿಸಿ!

ಪುಕ್ಕಟೆ ಪ್ರಚಾರ ಪಡೆದುಕೊಂಡರು ಎಂದು ಟೀಕಿಸಿದರು. ರಾಜ್ಯ ಸರ್ಕಾರ ವ್ಯಾಪಕ ಭ್ರಷ್ಟಾಚಾರದಲ್ಲಿ ಮುಳುಗಿದ್ದು, ಗುತ್ತಿಗೆದಾರರ ಸಂಘದ ಅಧ್ಯಕ್ಷರು ಪ್ರಧಾನಿಗೆ 40 ಪರ್ಸೆಂಟ್ ಕಮಿಷನ್ ಬಗ್ಗೆ ದೂರಿದ್ದರೆ, ಕೆ.ಎಸ್.ಈಶ್ವರಪ್ಪ ಅವರ ಕಿರುಕುಳ ತಾಳಲಾರದೆ ಅವರದೇ ಪಕ್ಷದ ಗುತ್ತಿಗೆದಾರನೊಬ್ಬ ಆತ್ಮಹತ್ಯೆ ಮಾಡಿಕೊಂಡ. ಇಂತಹ ದುರ್ಘಟನೆ ನಮ್ಮ ಹಿಂದಿನ ಸರ್ಕಾರದಲ್ಲಿ ನಡೆಯಲೇ ಇಲ್ಲ. ಜನರಿಗೆ ನೀಡಿದ್ದ ಭರವಸೆಗಳಲ್ಲಿ ಎಲ್ಲವನ್ನೂ ಈಡೇರಿಸುವ ಪ್ರಾಮಾಣಿಕ ಪ್ರಯತ್ನ ಮಾಡಿದ್ದೇವೆ ಎಂದರು.

ರಾಜ್ಯದಲ್ಲಿ ಮತ್ತೆ ಕಾಂಗ್ರೆಸ್‌ಗೆ ಅಧಿಕಾರ ನೀಡಿದರೆ ಪ್ರತಿಯೊಂದು ಕುಟುಂಬದ ಮಹಿಳೆಯರಿಗೆ ಮಾಸಿಕ 2 ಸಾವಿರ ಸಹಾಯಧನ ಖಚಿತ. 200 ಯೂನಿಟ್ ವಿದ್ಯುತ್ ಉಚಿತವಾಗಿ ನೀಡುತ್ತೇವೆ. ಈ ಬಗ್ಗೆ ನಾನು ಮತ್ತು ಸಿದ್ದರಾಮಯ್ಯ ಸಹಿ ಮಾಡಿದ ಭರವಸೆಯ ಕಾರ್ಡ್‌ಗಳನ್ನು ಪ್ರತಿಯೊಂದು ಕುಟುಂಬಕ್ಕೂ ನೀಡಲು ಬದ್ಧರಾಗಿದ್ದೇವೆ. ಈ ಹಿಂದೆ ಕ್ಷೇತ್ರದಲ್ಲಿ ಶಾಸಕ, ಸಚಿವರಾಗಿದ್ದ ಮಹದೇವಪ್ಪ ಅವರು ಕೂಡ ಕ್ಷೇತ್ರದ ಸಮಗ್ರ ಅಭಿವೃದ್ಧಿಗೆ ಹಾಗೂ ಜನರಿಗೆ ಸರ್ಕಾರದ ಸೌಲಭ್ಯಗಳನ್ನು ತಲುಪಿಸುವಲ್ಲಿ ಪರಿಣಾಮಕಾರಿಯಾಗಿ ಕೆಲಸ ಮಾಡಿದ್ದಾರೆ ಎಂದು ಪ್ರಶಂಸೆ ವ್ಯಕ್ತಪಡಿಸಿದರು.

ಮಾಜಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಮಾತನಾಡಿ, ಜೆಡಿಎಸ್‌ನ ಸಮ್ಮಿಶ್ರ ಸರ್ಕಾರ ಹಾಗೂ ಬಿಜೆಪಿ ಸರ್ಕಾರದ ಆಡಳಿತವನ್ನು ಕಾಂಗ್ರೆಸ್ ಸರ್ಕಾರದ ಜೊತೆ ತಾಳೆ ಹಾಕಿ, ವಿಶ್ಲೇಷಣೆ ಮಾಡಿದರೆ ಜನರು ರಾಜ್ಯಾದ್ಯಂತ ಕಾಂಗ್ರೆಸ್‌ನತ್ತ ಒಲವನ್ನು ವ್ಯಕ್ತಪಡಿಸುತ್ತಿದ್ದಾರೆ. ಕ್ಷೇತ್ರದಲ್ಲಿ ನನ್ನಿಂದ ಯಾವುದಾದರೊಂದು ಗ್ರಾಮ ಅಭಿವೃದ್ಧಿಯಿಂದ ಬಿಟ್ಟುಹೋಗಿದ್ದರೆ ರಾಜಕಾರಣವನ್ನೇ ಬಿಟ್ಟು ಬಿಡುತ್ತೇನೆ. ರಾಜ್ಯಪಾಲರಿಂದ ಪ್ರಮಾಣ ವಚನ ಸ್ವೀಕರಿಸಿದ ಜವಾಬ್ದಾರಿಯುತ ಉನ್ನತ ಶಿಕ್ಷಣ ಸಚಿವ ಅಶ್ವಥ್ ನಾರಾಯಣ ಜನರ ಕಾಳಜಿ ಇರುವ ನಾಯಕ ಸಿದ್ದರಾಮಯ್ಯ ಅವರನ್ನು ಟಿಪ್ಪು ಸುಲ್ತಾನ್‌ನನ್ನು ಹೊಡೆದು ಹಾಕಿದಂತೆ ಹೊಡೆದು ಹಾಕಿ ಎನ್ನುವುದು ಪ್ರಜಾಪ್ರಭುತ್ವದ ವಿಪರ್ಯಾಸ. ರಾಜಕೀಯ ಅಧಿಕಾರಕ್ಕಾಗಿ ಧರ್ಮ ಮತ್ತು ದೇವರು ಹಾಗೂ ಜಾತಿಯನ್ನು ದುರ್ಬಳಕೆ ಮಾಡಿಕೊಳ್ಳುವವರ ಬಗ್ಗೆ ಜನರು ಜಾಗೃತರಾಗಿರಬೇಕು ಎಂದು ಸಲಹೆ ನೀಡಿದರು. ಕಾಂಗ್ರೆಸ್ ಟಿಕೆಟ್ ಆಕಾಂಕ್ಷಿ ಸುನೀಲ್ ಬೋಸ್ ಮಾತನಾಡಿ, ಡಬಲ್ ಇಂಜಿನ್ ಸರ್ಕಾರ ನಮ್ಮದೇ ಇರುವುದರಿಂದ ಭೂಲೋಕವನ್ನೇ ಸ್ವರ್ಗವನ್ನಾಗಿಸುತ್ತೇವೆ ಎಂದು ಬುರುಡೆ ಬಿಡುವ ಬಿಜೆಪಿ ನಾಯಕರು ಬೆಲೆ ಏರಿಕೆ ಮೂಲಕ ಜನರ ಬದುಕಿನೊಂದಿಗೆ ಚೆಲ್ಲಾಟವಾಡುತ್ತಿದ್ದಾರೆ ಎಂದು ಆರೋಪಿಸಿದರು.

ಅದ್ದೂರಿ ಸ್ವಾಗತ, ಬೈಕ್ ರ್ಯಾಲಿ: ತಾಲೂಕಿನ ದೊಡ್ಡಮುಲಗೂಡು ಗ್ರಾಮದ ಮೂಲಕ ನರಸೀಪುರ ಕ್ಷೇತ್ರದಲ್ಲಿ ಪ್ರಜಾಧ್ವನಿ ಯಾತ್ರೆ ಆರಂಭಿಸಿದ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಅವರಿಗೆ ಮೇಣಸಿಕ್ಯಾತನಹಳ್ಳಿ, ಯಾಚೇನಹಳ್ಳಿ, ತುರುಗನೂರು, ಚಾಮನಹಳ್ಳಿ, ಬನ್ನೂರು ಸಂತೆಮಾಳ ಹಾಗೂ ಕಾವೇರಿ ವೃತ್ತದಲ್ಲಿ ವಿವಿಧ ಬಗೆಯ ಹೂವಿನ ಬೃಹತ್ ಹಾರಗಳು ಸೇರಿದಂತೆ ಕೊಬ್ಬರಿ, ಬಾದಾಮಿ ಹಾಗೂ ಸೇಬಿನ ಬೃಹತ್ ಹಾರಗಳನ್ನು ಕ್ರೇನ್‌ಗಳಲ್ಲಿ ಹಾಕಿ, ಮಾರ್ಗದುದ್ದಕ್ಕೂ ಪುಷ್ಪವೃಷ್ಟಿಗೈದು ಅದ್ದೂರಿ ಸ್ವಾಗತ ಕೋರಲಾಯಿತು. ಸಾವಿರಾರು ಕಾರ್ಯಕರ್ತರು ಪಕ್ಷದ ಬಾವುಟ ಕಟ್ಟಿ ಬೈಕ್ ರ್ಯಾಲಿ ನಡೆಸಿ ಜನರ ಗಮನ ಸೆಳೆದರು. ಬನ್ನೂರಲ್ಲಿ ಪೂರ್ಣಕುಂಭ ಸ್ವಾಗತದೊಂದಿಗೆ ಶಿವಕುಮಾರ್ ಅವರನ್ನು ವೇದಿಕೆಗೆ ಕರೆತರಲಾಯಿತು.

ಕೆಪಿಸಿಸಿ ಕಾರ್ಯಾಧ್ಯಕ್ಷ ಆರ್.ಧ್ರುವನಾರಾಯಣ್, ಮಾಜಿ ಸಂಸದ ವಿ.ಎಸ್.ಉಗ್ರಪ್ಪ, ಮಾಜಿ ಸಚಿವ ಹೆಚ್.ಎಂ.ರೇವಣ್ಣ, ಶಾಸಕ ಡಾ.ಯತೀಂದ್ರ, ಮಾಜಿ ಶಾಸಕರಾದ ಜೆ.ಸುನೀತಾ ವೀರಪ್ಪಗೌಡ, ಎಸ್.ಕೃಷ್ಣಪ್ಪ, ಮೈಮುಲ್ ನಿರ್ದೇಶಕ ಆರ್.ಚಲುವರಾಜು, ಹಿಂದುಳಿದ ವರ್ಗಗಳ ಉಪಾಧ್ಯಕ್ಷ ಎ.ಎನ್.ಸ್ವಾಮಿ. ಗುತ್ತಿಗೆದಾರ ಸಿದ್ದೇಗೌಡ, ಪುರಸಭಾ ಮಾಜಿ ಸದಸ್ಯ ಸಿದ್ದೇಗೌಡ, ಡಾ.ಬಿ.ಕೆ.ಜ್ಞಾನಪ್ರಕಾಶ್, ಪಿಎಸಿಸಿ ಅಧ್ಯಕ್ಷ ವೈ.ಎನ್.ಶಂಕರೇಗೌಡ, ಕಾಂಗ್ರೆಸ್ ಜಿಲ್ಲಾಧ್ಯಕ್ಷ ಡಾ.ಬಿ.ಜೆ.ವಿಜಯಕುಮಾರ್, ಬ್ಲಾಕ್ ಅಧ್ಯಕ್ಷ ಚನ್ನಕೇಶವ, ಎಂ.ಡಿ.ಬಸವರಾಜು, ಪಿಕಾರ್ಡ್ ಬ್ಯಾಂಕ್ ಮಾಜಿ ಅಧ್ಯಕ್ಷ ಕೆ.ವಜ್ರೇಗೌಡ, ಪುರಸಭೆ ಮಾಜಿ ಅಧ್ಯಕ್ಷ ಡಿ.ಪದ್ಮನಾಭ, ಸದಸ್ಯ ಬಾದಾಮಿ ಮಂಜು, ಸಿದ್ದರಾಜು, ಜಿಪಂ ಮಾಜಿ ಸದಸ್ಯೆ ಎಂ.ಸುಧಾ ಮಹದೇವಯ್ಯ, ಬೃಂದಾ ಕೃಷ್ಣೇಗೌಡ, ವೀಣಾ ಶಿವಕುಮಾರ್, ನಿವೃತ್ತ ಮುಖ್ಯ ಲೆಕ್ಕಾಧಿಕಾರಿ ಎಂ.ಜೆ.ಶಿವಸ್ವಾಮಿ, ಕೆಪಿಸಿಸಿ ಕಾರ್ಯದರ್ಶಿ ಶಿವನಾಗಪ್ಪ, ಮಹಿಳಾ ರಾಜ್ಯಾಧ್ಯಕ್ಷೆ ಪುಷ್ಪಾ ಅಮರ್‌ನಾಥ್, ಮುಖಂಡರಾದ ಲಕ್ಷ್ಮಣ್, ಮರೀಗೌಡ, ಮೋಹನ್ ಕುಮಾರ್ ಇನ್ನಿತರರಿದ್ದರು.

ರಸ್ತೆ ಬದಿ ವ್ಯಾಪಾರಿಗಳಿಗೆ ಆರ್ಥಿಕ ನೆರವು ಕೇಂದ್ರದ 'ಸ್ವನಿಧಿ' ಯೋಜನೆಯಡಿ

ಫಲಾನುಭವಿಗಳ ಹೆಸರು ನೋಂದಣಿ ಅಭಿಯಾನಕ್ಕೆ ಚಾಲನೆ

● ಬಡ್ಡಿ ದಂಧೆಯಿಂದ ನಲುಗಿರುವ ಸಣ್ಣ ವ್ಯಾಪಾರಿಗಳಿಗೆ ಭರವಸೆ ● ಆರ್ಥಿಕ ನೆರವಿನ ಮೂಲಕ ಸ್ವಾವಲಂಬಿಗಳಾಗಿಸುವ ಮಹಾ ಪ್ರಯತ್ನ ● ಸಂಸದ ಪ್ರತಾಪ್ ಸಿಂಹ, ಶಾಸಕ ರಾಮದಾಸ್‌ರಿಂದ ಅಭಿಯಾನ ಉದ್ಘಾಟನೆ

ಮೈಸೂರು,ಫೆ.20(ಎಂಟಿವೈ)– ರಸ್ತೆ ಬದಿ ವ್ಯಾಪಾರಿಗಳಿಗೆ ಆರ್ಥಿಕ ನೆರವು ನೀಡಿ ಸ್ವಾವಲಂಭಿಗಳಾಗಿಸುವ ನಿಟ್ಟಿನಲ್ಲಿ ಕೇಂದ್ರ 'ಸ್ವನಿಧಿ' ಯೋಜನೆಯ ಸಮಗ್ರ ಅನುಷ್ಠಾನಕ್ಕಾಗಿ ಬೀದಿ ಬದಿ ವ್ಯಾಪಾರಿಗಳ ನೋಂದಣಿ ಅಭಿಯಾನಕ್ಕೆ ಸಂಸದ ಪ್ರತಾಪ ಸಿಂಹ ಚಾಲನೆ ನೀಡಿದರು.

ಮೈಸೂರಿನ ನಂಜುಮಳಿಗೆ ವೃತ್ತದ ಬಳಿ ಸೋಮವಾರ ನಡೆದ 'ಸ್ವನಿಧಿ' ಯೋಜನೆ ಫಲಾನುಭವಿಗಳ ಹೆಸರು ನೋಂದಣಿ ಅಭಿಯಾನಕ್ಕೆ ಚಾಲನೆ ನೀಡಿದ ಬಳಿಕ ಮಾತನಾಡಿದ ಅವರು, ಬೆಂಗಳೂರು, ಮೈಸೂರು ಸೇರಿದಂತೆ ಹಲವೆಡೆ ಮೀಟರ್ ಬಡ್ಡಿ ದಂಧೆಕೋರರ ಹಾವಳಿ ಹೆಚ್ಚಾಗಿದೆ. ಅದರಲ್ಲೂ ಬೆಂಗಳೂರಿನ ಕೆ.ಆರ್.ಮಾರುಕಟ್ಟೆಯಲ್ಲಿ ಸಣ್ಣ ವ್ಯಾಪಾರಿಗಳು, ತಳ್ಳುಗಾಡಿಯಲ್ಲಿ ವ್ಯಾಪಾರ ಮಾಡುವವರಿಗೆ ಮೀಟರ್ ಬಡ್ಡಿ ದಂಧೆ ನಡೆಸುವವರು ಬೆಳಿಗ್ಗೆ 900 ರೂ. ನೀಡಿ, ರಾತ್ರಿ ಸಾವಿರ ರೂ. ವಸೂಲಿ ಮಾಡುತ್ತಾರೆ. ಒಂದೇ ದಿನಕ್ಕೆ ಸಾವಿರಕ್ಕೆ 100 ರೂ. ಬಡ್ಡಿ ವಸೂಲಿ ದಂಧೆ ನಡೆಸುತ್ತಿದ್ದಾರೆ. ಈ ದಂಧೆ ಬಗ್ಗೆ ಇದುವರೆಗೂ ಯಾವುದೇ ಸರ್ಕಾರಗಳು ಕ್ರಮ ಕೈಗೊಳ್ಳಲಿಲ್ಲ. ಇದರಿಂದ ವ್ಯಾಪಾರಿಗಳು ಸಂಕಷ್ಟಕ್ಕೆ ತುತ್ತಾಗಿದ್ದರು ಎಂದು ವಿಷಾದಿಸಿದರು.

ಮೀಟರ್ ಬಡ್ಡಿ ದಂಧೆಯಲ್ಲಿ ಸಿಲುಕಿ ನರಳುತ್ತಿದ್ದ ವ್ಯಾಪಾರಿಗಳ ಸಂಕಷ್ಟವನ್ನು ಅರಿತ ಪ್ರಧಾನಿ ನರೇಂದ್ರ ಮೋದಿ 'ಸ್ವನಿಧಿ' ಯೋಜನೆಯನ್ನು ಜಾರಿಗೆ ತಂದಿದ್ದಾರೆ. ಈ ಯೋಜನೆ ಬೀದಿ ಬದಿ ವ್ಯಾಪಾರಿಗಳ ಸಬಲೀಕರಣಕ್ಕೆ ಸಹಕಾರಿಯಾಗಲಿದೆ. ಸ್ವನಿಧಿ ಯೋಜನೆಯ ಸಂಪೂರ್ಣ ಲಾಭ ಬೀದಿ ಬದಿ ವ್ಯಾಪಾರಿಗಳಿಗೆ ಲಭಿಸುತ್ತದೆ. ಬಡ್ಡಿ ರಹಿತವಾಗಿ ದೊರೆಯುವ ಸಾಲ ಸೌಲಭ್ಯ ಬೀದಿ ಬದಿ ವ್ಯಾಪಾರಿಗಳ ಏಳಿಗೆಗೆ ಪೂರಕವಾಗಿದೆ ಎಂದರು.

ಚುನಾವಣೆ ಸಂದರ್ಭದಲ್ಲಿ ಓಟ್ ಹಾಕಲಿ ಎಂದು ಕೆಲವರು ಕವರ್‌ನಲ್ಲಿ 500 ರೂ. ಅಥವಾ ಸಾವಿರ ರೂ. ಇಟ್ಟು, ಅದರಲ್ಲಿ ಚಾಮುಂಡೇಶ್ವರಿ ತಾಯಿಯ ಫೋಟೋ ಅಥವಾ ಸಾಯಿಬಾಬಾ ಫೋಟೋ, ಅಕ್ಷತೆ ಹಾಕಿ ಕೊಡುತ್ತಾರೆ. ಆದರೆ, ಬೀದಿ ಬದಿ ವ್ಯಾಪಾರಿಗಳಿಗೆ ಶಾಶ್ವತವಾಗಿ ಕಾರ್ಯಕ್ರಮ ರೂಪಿಸಲು ಯಾರೂ ಆಲೋಚಿಸಿರಲಿಲ್ಲ. ಕೇಂದ್ರ ಸರ್ಕಾರದ ಸ್ವನಿಧಿ ಯೋಜನೆ ಮೈಸೂರಲ್ಲಿ ಪರಿಣಾಮಕಾರಿಯಾಗಿ ಜಾರಿಗೆ ತರಲು ಕ್ರಮ ಕೈಗೊಳ್ಳಲಾಗಿದ್ದು, ಅದಕ್ಕಾಗಿ ಹೆಸರು ನೋಂದಣಿ ಅಭಿಯಾನ ನಡೆಸಲಾಗುತ್ತಿದೆ ಎಂದು ವಿವರಿಸಿದರು.

ಕಾರ್ಯಕ್ರಮದಲ್ಲಿ ಶಾಸಕ ಎಸ್.ಎ.ರಾಮದಾಸ್ ಮಾತನಾಡಿ, ಮೈಸೂರು ಮಹಾನಗರ ಪಾಲಿಕೆಯ 9 ವಲಯ ಕಚೇರಿಗಳಲ್ಲಿ 5 ದಿನಗಳ ನೋಂದಣಿ ಅಭಿಯಾನ ನಡೆಯಲಿದೆ. ಕೇಂದ್ರ ಸರ್ಕಾರದ ಮಹತ್ವಾಕಾಂಕ್ಷೆಯ ಯೋಜನೆಗಳಲ್ಲಿ ಒಂದಾಗಿರುವ ಸ್ವನಿಧಿ ಯೋಜನೆಯನ್ನು ಪರಿಣಾಮಕಾರಿ ಅನುಷ್ಠಾನಗೊಳಿಸಲು ಈಗಾಗಲೇ ಪೊಲೀಸ್ ಇಲಾಖೆ ನೆರವಿನೊಂದಿಗೆ ಸಮೀಕ್ಷೆ ಮಾಡಲಾಗಿದೆ. ಕೆಲವೆಡೆ ಒಬ್ಬರೇ ಕೆಲಸಗಾರರನ್ನು ಇಟ್ಟುಕೊಂಡು 3–4 ಕಡೆ ಕ್ಯಾಂಟೀನ್ ಹಾಗೂ ವಿವಿಧ ವ್ಯಾಪಾರ ನಡೆಸುತ್ತಿರುವುದು ತಿಳಿದು ಬಂದಿದೆ. ಹಾಗಾಗಿ ನೈಜ ಫಲಾನುಭವಿಗಳಿಗೆ ಸೌಲಭ್ಯ ದೊರಕಿಸಲು ಕ್ರಮ ಕೈಗೊಳ್ಳಲಾಗಿದೆ. ಬೀದಿ ಬದಿ, ತಳ್ಳುಗಾಡಿ, ಸಣ್ಣ ಸಣ್ಣ ವ್ಯಾಪಾರಿಗಳನ್ನು ಗುರುತಿಸಿ ಕೇಂದ್ರ ಸರ್ಕಾರದ ಸವಲತ್ತುಗಳನ್ನು ತಲುಪಿಸಲು ಈ ಕಾರ್ಯಕ್ರಮ ರೂಪಿಸಲಾಗಿದೆ. ಇದುವರೆಗೆ ಸ್ವನಿಧಿ ಯೋಜನೆಗೆ ಮೈಸೂರಿನಲ್ಲಿ 12,450 ಜನರ ನೋಂದಣಿ ಕಾರ್ಯ ಮಾಡಲಾಗಿದ್ದು, 11,890 ಜನರಿಗೆ ಸಾಲ ಶಿಫಾರಸ್ಸು ಪತ್ರ ನೀಡಲಾಗಿದೆ. ಮುಂದಿನ ದಿನಗಳಲ್ಲಿ 5,111 ಜನರ ನೋಂದಣಿ ಮಾಡಿಕೊಳ್ಳುವ ಗುರಿಯಿದೆ. ಕೇಂದ್ರ ಸರ್ಕಾರದ ಹಣಕಾಸು ಇಲಾಖೆಯ ನೆರವಿನೊಂದಿಗೆ ಯೋಜನೆ ಜಾರಿಯಾಗಿದ್ದು, ಈ ಸಂಬಂಧ ಈಗಾಗಲೇ ಗುರುತಿಸಲ್ಪಟ್ಟಿರುವ ಫಲಾನುಭವಿಗಳಿಗೆ ನೆರವು ಸಿಗಲಿದೆ ಎಂದರು.

ಇಂದಿನಿಂದ ನಗರದ ಎಲ್ಲಾ 9 ವಲಯ ಕಚೇರಿಗಳಲ್ಲೂ ಹೆಸರು ನೋಂದಣಿ ಅಭಿಯಾನ ನಡೆಯಲಿದೆ. ಹೆಸರು ನೋಂದಾಯಿಸಿಕೊಂಡಿರುವವರಿಗೆ ಸೌಲಭ್ಯ ಕಲ್ಪಿಸಲು ಬ್ಯಾಂಕ್‌ಗಳಲ್ಲಿ ಸ್ವನಿಧಿ ಕೌಂಟರ್ ತೆರೆದು, ನೆರವು ಮಂಜೂರು ಮಾಡಲಾಗುತ್ತದೆ. ಈ ಯೋಜನೆಯ ಮೂಲಕ ಮೊದಲ ಹಂತದಲ್ಲಿ 8783 ಫಲಾನುಭವಿಗಳಿಗೆ ಬಡ್ಡಿ ರಹಿತವಾಗಿ ತಲಾ 10 ಸಾವಿರ ರೂ. ಮೂಲ ಬಂಡವಾಳ ಒದಗಿಸಲಾಗುತ್ತದೆ. ಮೊದಲ ಹಂತದಲ್ಲಿ 10 ಸಾವಿರ ಹಣಕಾಸು ನೆರವು ಪಡೆದವರಿಗೆ ಎರಡನೇ ಹಂತದಲ್ಲಿ 20 ಸಾವಿರ ರೂ. ಹಾಗೂ ನಂತರದಲ್ಲಿ 50 ಸಾವಿರ ರೂ. ನೀಡಲಾಗುವುದು. ಎಲ್ಲಾ ವ್ಯವಹಾರಗಳೂ ಬ್ಯಾಂಕ್ ಮೂಲಕವೇ ನಡೆಯುವುದರಿಂದ ಮಧ್ಯವರ್ತಿಗಳ ಹಾವಳಿಯಾಗಲೀ, ಮೋಸ, ಅನ್ಯಾಯಕ್ಕೆ ಅವಕಾಶ ಇರುವುದಿಲ್ಲ. ಈ ಮೂಲಕ ಸಣ್ಣ ಪುಟ್ಟ ವ್ಯಾಪಾರಸ್ಥರು ಬಡ್ಡಿ ಹಾಗೂ ಮೀಟರ್ ಬಡ್ಡಿ ದಂಧೆಕೋರರಿಂದ ಕಿರುಕುಳ ಅನುಭವಿಸುವುದು ತಪ್ಪಲಿದೆ. ಕೇಂದ್ರದ ಹಣಕಾಸಿನ ರಾಜ್ಯ ಸಚಿವ ಭಾಗವತ್ ಕಿಶನ್ ಅವರಿಂದ ಫಲಾನುಭವಿಗಳಿಗೆ ನೆರವು ಒದಗಿಸುವ ಕಾರ್ಯಕ್ರಮ ಹಮ್ಮಿಕೊಳ್ಳಲಾಗುವುದು ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಮೇಯರ್ ಶಿವಕುಮಾರ್, ಉಪಮೇಯರ್ ಡಾ.ಜಿ.ರೂಪಾ, ಪಾಲಿಕೆಯ ಆಯುಕ್ತ ಜಿ.ಲಕ್ಷ್ಮೀಕಾಂತ್ ರೆಡ್ಡಿ, ಪಾಲಿಕೆ ಸದಸ್ಯರಾದ ಸೌಮ್ಯ ಉಮೇಶ್, ರಾಮಪ್ರಸಾದ್, ರಮೇಶ್, ಪಾಲಿಕೆ ಹೆಚ್ಚುವರಿ ಆಯುಕ್ತೆ ರೂಪ ಹಾಗೂ ಇನ್ನಿತರರು ಉಪಸ್ಥಿತರಿದ್ದರು.



> ಮೀಟರ್ ಬಡ್ಡಿ ದಂಧೆಯಲ್ಲಿ ಸಿಲುಕಿ ನರಳುತ್ತಿದ್ದ ವ್ಯಾಪಾರಿಗಳ ಸಂಕಷ್ಟವನ್ನು ಅರಿತ ಪ್ರಧಾನಿ ನರೇಂದ್ರ ಮೋದಿ 'ಸ್ವನಿಧಿ' ಯೋಜನೆಯನ್ನು ಜಾರಿಗೆ ತಂದಿದ್ದಾರೆ. ಈ ಯೋಜನೆ ಬೀದಿ ಬದಿ ವ್ಯಾಪಾರಿಗಳ ಸಬಲೀಕರಣಕ್ಕೆ ಸಹಕಾರಿಯಾಗಲಿದೆ. ಸ್ವನಿಧಿ ಯೋಜನೆಯ ಸಂಪೂರ್ಣ ಲಾಭ ಬೀದಿ ಬದಿ ವ್ಯಾಪಾರಿಗಳಿಗೆ ಲಭಿಸುತ್ತದೆ. ಬಡ್ಡಿ ರಹಿತವಾಗಿ ದೊರೆಯುವ ಸಾಲ ಸೌಲಭ್ಯ ಬೀದಿ ಬದಿ ವ್ಯಾಪಾರಿಗಳ ಏಳಿಗೆಗೆ ಪೂರಕವಾಗಿದೆ.
> – ಸಂಸದ ಪ್ರತಾಪ ಸಿಂಹ

ರ್ಯಾಪಿಡೋ ವೈಟ್ ಬೋರ್ಡ್ ಸ್ಕೂಟರ್-ಬೈಕ್‌ಗಳ ಸೇವೆ ನಿರ್ಬಂಧಿಸಲು

ಸರ್ಕಾರ ಶೀಘ್ರ ಕ್ರಮ ವಹಿಸದಿದ್ದರೆ ಫೆ.24ರಿಂದ ಕಪ್ಪು ಪಟ್ಟಿ ಧರಿಸಿ ಆಟೋ ಚಾಲನೆ



ಮೈಸೂರು,ಫೆ.20(ಪಿಎಂ)– ರ್ಯಾಪಿಡೋ ವೈಟ್ ಬೋರ್ಡ್ ಸ್ಕೂಟರ್ ಮತ್ತು ಬೈಕ್‌ಗಳ ಬಾಡಿಗೆ ಸೇವೆ ನಿರ್ಬಂಧಿಸಲು ಸರ್ಕಾರ ಶೀಘ್ರ ಕ್ರಮ ಕೈಗೊಳ್ಳಬೇಕು. ಇಲ್ಲವಾದರೆ ಫೆ.24ರಿಂದ ಆಟೋ ಚಾಲಕರು ಕಪ್ಪು ಪಟ್ಟಿ ಧರಿಸಿ ಅಥವಾ ಕಪ್ಪು ಬಾವುಟ ಕಟ್ಟಿಕೊಂಡು ಸೇವೆ ನೀಡುವ ಮೂಲಕ ಸರ್ಕಾರದ ವಿರುದ್ಧ ಪ್ರತಿಭಟನೆ ನಡೆಸಬೇಕಾಗುತ್ತದೆ ಎಂದು ಮೈಸೂರು ಆಟೋರಿಕ್ಷಾ ಸರ್ವೀಸ್ ಟ್ರಸ್ಟ್ ಎಚ್ಚರಿಸಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಟ್ರಸ್ಟ್ ಅಧ್ಯಕ್ಷ ಬಿ.ನಾಗರಾಜು, ರ್ಯಾಪಿಡೋ ವೈಟ್ ಬೋರ್ಡ್ ಸ್ಕೂಟರ್ ಮತ್ತು ಬೈಕ್‌ಗಳು ಆರ್‌ಟಿಓ ನಿಯಮಗಳನ್ನು ಉಲ್ಲಂಘಿಸಿ ಅಕ್ರಮವಾಗಿ ಸೇವೆ ನೀಡುತ್ತಿರುವುದರ ವಿರುದ್ಧ ಕಾನೂನು ಕ್ರಮ ಜರುಗಿಸಲಾಗಿತ್ತು. ಈ ಹಿನ್ನೆಲೆಯಲ್ಲಿ ರ್ಯಾಪಿಡೋ ಕಂಪನಿ ಹೈಕೋರ್ಟ್‌ನಿಂದ ಯಾವುದೇ ಕಾನೂನು ಕ್ರಮ ಜರುಗಿಸದಂತೆ ತಡೆಯಾಜ್ಞೆ ತರುವಲ್ಲಿ ಯಶಸ್ವಿಯಾಗಿದೆ. ಆದರೆ ಸರ್ಕಾರ ಈ ತಡೆಯಾಜ್ಞೆ ತೆರವಿಗೆ ಪೂರಕ ಕ್ರಮಗಳನ್ನು ಕೈಗೊಳ್ಳುತ್ತಿಲ್ಲ ಎಂದು ದೂರಿದರು.

ವಕೀಲ ಎಂ.ಆರ್.ಸೂರ್ಯಕುಮಾರ್ ಅವರ ಮೂಲಕ ರಾಜ್ಯ ಸರ್ಕಾರದ ಅಡ್ವೋಕೇಟ್ ಜನರಲ್ ಅವರನ್ನು ಭೇಟಿ ಮಾಡಿ ಶೀಘ್ರವೇ ತಡೆಯಾಜ್ಞೆ ತೆರವಿಗೆ ಕ್ರಮ ವಹಿಸಬೇಕೆಂದು ಮನವಿ ಸಲ್ಲಿಸಿದೆವು. ಆದರೆ ಯಾವುದೇ ಪ್ರಯೋಜನವಾಗಿಲ್ಲ. ಈಗಲಾದರೂ ಸರ್ಕಾರ ಎಚ್ಚೆತ್ತು ಶೀಘ್ರ ಕ್ರಮಕ್ಕೆ ಮುಂದಾಗಬೇಕು. ಇಲ್ಲವಾದರೆ ಫೆ.24ರಿಂದ ಸರ್ಕಾರದ ವಿರುದ್ಧ ಪ್ರತಿಭಟನೆಯ ಸೂಚಕವಾಗಿ ಆಟೋ ಚಾಲಕರು ನ್ಯಾಯ ಸಿಗುವವರೆಗೂ ಕಪ್ಪು ಪಟ್ಟಿ ಧರಿಸಿ ಕೆಲಸ ಮಾಡಲಿದ್ದೇವೆ ಎಂದು ಹೇಳಿದರು.

ಈ ಪ್ರತಿಭಟನೆ ಕೇವಲ ಮೈಸೂರಿಗೆ ಮಾತ್ರವಲ್ಲದೇ ಇಡೀ ರಾಜ್ಯದಲ್ಲಿ ನಡೆಯುವಂತೆ ಮಾಡಲಿದ್ದೇವೆ. ಅಲ್ಲದೆ, ಆಟೋ ಚಾಲಕರು ಮತ್ತು ರ್ಯಾಪಿಡೋ ವೈಟ್ ಬೋರ್ಡ್ ಸ್ಕೂಟರ್–ಬೈಕ್‌ಗಳ ಚಾಲಕರ ನಡುವೆ ಯಾವುದೇ ಘರ್ಷಣೆಯಾದರೂ ಸರ್ಕಾರವೇ ಹೊಣೆಯಾಗಬೇಕಾಗುತ್ತದೆ ಎಂದು ಎಚ್ಚರಿಸಿದರು. ವಕೀಲ ಮತ್ತು ಟ್ರಸ್ಟ್‌ನ ಕಾನೂನು ಸಲಹೆಗಾರ ಎಂ.ಆರ್.ಸೂರ್ಯಕುಮಾರ್, ಆಟೋ ಚಾಲಕರಾದ ಲಕ್ಷ್ಮೀನಾರಾಯಣ್, ಸೋಮನಾಯಕ್, ದೊಡ್ಡದೇವಪ್ಪ, ಮಂಜುನಾಥ್ ಗೋಷ್ಠಿಯಲಿದ್ದರು.

ಸಂದೇಶ್ ನಾಗರಾಜ್ ಕಾಂಗ್ರೆಸ್ ಸೇರ್ಪಡೆ



ಮೈಸೂರು, ಫೆ20(ಎಂಕೆ)– ರಾಜ್ಯ ವಿಧಾನಸಭೆ ಚುನಾವಣೆ ಸಮೀಪಿಸುತ್ತಿರುವಂತೆ ಪಕ್ಷಾಂತರ ಪರ್ವ ಜೋರಾಗಿದ್ದು, ಮೈಸೂರಿನ ವಿಧಾನ ಪರಿಷತ್ ಮಾಜಿ ಸದಸ್ಯರೂ ಆದ ಖ್ಯಾತ ಉದ್ಯಮಿ ಹಾಗೂ ಚಿತ್ರ ನಿರ್ಮಾಪಕ ಸಂದೇಶ್ ನಾಗರಾಜ್ ಇಂದು ಕಾಂಗ್ರೆಸ್ ಸೇರಿದ್ದಾರೆ.

ಬೆಂಗಳೂರಿನ ಕೆಪಿಸಿಸಿ ಕಚೇರಿಯಲ್ಲಿ ಎಐಸಿಸಿ ಪ್ರಧಾನ ಕಾರ್ಯದರ್ಶಿ ಹಾಗೂ ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲ, ವಿಪಕ್ಷ ನಾಯಕ ಸಿದ್ದರಾಮಯ್ಯ ಅವರ ಸಮ್ಮುಖದಲ್ಲಿ ಕಾಂಗ್ರೆಸ್ ಬಾವುಟ ಹಿಡಿದಿದ್ದಾರೆ. ಜೆಡಿಎಸ್‌ನಿಂದ ಎರಡು ಬಾರಿ ವಿಧಾನ ಪರಿಷತ್ ಸದಸ್ಯರಾಗಿ ಆಯ್ಕೆಯಾಗಿದ್ದ ಅವರು, ಆ ಪಕ್ಷದ ಕೆಲವು ಮುಖಂಡರ ವರ್ತನೆಯಿಂದ ಬೇಸತ್ತು ಅಂತರ ಕಾಯ್ದುಕೊಂಡಿದ್ದರು.

ಕಳೆದ ವರ್ಷ ಬಿಜೆಪಿ ಸೇರ್ಪಡೆಯಾಗಿದ್ದ ಸಂದೇಶ್ ನಾಗರಾಜ್ ಅವರು, ಪಕ್ಷ ಸೇರ್ಪಡೆ ವೇಳೆ ನಾಯಕರು ನೀಡಿದ ಭರವಸೆ ಹುಸಿಯಾದ ಹಿನ್ನಲೆಯಲ್ಲಿ ಇತ್ತೀಚೆಗೆ ಆ ಪಕ್ಷದ ಪ್ರಾಥಮಿಕ ಸದಸ್ಯತ್ವಕ್ಕೆ ರಾಜೀನಾಮೆ ನೀಡಿದ್ದರು. ಅಂತಿಮವಾಗಿ ಇಂದು ಕಾಂಗ್ರೆಸ್ ಸೇರ್ಪಡೆಯೊಂದಿಗೆ ಆ ಪಕ್ಷಕ್ಕೆ ಮತ್ತೆ ಮರಳಿದಂತಾಗಿದೆ. ಸಂದೇಶ್ ಅವರು ಈ ಹಿಂದೆ ಎಸ್.ಎಂ.ಕೃಷ್ಣ ಮುಖ್ಯಮಂತ್ರಿಯಾಗಿದ್ದ ವೇಳೆ ಕಾಂಗ್ರೆಸ್‌ನಲ್ಲಿದ್ದರು. ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾಗಿದ್ದ ಅವರು, ನಂತರ ಚಾಮರಾಜ ವಿಧಾನಸಭಾ ಕ್ಷೇತ್ರದಿಂದಲೂ ಕಾಂಗ್ರೆಸ್ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದರು.

ವಿವಿಧ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಶಾಸಕ ಎಲ್.ನಾಗೇಂದ್ರ ಚಾಲನೆ



ಮೈಸೂರು,ಫೆ20(ಪಿಎಂ)– ಚಾಮರಾಜ ಕ್ಷೇತ್ರದ ವ್ಯಾಪ್ತಿಯ ಮೈಸೂರಿನ ಪಡುವಾರಹಳ್ಳಿಯ ವಿವಿಧ ರಸ್ತೆಗಳ ಅಭಿವೃದ್ಧಿ ಕಾಮಗಾರಿಗೆ ಕ್ಷೇತ್ರದ ಶಾಸಕ ಎಲ್.ನಾಗೇಂದ್ರ ಸೋಮವಾರ ಚಾಲನೆ ನೀಡಿದರು.

ಮೈಸೂರು ಮಹಾನಗರ ಪಾಲಿಕೆ ವತಿಯಿಂದ ಎಸ್‌ಎಫ್‌ಸಿ ವಿಶೇಷ ಅನುದಾನದ 1 ಕೋಟಿ ರೂ. ವೆಚ್ಚದಲ್ಲಿ ಪಡುವಾರ ಹಳ್ಳಿಯ ವಾರ್ಡ್ 22ರ ವ್ಯಾಪ್ತಿಯ 2, 3, 4, 5ನೇ ಮುಖ್ಯ ರಸ್ತೆಗಳು ಹಾಗೂ ಇವುಗಳ ಅಡ್ಡ ರಸ್ತೆಗಳ ಡಾಂಬರೀಕರಣ ಕಾಮಗಾರಿಗೆ ಶಾಸಕರು ಗುದ್ದಲಿ ಪೂಜೆ ನೆರವೇರಿಸಿದರು.

ಪಾಲಿಕೆ ಸದಸ್ಯ ಚಿಕ್ಕವೆಂಕಟು, ಮಾಜಿ ಸದಸ್ಯ ಶ್ರೀರಾಮ್, ಬಿಜೆಪಿ ವಾರ್ಡ್ ಅಧ್ಯಕ್ಷ ಮಂಜು, ಮುಖಂಡರಾದ ಸೋಮಣ್ಣ, ರಾಮಣ್ಣ, ಪೈ.ಶಿವು, ಶಂಬಣ್ಣ, ನಿಂಗಣ್ಣ, ಭೈರಪ್ಪ, ಗಿರೀಶ್, ವೇಣು, ಸುಧಾಮಣಿ, ಸುಧಾ, ರಾಮಚಂದ್ರ, ಉಮಾ ಹಾಗೂ ಮತ್ತಿತರರು ಹಾಜರಿದ್ದರು.

ಮಹಿಳಾ ಕಾನ್‌ಸ್ಟೇಬಲ್ ನೇಣಿಗೆ ಶರಣು

ಮೈಸೂರು, ಫೆ.20(ಆರ್‌ಕೆ)– ಅನಾರೋಗ್ಯದಿಂದ ಬಳಲುತ್ತಿದ್ದ ಮಹಿಳಾ ಪೊಲೀಸ್ ಕಾನ್‌ಸ್ಟೇಬಲ್ ನೇಣುಬಿಗಿದು ಕೊಂಡು ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ಮೈಸೂರಿನ ಜಾಕಿ ಕ್ವಾಟ್ರಸ್‌ನಲ್ಲಿ ಇಂದು ಮಧ್ಯಾಹ್ನ ಸಂಭವಿಸಿದೆ.




ಮೈಸೂರಿನ ನಜರ್‌ಬಾದ್ ಠಾಣೆ ಕಾನ್ ಸ್ಟೇಬಲ್ ಗೀತಾ ಆತ್ಮಹತ್ಯೆ ಮಾಡಿಕೊಂಡವರು. ಜಾಕಿ ಕ್ವಾಟ್ರಸ್ ಪೊಲೀಸ್ ವಸತಿ ಗೃಹದಲ್ಲಿ ವಾಸವಾಗಿದ್ದ ಅವರು, ಇಂದು ಮಧ್ಯಾಹ್ನ ಸುಮಾರು 12.10 ಗಂಟೆ ವೇಳೆಗೆ ಮನೆ ಯಲ್ಲಿ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿ ಕೊಂಡಿದ್ದಾರೆ. ವಿಷಯ ತಿಳಿದ ತಕ್ಷಣ ಸ್ಥಳಕ್ಕೆ ತೆರಳಿದ ನಜರ್‌ಬಾದ್ ಠಾಣೆ ಇನ್‌ಸ್ಪೆಕ್ಟರ್ ಸಂತೋಷ ಹಾಗೂ ಸಿಬ್ಬಂದಿ ಮಹಜರು ನಡೆಸಿ ಮೈಸೂರು ಮೆಡಿಕಲ್ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ ಶವಾಗಾರದಲ್ಲಿ ಮರಣೋತ್ತರ ಪರೀಕ್ಷೆ ನಡೆಸಿದ ನಂತರ ದೇಹವನ್ನು ವಾರಸುದಾರರಿಗೆ ಒಪ್ಪಿಸಿದರು. 11 ವರ್ಷಗಳ ಹಿಂದೆ ಮದುವೆಯಾಗಿದ್ದ ಗೀತಾ ಅವರಿಗೆ ಓರ್ವ ಪುತ್ರಿ ಇದ್ದು, ಕೆಲ ತಿಂಗಳಿಂದ ಅನಾರೋಗ್ಯದಿಂದ ಬಳಲುತ್ತಿದ್ದರು. ಚಿಕಿತ್ಸೆ ಪಡೆದರೂ ಗುಣಮುಖರಾಗದ ಕಾರಣ ಜಿಗುಪ್ಸೆಗೊಂಡು ಆಕೆ ಆತ್ಮಹತ್ಯೆಗೆ ಶರಣಾಗಿದ್ದಾರೆ ಎಂದು ಪ್ರಕರಣ ದಾಖಲಿಸಿಕೊಂಡಿರುವ ಪೊಲೀಸರು ತಿಳಿಸಿದ್ದಾರೆ.

ರಾಜ್ಯ ಬಜೆಟ್‌ನಲ್ಲಿ ಕಾಯಕ ಸಮಾಜಗಳ ಶ್ರೇಯೋಭಿವೃದ್ಧಿಗೆ ಪ್ರತ್ಯೇಕ ನಿಗಮ ಘೋಷಿಸಿದ

ಮುಖ್ಯಮಂತ್ರಿಗಳಿಗೆ ಕಾಯಕ ಸಮಾಜಗಳ ಒಕ್ಕೂಟದಿಂದ ಧನ್ಯವಾದ

ಸಿದ್ದರಾಮಯ್ಯ ಕುರಿತು ಸಚಿವ ಡಾ.ಅಶ್ವತ್ಥ್ ನಾರಾಯಣ್ ಹೇಳಿಕೆಗೆ ತೀವ್ರ ಖಂಡನೆ



ಮೈಸೂರು,ಫೆ.20(ಪಿಎಂ)– ಕಾಯಕ ಸಮಾಜಗಳ ಶ್ರೇಯೋಭಿವೃದ್ಧಿಗಾಗಿ ಪ್ರತ್ಯೇಕ ನಿಗಮವನ್ನು ಈ ವರ್ಷವೇ ಸ್ಥಾಪಿಸುವುದಾಗಿ ಪ್ರಸಕ್ತ ಸಾಲಿನ ರಾಜ್ಯ ಬಜೆಟ್‌ನಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಘೋಷಣೆ ಮಾಡಿದ್ದು, ಇದಕ್ಕಾಗಿ ಅವರಿಗೆ ಧನ್ಯವಾದ ಅರ್ಪಿಸುವುದಾಗಿ ಕರ್ನಾಟಕ ರಾಜ್ಯ ಕಾಯಕ ಸಮಾಜಗಳ ಒಕ್ಕೂಟದ ರಾಜ್ಯಾಧ್ಯಕ್ಷ ಕೆ.ಪಿ.ಪುಟ್ಟಸಿದ್ದಶೆಟ್ಟಿ ಹೇಳಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಕಳೆದ ಬಜೆಟ್‌ನಲ್ಲಿ ಶೇ.43ರಷ್ಟು ಮಾತ್ರವೇ ಖರ್ಚು ಮಾಡಲಾಗಿದೆ ಎಂದು ಆರ್ಥಿಕ ಸಮೀಕ್ಷೆ ಉಲ್ಲೇಖಿಸಿದ್ದು, ಶೇ.57ರಷ್ಟು ಹಣ ವೆಚ್ಚ ಮಾಡದಿರುವುದು ಶೋಚನೀಯ. ಈ ಹಣವನ್ನು ಮಾ.31ರೊಳಗೆ ವೆಚ್ಚ ಮಾಡುವ ನಿಟ್ಟಿನಲ್ಲಿ ಬಡವರ ಖಾತೆಗೆ ತಲಾ 15 ಸಾವಿರ ರೂ. ಹಣ ಹಾಕಬೇಕು. ಇಲ್ಲವಾದರೆ ಸರ್ಕಾರದ ಬಜೆಟ್ ಭರವಸೆಗಳು ಕನ್ನಡಿಯೊಳಗಿನ ಗಂಟಿನಂತೆ ನೋಡಬಹುದೇ ಹೊರತು ಯಾರಿಗೂ ಸಿಗದಂತೆ ಆಗಲಿದೆ ಎಂದರು.

ವಿಧಾನಸಭಾ ಚುನಾವಣೆಯಲ್ಲಿ ಸ್ಪರ್ಧಿಸಲು ಕಾಯಕ ಸಮಾಜಗಳ ಕನಿಷ್ಠ 40 ಅಭ್ಯರ್ಥಿಗಳಿಗೆ ರಾಜಕೀಯ ಪಕ್ಷಗಳು ಅವಕಾಶ ನೀಡಬೇಕು. ಕಾಯಕ ಸಮಾಜಗಳಿಗೆ (ಪ್ರವರ್ಗ–2ಎ) ಶೇ.15ರಷ್ಟಿರುವ ಮೀಸಲಾತಿ ಪ್ರಮಾಣವನ್ನು ಶೇ.27ಕ್ಕೆ ಹೆಚ್ಚಿಸಬೇಕು ಮತ್ತು ಒಳಮೀಸಲಾತಿ ಕಲ್ಪಿಸಬೇಕು. ಕಾಯಕ ಸಮಾಜಗಳ ಅಭಿವೃದ್ಧಿ ಪ್ರಾಧಿಕಾರ ರಚಿಸಿ ಸಾವಿರ ಕೋಟಿ ಅನುದಾನ ಕಲ್ಪಿಸಬೇಕು ಎಂದು ಒತ್ತಾಯಿಸಿದರು.

ಮಾಜಿ ಮುಖ್ಯಮಂತ್ರಿಗಳೂ ಆದ ವಿಪಕ್ಷ ನಾಯಕ ಸಿದ್ದರಾಮಯ್ಯ ಅವರನ್ನು ಟಿಪ್ಪುವಿನಂತೆ ಹೊಡೆದು ಹಾಕಿ ಎಂಬ ಉನ್ನತ ಶಿಕ್ಷಣ ಸಚಿವ ಡಾ.ಅಶ್ವತ್ಥ್ ನಾರಾಯಣ್ ಹೇಳಿಕೆಯನ್ನು ತೀವ್ರವಾಗಿ ಖಂಡಿಸಿದ ಬಿಎಸ್‌ಪಿ ರಾಜ್ಯ ಪ್ರಧಾನ ಕಾರ್ಯದರ್ಶಿಯೂ ಆದ ಕೆ.ಪಿ.ಪುಟ್ಟಸಿದ್ದಶೆಟ್ಟಿ, ಇವರನ್ನು ಸಚಿವ ಸಂಪುಟದಿಂದ ವಜಾಗೊಳಿಸಬೇಕು ಎಂದು ಒತ್ತಾಯಿಸಿದರು.

ಈ ರೀತಿಯ ಹೇಳಿಕೆಗಳ ಮೂಲಕ ಸಾಮಾಜಿಕ ಸಂಘರ್ಷ ಹುಟ್ಟು ಹಾಕಬೇಡಿ. ಸಮಾಜದಲ್ಲಿ ಶಾಂತಿ–ನೆಮ್ಮದಿ ನೆಲೆಸಲು ಅವಕಾಶ ಕೊಡಿ. ಸಿದ್ದರಾಮಯ್ಯನವರನ್ನು ಮುಟ್ಟಿದರೆ ನಿಮ್ಮ ಪಕ್ಷ ಸುಟ್ಟು ಹೋಗಲಿದೆ. ಕರ್ನಾಟಕದ ರಾಜಕೀಯದಲ್ಲಿ ಸಿದ್ದರಾಮಯ್ಯ ಅತ್ಯಂತ ಪ್ರಸ್ತುತ. ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ನಿಮ್ಮನ್ನು ಜನರೇ ಮುಗಿಸಲಿದ್ದಾರೆ ಎಂದು ಡಾ.ಅಶ್ವತ್ಥ್ ನಾರಾಯಣ್ ವಿರುದ್ಧ ಕಿಡಿಕಾರಿದರು.

ಒಕ್ಕಲಿಗ ಸಮುದಾಯದವರು ಟಿಪ್ಪು ಜೊತೆಯಲ್ಲಿ ನಿಂತು ಹೋರಾಡಿದವರು. ಅವರು ಖಂಡಿತ ಟಿಪ್ಪು ಹತ್ಯೆ ಮಾಡಿಲ್ಲ. ಡಾ.ಅಶ್ವತ್ಥ್ ನಾರಾಯಣ್ ತಮ್ಮ ಹೇಳಿಕೆಗೆ ಕ್ಷಮೆ ಯಾಚಿಸಲೇಬೇಕು ಎಂದು ಒತ್ತಾಯಿಸಿದರು. ಚಿಂತಕ ಎಸ್.ಕೆ.ನಂಜಪ್ಪ, ಶಿಕ್ಷಣ ತಜ್ಞ ಸಂಪತ್‌ಕುಮಾರ್, ಮುಖಂಡ ಕೆಂಪಶೆಟ್ಟಿ ಗೋಷ್ಠಿಯಲ್ಲಿದ್ದರು.

ಫೆ.26ರಂದು 'ಅಣ್ಣನ ನೆನಪು' ಸಾಕ್ಷ್ಯ ನಾಟಕ ಪ್ರದರ್ಶನ

ಮೈಸೂರು,ಫೆ.20(ಪಿಎಂ)– ಬೆಂಗಳೂರಿನ ಪ್ರವರ ಥಿಯೇಟರ್ ರಂಗತಂಡದ ವತಿಯಿಂದ ಫೆ.26ರಂದು ಕೆ.ಪಿ.ಪೂರ್ಣಚಂದ್ರ ತೇಜಸ್ವಿಯವರ 'ಅಣ್ಣನ ನೆನಪು' ಸಾಕ್ಷ್ಯ ನಾಟಕ ಪ್ರದರ್ಶನ ಹಮ್ಮಿಕೊಳ್ಳಲಾಗಿದೆ ಎಂದು ತಂಡದ ಸಂಸ್ಥಾಪಕ ಅಧ್ಯಕ್ಷ ಹನು ರಾಮಸಂಜೀವ ತಿಳಿಸಿದರು. ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಮೈಸೂರಿನ ಕಲಾಮಂದಿರ ಆವರಣದ ಕಿರುರಂಗಮಂದಿರದಲ್ಲಿ ಅಂದು ಸಂಜೆ 4ಕ್ಕೆ ಸದರಿ ನಾಟಕದ ಮೊದಲ ಪ್ರದರ್ಶನ ನಡೆಯಲಿದ್ದು, ಬಳಿಕ ಸಂಜೆ 7ಕ್ಕೆ ಎರಡನೇ ಪ್ರದರ್ಶನ ಹಮ್ಮಿಕೊಳ್ಳಲಾಗಿದೆ. ಪ್ರದರ್ಶನಕ್ಕೆ 150 ರೂ.ಗಳ ಟಿಕೆಟ್ ನಿಗದಿ ಮಾಡಲಾಗಿದೆ ಎಂದರು.

ಕೆ.ಪಿ.ಪೂರ್ಣಚಂದ್ರ ತೇಜಸ್ವಿಯವರ 'ಅಣ್ಣನ ನೆನಪು' ಕೃತಿಯು ಅವರ ತಂದೆ ರಾಷ್ಟ್ರಕವಿ ಕುವೆಂಪು ಅವರ ಹಲವು ಮಹತ್ವಪೂರ್ಣ ಸಂಗತಿಗಳನ್ನು ಒಳಗೊಂಡಿದೆ. ಈ ಕೃತಿ ತೇಜಸ್ವಿಯವರ ಆತ್ಮಕಥೆಯೂ ಆಗಿದೆ. ಪ್ರದರ್ಶನಕ್ಕೆ ಸಂಬಂಧಿಸಿದಂತೆ ಹೆಚ್ಚಿನ ಮಾಹಿತಿಗೆ ಮೊ.ಸಂ. 96868 69676 ಅನ್ನು ಸಂಪರ್ಕಿಸಬಹುದು ಎಂದು ತಿಳಿಸಿದರು. ನಾಟಕದ ಸಂಗೀತ ನಿರ್ದೇಶಕ ಅಕ್ಷಯ್ ಭೊಂಸ್ಲೆ, ತಂಡದ ಸಿ.ಎನ್.ಚೇತನ್, ಪ್ರವೀಣ್ ಭಟ್ ಗೋಷ್ಠಿಯಲ್ಲಿದ್ದರು.



ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ಸಚಿವ ಅಶ್ವಥ್ ನಾರಾಯಣ್ ಪ್ರಚೋದನಾಕಾರಿ ಹೇಳಿಕೆ ಖಂಡಿಸಿ ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ಕರ್ನಾಟಕ ರಾಜ್ಯ ಸಿದ್ದರಾಮಯ್ಯ ಅಭಿಮಾನಿಗಳ ಬಳಗದ ವತಿಯಿಂದ ಪ್ರತಿಭಟನೆ ನಡೆಸಲಾಯಿತು. ಈ ವೇಳೆ ಕರ್ನಾಟಕ ಪ್ರದೇಶ ಕುರುಬರ ಸಂಘದ ರಾಜ್ಯಾಧ್ಯಕ್ಷ ಬಿ.ಸುಬ್ರಹ್ಮಣ್ಯ ಮತ್ತು ಸಂಘದ ಪದಾಧಿಕಾರಿಗಳು, ಅಭಿಮಾನಿಗಳು ಭಾಗವಹಿಸಿದ್ದರು.

ಕ್ಷೇತ್ರಕ್ಕೆ ಹೋಗದೆ ಚುನಾವಣೆಯಲ್ಲಿ ಗೆದ್ದು ತೋರಿಸಿ

ಬಿಜೆಪಿ ನಾಯಕರಿಗೆ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಸವಾಲ್

ನಂಜನಗೂಡು, ಫೆ.20– ನಾನು 7 ಬಾರಿ ಗೆದ್ದಿದ್ದೇನೆ. 8ನೇ ಬಾರಿಗೆ ಕ್ಷೇತ್ರಕ್ಕೆ 1 ದಿನ ಅರ್ಜಿ ಹಾಕಲು ಹೋಗುತ್ತೇನೆ. ಮತ್ತೆ ಮತದಾನಕ್ಕೆ ಹೋಗಿ ಗೆದ್ದು ತೋರಿಸುತ್ತೇನೆ. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸಹ ದೊಡ್ಡ ಮಂತ್ರಿಯಾಗಿದ್ದಾರೆ. ಅವರ ಮಂತ್ರಿಗಳಿಗೆ ಆತ್ಮವಿಶ್ವಾಸವಿದ್ದರೆ ನೀವು ಸಹ ಕ್ಷೇತ್ರಕ್ಕೆ ಹೋಗದೆ ಗೆದ್ದು ತೋರಿಸಿ ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಸವಾಲು ಹಾಕಿದರು.



ನಗರದ ವಿದ್ಯಾವರ್ಧಕ ಶಾಲಾ ಮೈದಾನದಲ್ಲಿ ನಡೆದ ಕಾಂಗ್ರೆಸ್ ಪ್ರಜಾಧ್ವನಿ ಯಾತ್ರೆ ಸಮಾವೇಶ ಉದ್ಘಾಟಿಸಿ ಮಾತನಾಡಿದ ಅವರು, ಕಾಂಗ್ರೆಸ್ ಪಕ್ಷ 200 ಯೂನಿಟ್ ವಿದ್ಯುತ್ ಮತ್ತು 2 ಸಾವಿರ ನೀಡುವುದಾಗಿ ಪ್ರಣಾಳಿಕೆ ಬಿಡುಗಡೆಗೊಳಿಸಿದ ಮಾರನೇ ದಿನ 3 ಸಾವಿರ ಕೊಡುವುದಾಗಿ ಬಿಜೆಪಿ ಸರ್ಕಾರ ಜಾಹೀರಾತು ನೀಡಿತ್ತು. ಆದರೆ ಬಸವರಾಜ ಬೊಮ್ಮಾಯಿ ಅವರ ಬಜೆಟ್ ಬುಕ್ ಖಾಲಿಯಾಗಿದೆ. ಬಿಪಿಎಲ್ ಕಾರ್ಡುದಾರರಿಗೆ 500 ರೂ. ಕೊಡುವುದಾಗಿ ಹೇಳುತ್ತಿದ್ದಾರೆ. ಬಿಜೆಪಿ ಸರ್ಕಾರದಲ್ಲಿ ಬೆಲೆ ಏರಿಕೆ, ಭ್ರಷ್ಟಾಚಾರದಿಂದ ಜನರು ತತ್ತರಿಸುತ್ತಿದ್ದಾರೆ. ಕೊರೊನಾದಲ್ಲಿ ಆಕ್ಸಿಜನ್ ಕೊರತೆಯಿಂದ 36 ಜನರು ಸಾವಿಗೀಡಾದರು. ಅದು ನೀವು ಮಾಡಿದ ಕೊಲೆ. ಈ ಘಟನೆ ಬಗ್ಗೆ ಯಾವ ಅಧಿಕಾರಿ ಮೇಲೂ ಏನು ಕ್ರಮ ಕೈಗೊಳ್ಳಲಿಲ್ಲ. ಅಲ್ಲದೇ ಅವರಿಗೆ ಪರಿಹಾರವೂ ನೀಡಲಿಲ್ಲ. ಆದರೆ ಕಾಂಗ್ರೆಸ್ ಪಕ್ಷ ಸಾಂತ್ವನ ಹೇಳಿ ಧೈರ್ಯ ತುಂಬಿ ಎಲ್ಲರಿಗೂ 1 ಲಕ್ಷ ಪರಿಹಾರ ನೀಡಿತು. ಕೊಟ್ಟ ಕುದುರೆ ಏರಲು ಆಗದೆ ಮತ್ತೊಂದು ಕುದುರೆ ಬಯಸುವವನು ಶೂರನೂ ಅಲ್ಲ, ವೀರನೂ ಅಲ್ಲ. ಅಧಿಕಾರದಲ್ಲಿದ್ದಾಗ ಏನೂ ಮಾಡದೇ ಅಧಿಕಾರ ಇಲ್ಲದಿದ್ದಾಗ ಏನು ಮಾಡಲು ಸಾಧ್ಯ? ಎಂದು ಕುಹಕವಾಡಿದರು.

ಬಿಜೆಪಿಯದು ಶೇ.40 ಪರ್ಸೆಂಟ್ ಸರ್ಕಾರ, ಭ್ರಷ್ಟ ಸರ್ಕಾರ ಎಂದು ಬಿರುದು ಪಡೆದಿದೆ. ಕಾಂಗ್ರೆಸ್ ಈ ಬಗ್ಗೆ ಹೋರಾಟ ಮಾಡಲು ಪ್ರಾರಂಭಿಸಿತು. ರಾತ್ರಿ ವೇಳೆ ವಿಧಾನಸೌಧದ ಗೋಡೆಗಳೂ ಸಹ ಕಾಸು ಕಾಸು ಎನ್ನುತ್ತಿದ್ದವು. ಬಿಜೆಪಿ ಸರ್ಕಾರದ ಒಬ್ಬ ಮಂತ್ರಿ ಲಂಚಕ್ಕೆ ಹೋದ, ಒಬ್ಬ ಮಂಚಕ್ಕೆ ಹೋದ ಎಂದು ವಾಗ್ದಾಳಿ ನಡೆಸಿದರು.

ಬಿಜೆಪಿ ಸರ್ಕಾರ ಆದಾಯ ದ್ವಿಗುಣ ಮಾಡುವುದಾಗಿ ಹೇಳಿತ್ತು. 1 ಲಕ್ಷ ಸಾಲ ಮನ್ನಾ ಮಾಡುವುದಾಗಿ, ಸ್ವಿಸ್ ಬ್ಯಾಂಕ್‌ನಿಂದ ಕಪ್ಪುಹಣ ತಂದು 15 ಲಕ್ಷ ನೀಡಿ ಅಚ್ಚೆ ದಿನ ತರುವುದಾಗಿ, 2 ಲಕ್ಷ ಉದ್ಯೋಗ ಸೃಷ್ಟಿಸುವುದಾಗಿ ಹೇಳಿದ್ದರು. ಆದರೆ ಕೊರೊನಾದಿಂದ ಜನ ಉದ್ಯೋಗ ಕಳೆದುಕೊಂಡಿದ್ದರೆ ಪಕೋಡ ಮಾರಿ ಬದುಕಿ ಎನ್ನುತ್ತಿದ್ದು, ಇನ್ನೆಲ್ಲಿ ಅಚ್ಚೆ ದಿನ ಬರುತ್ತದೆ ಎಂದ ಅವರು ಮಿತಿ ಮೀರಿದ ಭ್ರಷ್ಟಾಚಾರ, ಬೆಲೆ ಏರಿಕೆಯಿಂದಾಗಿ ಜನರ ಆದಾಯ ಪಾತಾಳಕ್ಕಿಳಿದಿದೆ. ಕೇಂದ್ರ ವಿತ್ತ ಸಚಿವೆ ನಿರ್ಮಲ ಸೀತಾರಾಮನ್ ಕೊರೊನಾದಿಂದ ಸಾವನ್ನಪ್ಪಿದವರ ಕುಟುಂಬದವರಿಗೆ 20 ಲಕ್ಷ ನೀಡುವುದಾಗಿ ಹೇಳಿದ್ದರು. ಯಾರಿಗೂ ಪರಿಹಾರ ಬರಲಿಲ್ಲ. ಈ ಬಗ್ಗೆ ಕ್ಷೇತ್ರದ ಜನತೆ ನಿಮ್ಮ ಶಾಸಕರು ಮತ್ತು ಮುಖ್ಯಮಂತ್ರಿಗಳನ್ನು ಜೀವ ಹೋಗುವಾಗ ನೀವು ಏನು ಮಾಡಿದ್ದೀರಿ ಎಂದು ಪ್ರಶ್ನೆ ಮಾಡಿ ಎಂದರಲ್ಲದೆ ಬಿ.ಎಸ್.ಯಡಿಯೂರಪ್ಪ ಸಹ ಕಣ್ಣೀರು ಹಾಕಿ ಅಧಿಕಾರದಿಂದ ಕೆಳಗಿಳಿಯುವಂತಾಯಿತು ಎಂದರು.

ಗೊಂದಲ ಸೃಷ್ಟಿಸಲು ಬಂದಿದ್ದೀರಾ?: ಸಭೆಯಲ್ಲಿ ಹೆಚ್.ಸಿ. ಮಹದೇವಪ್ಪ ಬೆಂಬಲಿಗರು ಮಹದೇವಪ್ಪನವರಿಗೆ ಮಾತನಾಡಲು ಅವಕಾಶ ನೀಡುವಂತೆ ಕೂಗಾಟ ನಡೆಸಿದಾಗ ಡಿ.ಕೆ.ಶಿವಕುಮಾರ್ ಅವರು ಹೇಯ್ ಸ್ವಲ್ಪ ಇರ್ತಿರಾ ನೀವು ಇಲ್ಲಿ ಸೃಷ್ಟಿಸಲು ಬಂದಿರುವಿರಾ ನಾನು 3 ಗಂಟೆ ಕಾಲ ಮಹದೇವಪ್ಪ ಕ್ಷೇತ್ರ ನರಸೀಪುರದಲ್ಲಿ ಕಾಲ ಕಳೆದು ಬಂದಿದ್ದೇನೆ. ಯಾರು ಮಾತನಾಡಬೇಕೆಂಬುದನ್ನು ಪಕ್ಷ ತೀರ್ಮಾನಿಸಲಿದೆ. ಧ್ರುವನಾರಾಯಣ್ ಮಾತನಾಡಿದ್ದಾರೆ. ಈಗ ನಾನು ಮಾತನಾಡುತ್ತೇನೆ ಎಂದು ಗದರಿದ ಪ್ರಸಂಗ ಜರುಗಿತು. ಎಚ್.ಸಿ.ಮಹದೇವಪ್ಪ ಮಾತನಾಡಲು ಅವಕಾಶ ನೀಡಲೇಬೇಕು ಎಂದು ಕಾರ್ಯಕರ್ತರು ಮತ್ತೆ ಕೂಗಿದಾಗ ಸಮಾರಂಭದ ಕೊನೆಯಲ್ಲಿ ಮಾತನಾಡಲು ಅವಕಾಶ ನೀಡಲಾಯಿತು. ಭಾಷಣದ ಮಧ್ಯೆ ಸಹ ಮಹದೇವಪ್ಪ ಕ್ಷೇತ್ರ ನರಸೀಪುರಕ್ಕೆ ಹೋದಾಗ 16 ಸಾವಿರ ಜನರು ಸೇರಿದ್ದರು ಎನ್ನುವ ಮೂಲಕ ಹೆಚ್.ಸಿ.ಮಹದೇವಪ್ಪಗೆ ನರಸೀಪುರ ಟಿಕೆಟ್ ಎಂದು ಸುಳಿವು ನೀಡಿದರು. ಕಾರ್ಯಕರ್ತರು ಅಭ್ಯರ್ಥಿ ಘೋಷಿಸುವಂತೆ ಕೂಗಿದಾಗ ನಾನೇ ಅಭ್ಯರ್ಥಿ, ಸಿದ್ದರಾಮಯ್ಯ ಅವರೇ ಅಭ್ಯರ್ಥಿ ಎಂದರು.

ಡಿಕೆಶಿ ನೆರವು ನೆನೆದ ಧ್ರುವ: ಕೆಪಿಸಿಸಿ ಕಾರ್ಯಾಧ್ಯಕ್ಷ ಆರ್.ಧ್ರುವನಾರಾಯಣ್ ಮಾತನಾಡಿ, ಕಾಂಗ್ರೆಸ್ ಜನಧ್ವನಿ ಯಾತ್ರೆ ಜಿಲ್ಲಾಮಟ್ಟದಲ್ಲಿ ಯಶಸ್ವಿಗೊಂಡಿದೆ. ರಾಜ್ಯದೆಲ್ಲೆಡೆ ಬಿಜೆಪಿ ಪಕ್ಷದ ಆಡಳಿತ ವೈಫಲ್ಯ, ಬೆಲೆ ಏರಿಕೆಯಿಂದ ಜನರು ಬೇಸತ್ತಿದ್ದು, ಕಾಂಗ್ರೆಸ್ ಪಕ್ಷದ ಕಡೆ ಮುಖ ಮಾಡುತ್ತಿದ್ದಾರೆ. ಆದ್ದರಿಂದ ರಾಜ್ಯದಲ್ಲೆಡೆ ಕಾಂಗ್ರೆಸ್ ಪರ ಅಲೆಯಿದೆ. ಸಿದ್ದರಾಮಯ್ಯ ಸರ್ಕಾರದ ಅವಧಿ ಸುವರ್ಣ ಯುಗವಾಗಿದ್ದು ರಾಜ್ಯದಲ್ಲಿ ಸಮಗ್ರ ಅಭಿವೃದ್ಧಿಯಾಯಿತು. ಜೊತೆಗೆ ಕ್ಷೇತ್ರಕ್ಕೆ ಹೆಚ್ಚು ಅನುದಾನ ನೀಡಿ ಅಭಿವೃದ್ಧಿಪಡಿಸಿದ್ದಾರೆ ಎಂದರಲ್ಲದೆ ಡಿ.ಕೆ.ಶಿವಕುಮಾರ್ ಇಂಧನ ಸಚಿವರಾಗಿದ್ದಾಗ ವಿದ್ಯುತ್ ಕ್ಷಾಮ ಬಗೆಹರಿಯಿತು. ಕೋವಿಡ್ ಸಂದರ್ಭ ಆರೋಗ್ಯ ಹಸ್ತ, ಸಹಾಯ ಹಸ್ತ ಕಾರ್ಯಕ್ರಮದ ಮೂಲಕ ಎಲ್ಲರಿಗೂ ಹುರುಪು ತುಂಬಿದವರು. ನಾನು ಮೊದಲಿಗೆ ಸಂತೇಮರಳಿ ಕ್ಷೇತ್ರದಲ್ಲಿ 1 ಮತದಿಂದ ಗೆದ್ದಾಗ ಅವರೇ ಟಿಕೆಟ್ ನೀಡಿ ಪ್ರಚಾರ ನಡೆಸಿ ನನ್ನ ಗೆಲುವಿಗೆ ಕಾರಣೀಭೂತರಾದವರು, ಕೆಪಿಸಿಸಿ ಕಾರ್ಯಾಧ್ಯಕ್ಷನಾಗಲೂ ಸಹ ಸಹಾಯ ಮಾಡಿದ್ದಾರೆ ಎಂದರು. ಚಿತ್ರ ನಟ ಸಾಧುಕೋಕಿಲ ಮಾತನಾಡಿ, ಕೊರೊನಾ ಕಾಲದಲ್ಲಿ ಸರ್ಕಾರದ ಮುನ್ನೆಚ್ಚರಿಕೆ ಇಲ್ಲದೆ ಆಕ್ಸಿಜನ್ ಇಲ್ಲದೆ ಬೆಡ್ ಇಲ್ಲದೆ ಜನರು ಸತ್ತರು. ಅಂತಹ ಕಷ್ಟ ಮರುಕಳಿಸದೆ ಇರಲು ಕಾಂಗ್ರೆಸ್ ಪಕ್ಷ ಬೆಂಬಲಿಸಿ ಎಂದರು.

ಸಮಾರಂಭದಲ್ಲಿ ಮಾಜಿ ಸಚಿವರಾದ ಹೆಚ್.ಸಿ. ಮಹದೇವಪ್ಪ, ಹೆಚ್.ಎಂ.ರೇವಣ್ಣ, ಶಾಸಕ ಡಾ. ಯತೀಂದ್ರ, ಮಾಜಿ ಶಾಸಕ ಕಳಲೆ ಕೇಶವಮೂರ್ತಿ, ರಾಜ್ಯಸಭಾ ಸದಸ್ಯ ಜಿ.ಸಿ.ಚಂದ್ರಶೇಖರ್, ವಿಧಾನ ಪರಿಷತ್ ಸದಸ್ಯ ಡಾ.ತಿಮ್ಮಯ್ಯ, ಮಾಜಿ ಶಾಸಕ ವಾಸು, ವಿಧಾನಸಭಾ ಉಸ್ತುವಾರಿಗಳಾದ ಶ್ರೀಕಂಠು, ಹಿರೇಹಳ್ಳಿ ಸೋಮೇಶ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾದ ಸಿ.ಎಂ. ಶಂಕರ್, ಕುರಹಟ್ಟಿ ಮಹೇಶ್, ಶ್ರೀಕಂಠನಾಯಕ, ಎಸ್.ಸಿ. ಬಸವರಾಜು, ಮುಖಂಡ ಹ್ಯಾರೀಸ್ ನಳಪಾಡ್, ಜಿಪಂ ಮಾಜಿ ಸದಸ್ಯರಾದ ಲತಾ ಸಿದ್ದಶೆಟ್ಟಿ, ಕೆ. ಮಾರುತಿ, ಮುಖಂಡರಾದ ನಾಗರಾಜಯ್ಯ, ಕುಳ್ಳಯ್ಯ, ಶಂಕರಪ್ಪ, ನಾಗೇಶ್‌ರಾಜ್, ಅಕ್ಬರ್‌ಅಲಿಂ, ಎಂ. ಮಾದಪ್ಪ, ನಗರಸಭಾ ಸದಸ್ಯರಾದ ಗಂಗಾಧರ್, ಮಹೇಶ್, ಗಾಯತ್ರಿ, ಪ್ರದೀಪ್ ಸೇರಿದಂತೆ ಕಾಂಗ್ರೆಸ್ ಕಾರ್ಯಕರ್ತರು ಇದ್ದರು.

ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ

6 ಮುಂಬರುವ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷ 140 ಸ್ಥಾನ ಗೆದ್ದು ತನ್ನ ಸ್ವಂತ ಕಾಲ ಮೇಲೆ ಸರ್ಕಾರ ರಚಿಸುವುದು ಖಚಿತ. ನಾನು ಮತ್ತು ಸಿದ್ದರಾಮಯ್ಯ ಪಕ್ಷದ ಪ್ರಣಾಳಿಕೆಗೆ ಸಹಿ ಹಾಕಿದ ಗ್ಯಾರೆಂಟಿ ಚೆಕ್‌ಗೆ ಸಹಿ ಮಾಡಿದ್ದು, ಅದು ನಿಮ್ಮ ಮನೆಗೆ ಸೇರಲಿದೆ. ನಾವು ಕೊಟ್ಟ ಭರವಸೆ ಈಡೇರಿಸದಿದ್ದಲ್ಲಿ ಮತ್ತೆ ಮತ ಕೇಳುವುದಿಲ್ಲ. ನಿಮ್ಮ ಸೇವೆ ಮಾಡಲು ಒಂದು ಅವಕಾಶ ನೀಡಿ. ಧ್ರುವನಾರಾಯಣ್ ಸಂಸದರಾಗಿ ಅಭಿವೃದ್ಧಿಯಲ್ಲಿ 2ನೇ ಸ್ಥಾನ ಪಡೆದವರು. ಅವರು ಪಕ್ಷಕ್ಕೆ, ರಾಜ್ಯಕ್ಕೆ ಆಸ್ತಿ. ಇಂತಹ ನಾಯಕರನ್ನು ಪಡೆದಿರುವ ನಾವೇ ಧನ್ಯರು.

–ಡಿ.ಕೆ.ಶಿವಕುಮಾರ್, ಕೆಪಿಸಿಸಿ ಅಧ್ಯಕ್ಷ.

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	ಆಂಟ್ ಮ್ಯಾನ್ ಅಂಡ್ ದಿ ವಾಸ್ಪ್ (3ಡಿ)(ಇಂ): ಬೆ.11ಕ್ಕೆ, ಮ.1.45ಕ್ಕೆ, ರಾ.7.15ಕ್ಕೆ, ರಾ.9.50ಕ್ಕೆ, ಪಠಾಣ್ (ಹಿಂ): ಸಂ.4.25ಕ್ಕೆ.
ಸ್ಕ್ರೀನ್ 2	ವಾತಿ (ತ): ಬೆ.10.35ಕ್ಕೆ, ಕ್ರಾಂತಿ (ಕ): ಮ.1.20ಕ್ಕೆ, ಎಸ್‌ಎಲ್‌ವಿ (ಕ): ಸಂ.4.30ಕ್ಕೆ, ಪಠಾಣ್ (ಹಿಂ): ರಾ.7ಕ್ಕೆ, ಒಂದೊಳ್ಳೆ ಲವ್ ಸ್ಟೋರಿ (ಕ): ರಾ.9.50ಕ್ಕೆ.
ಸ್ಕ್ರೀನ್ 3	ಬರೀ 10% ಬಡ್ಡಿ (ಕ): ಬೆ.10.40ಕ್ಕೆ, ಖೆಯೋಸ್ (ತ): ಮ.1.30ಕ್ಕೆ, ದೊಡ್ಡಹಟ್ಟಿ ಬೋರೇಗೌಡ (ಕ): ಸಂ.4.35ಕ್ಕೆ, ಲವ್‌ಬರ್ಡ್ಸ್ (ಕ): ರಾ.7.10ಕ್ಕೆ, ಎಂಕಿಲುಮ್ ಚಂದ್ರಿಕೆ (ಮ): ರಾ.9.50ಕ್ಕೆ.
ಸ್ಕ್ರೀನ್ 4	ಶೆಹಜಾದಾ (ಹಿಂ): ಬೆ.10.40ಕ್ಕೆ, ರಾ.7.05ಕ್ಕೆ, ರಾ.10ಕ್ಕೆ, ವಾತಿ (ತ): ಮ.1.30ಕ್ಕೆ, ಸಂ.4.20ಕ್ಕೆ.

ಐನಾಕ್ಸ್ ಮೂವೀಸ್
INOX LIVE THE MOVIE
ದೂ : 2533444 / 2433456

ಸ್ಕ್ರೀನ್ 1	ಶೆಹಜಾದಾ (ಹಿಂ): ಬೆ.10.10ಕ್ಕೆ, ಮ.1.15ಕ್ಕೆ, ಸಂ.4.20ಕ್ಕೆ, ರಾ.7.25ಕ್ಕೆ, ರಾ.10.30ಕ್ಕೆ.
ಸ್ಕ್ರೀನ್ 2	ಆಂಟ್ ಮ್ಯಾನ್ ಅಂಡ್ ದಿ ವಾಸ್ಪ್ (3ಡಿ)(ಇಂ): ಬೆ.11ಕ್ಕೆ, ಮ.1.45ಕ್ಕೆ, ಸಂ.4.30ಕ್ಕೆ, ರಾ.7.15ಕ್ಕೆ, ರಾ.10ಕ್ಕೆ.
ಸ್ಕ್ರೀನ್ 3	ರೋಮಾಂಚಂ(ಕ): ಬೆ.10.50ಕ್ಕೆ, ಲವ್ ಬರ್ಡ್ಸ್ (ಕ): ಮ.1.35ಕ್ಕೆ, ರಾ.7.15ಕ್ಕೆ, ವಾತಿ (ತ): ಸಂ.4.20ಕ್ಕೆ, ಖೆಯೋಸ್ (ತ): ರಾ.10ಕ್ಕೆ.
ಸ್ಕ್ರೀನ್ 4	ಬರೀ 10% ಬಡ್ಡಿ (ಕ): ಬೆ.11.20ಕ್ಕೆ, ದೊಡ್ಡಹಟ್ಟಿ ಬೋರೇಗೌಡ (ಕ): ಮ.2.10ಕ್ಕೆ, ಸಕೂಚಿ (ಕ): ಸಂ.4.50ಕ್ಕೆ, ರೋಮಾಂಚಂ (ಮ): ರಾ.7.35ಕ್ಕೆ, ಪಠಾಣ್ (ಹಿಂ): ರಾ.10.20ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	ಕ್ರಾಂತಿ (ಕ): ಬೆ.7.30ಕ್ಕೆ, ಮ.1.45ಕ್ಕೆ, ರಾ.9ಕ್ಕೆ.
ಸ್ಕ್ರೀನ್ 2	ಕ್ರಾಂತಿ (ಕ): ಬೆ.6.45ಕ್ಕೆ, ಬೆ.9.55ಕ್ಕೆ, ಮ.1ಕ್ಕೆ, ಸಂ.4.05ಕ್ಕೆ, ರಾ.7.10ಕ್ಕೆ, ರಾ.10.15ಕ್ಕೆ.
ಸ್ಕ್ರೀನ್ 3	ಕ್ರಾಂತಿ (ಕ): ಬೆ.7ಕ್ಕೆ, ಬೆ.10.05ಕ್ಕೆ, ಮ.1.10ಕ್ಕೆ, ಸಂ.4.15ಕ್ಕೆ, ರಾ.10.15ಕ್ಕೆ, ಪಠಾಣ್ (ಹಿಂ): ರಾ.7.20ಕ್ಕೆ.
ಸ್ಕ್ರೀನ್ 4	ಕ್ರಾಂತಿ (ಕ): ಬೆ.7.10ಕ್ಕೆ, ಸಂ.6.50ಕ್ಕೆ, ಪಠಾಣ್ (ಹಿಂ): ಬೆ.10.15ಕ್ಕೆ, ಮ.1.15ಕ್ಕೆ, ರಾ.9.55ಕ್ಕೆ, ಗಾಂಧಿ ಗೋಡ್ಸೆ ಏಕ್ ಯುದ್ಧ್ (ಹಿಂ): ಸಂ.4ಕ್ಕೆ.

ಪಿವಿಆರ್ ಸಿನಿಮಾಸ್
ಮೊ.ನಂ: 8951357139
ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ಕ್ರಾಂತಿ (ಕ): ಬೆ.11.45ಕ್ಕೆ, ಮ.3.10ಕ್ಕೆ, ಸಂ.6.35ಕ್ಕೆ, ರಾ.10ಕ್ಕೆ, ಪಠಾಣ್ (ಹಿಂ): ಬೆ.9.30ಕ್ಕೆ, ಬೆ.11.05ಕ್ಕೆ, ಮ.12.45ಕ್ಕೆ, ಮ.2.20ಕ್ಕೆ, ಸಂ.4ಕ್ಕೆ, ರಾ.7.15ಕ್ಕೆ, ರಾ.9.30ಕ್ಕೆ, ರಾ.10.30ಕ್ಕೆ, ಧಮನ್ (ಹಿಂ): ಸಂ.4.10ಕ್ಕೆ, ಅವತಾರ್: ದಿ ವೇ ಆಫ್ ವಾಟರ್ (3ಡಿ)(ಇಂ): ಸಂ.5.35ಕ್ಕೆ, ಬಿಟಿಎಸ್ (ಕೊ): ಮ.1.45ಕ್ಕೆ, ಸಂ.6.50ಕ್ಕೆ, ದಿ ವುಮನ್ ಕಿಂಗ್ (ಇಂ): ಬೆ.10ಕ್ಕೆ, ಮ.3.55ಕ್ಕೆ, ರಾ.9.50ಕ್ಕೆ, ನಾಕ್ ಅಟ್ ದಿ ಕ್ಯಾಬಿನ್ (ಇಂ): ಮ.2.10ಕ್ಕೆ, ರಾ.7.50ಕ್ಕೆ, ರನ್ ಬೇಬಿ ರನ್ (ತ): ಮ.1ಕ್ಕೆ, ಸಂ.6.55ಕ್ಕೆ, ಮೈಕೆಲ್ (ತ): ಸಂ.4.35ಕ್ಕೆ, ರೈಟರ್ ಪದ್ಮಭೂಷಣ್ (ತೆ): ರಾ.9.15ಕ್ಕೆ, ಮೈಕೆಲ್ (ತೆ): ರಾ.10.55ಕ್ಕೆ,

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಪದ್ಮ ಚಿತ್ರಮಂದಿರ	(ದೂ: 2521923)
ವಾತಿ (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ವಾದಿ (ತ)	4 ಪ್ರದರ್ಶನಗಳು
ಉಮಾ ಚಿತ್ರಮಂದಿರ	(ದೂ: 2520009)
ಡೇ ಅಂಡ್ ಸಮ್‌ಒನ್ (ತೆ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಶೆಹಜಾದಾ (ಹಿ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಲವ್ ಬರ್ಡ್ಸ್ (ಕ)	2 ಪ್ರದರ್ಶನಗಳು
ಕ್ರಾಂತಿ (ಕ)	2 ಪ್ರದರ್ಶನಗಳು
ಗಾಯಿತ್ರಿ	
ಪಟಾಣ್ (ಹಿ)	4 ಪ್ರದರ್ಶನಗಳು
ರಾಜ್‌ಕಮಲ್	
ಬಕಾಸುರನ್ (ತ)	4 ಪ್ರದರ್ಶನಗಳು
ಸಂಗಂ	
ಬರೀ 10% ಬಡ್ಡಿ–2 ಪ್ರದರ್ಶನ (ಕ) ಒಂದೊಳ್ಳೆ ಲವ್ ಸ್ಟೋರಿ (ಕ)	2 ಪ್ರದರ್ಶನಗಳು
ಲಿಡೋ	
ಕ್ರಾಂತಿ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಪಠಾಣ್ (ಹಿಂ)	4 ಪ್ರದರ್ಶನಗಳು
ಪ್ರಭಾ	
ಖೆಯೋಸ್ (ಕ)	4 ಪ್ರದರ್ಶನಗಳು

ಹುಣಸೂರಿನ ಜನ ನಮ್ಮ ಕುಟುಂಬದ ಮೇಲೆ ಅಪಾರ ವಿಶ್ವಾಸ ಇರಿಸಿಕೊಂಡಿದ್ದಾರೆ

- ಉಕ್ಕಿನ ಮಠದಲ್ಲಿ ಅಮಾವಾಸ್ಯೆ ಪೂಜೆ ನಂತರ ಜಿ.ಟಿ. ದೇವೇಗೌಡರ ಹೇಳಿಕೆ
- ನನಗೆ ಬೆಂಬಲ ನೀಡಿದಂತೆ ಈಗ ನನ್ನ ಪುತ್ರ ಹರೀಶ್‌ಗೌಡರನ್ನು ಬೆಂಬಲಿಸಲು ಮನವಿ



ಹುಣಸೂರು, ಫೆ.20– ಹುಣಸೂರಿನ ಜನತೆ ಈ ಹಿಂದೆ ಜಾತಿ ಮತ್ತು ಪಕ್ಷಭೇದ ಮರೆತು ನನಗೆ ಮತ ಕೊಟ್ಟು ಎರಡು ಬಾರೀ ಗೆಲ್ಲಿಸಿದ್ದರಿಂದ ಕ್ಷೇತ್ರದ ಅಭಿವೃದ್ಧಿ ಮಾಡಲು ಅವಕಾಶವಾಯಿತು. ಈಗ ಆದೇ ಕಾಲ ಬಂದಿದೆ. ನನ್ನ ಪುತ್ರ ಜಿ.ಡಿ.ಹರೀಶ್ ಗೌಡರನ್ನು ಈ ಬಾರಿ ಬೆಂಬಲಿಸಿ ಗೆಲ್ಲಿಸುವಂತೆ ಮಾಜಿ ಸಚಿವ ಹಾಗೂ ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡರು ಮನವಿ ಮಾಡಿದರು.

ತಾಲೂಕಿನ ಬನ್ನಿಕುಪ್ಪೆಯ ಮಾದಹಳ್ಳಿ ಗ್ರಾಮದ ಉಕ್ಕಿನಕಂತೆ ಮಠದಲ್ಲಿಂದು ನಡೆದ ಅಮಾವಾಸ್ಯೆಯ ವಿಶೇಷ ಪೂಜೆಯಲ್ಲಿ ಭಾಗವಹಿಸಿ ಸಾಂಬಸದಾಶಿವ ಸ್ವಾಮೀಜಿಗಳಿಗೆ ಗುರುವಂದನೆ ಸಲ್ಲಿಸಿ, ಸಮಾರಂಭದಲ್ಲಿ ಮಾತನಾಡಿದ ಅವರು, ನಾನು ಈ ಕ್ಷೇತ್ರದಿಂದ ಶಾಸಕ, ಸಚಿವನಾಗಿ ಸಲ್ಲಿಸಿದ ಸೇವೆ ತೃಪ್ತಿ ತಂದಿದೆ. ಜತೆಗೆ ಅಭಿವೃದ್ಧಿಗೆ ಪೂರಕವಾಗಿ ಕೆಲಸ ಮಾಡಿದ್ದೇನೆ. ಎಲ್ಲ ವರ್ಗಗಳನ್ನು ಜೊತೆಗೂಡಿಸಿಕೊಂಡು ಪ್ರೀತಿ–ವಿಶ್ವಾಸದಿಂದ ಕೆಲಸ ಮಾಡಿದ್ದೇನೆ ಎಂದರು.

ಕ್ಷೇತ್ರದ ಜನ ನನ್ನ ಮೇಲೆ ಇಟ್ಟಿದ್ದ ನಂಬಿಕೆಯಂತೆ ಕೃಷಿ, ಶಿಕ್ಷಣ, ಕೃಷಿ, ನೀರಾವರಿ, ಆರೋಗ್ಯ ಹಾಗೂ ಮೂಲ ಸೌಕರ್ಯಗಳಿಗೆ ಒತ್ತು ನೀಡಿ ಅಭಿವೃದ್ಧಿಪಡಿಸಿದ್ದೇನೆ. ಇದರಿಂದಲೇ ಜನ ನಮ್ಮ ಕುಟುಂಬದ ಮೇಲೆ ಇಂದಿಗೂ ಅವಿನಾಭಾವ ಸಂಬಂಧವನ್ನು ಇಟ್ಟುಕೊಂಡು ಬಂದಿದ್ದಾರೆ. ಎಲ್ಲ ವರ್ಗ ಮತ್ತು ಧರ್ಮವನ್ನು ಒಂದೇ ಭಾವನೆಯಿಂದ ಕಂಡಿದ್ದೇನೆ. ಅದರಲ್ಲೂ ಇಂದು ವೀರಶೈವ ಸಮುದಾಯ ನಮ್ಮ ಕುಟುಂಬದ ಮೇಲೆ ಇಟ್ಟಿರುವ ಪ್ರೀತಿಗೆ ನಾವು ಚಿರಋಣಿಯಾಗಿದ್ದೇನೆ. ಉಕ್ಕಿನಕಂತೆ ಶ್ರೀ ಮಠಕ್ಕೆ ಇತಿಹಾಸವಿದೆ. ಜೊತೆಗೆ ಇಲ್ಲಿನ ದೇವಾಲಯದ ಮೇಲೆ ಭಕ್ತರಿಗೆ ಭಯ ಮತ್ತು ಪ್ರೀತಿ ಹಾಗೂ ಅಪಾರವಾದ ನಂಬಿಕೆ ಇದೆ ಎಂದರು.

ಡಿಸಿಸಿ ಬ್ಯಾಂಕ್ ಅಧ್ಯಕ್ಷ ಹಾಗೂ ಅಪೆಕ್ಸ್ ಬ್ಯಾಂಕ್ ಉಪಾಧ್ಯಕ್ಷ ಜಿ.ಡಿ.ಹರೀಶ್ ಗೌಡ ಮಾತನಾಡಿ, ಹುಣಸೂರು ಕ್ಷೇತ್ರದ ಜನ ನಮ್ಮ ಕುಟುಂಬದ ಮೇಲೆ ಇಟ್ಟಿರುವ ಪ್ರೀತಿಯನ್ನು ನಾವೆಂದು ಮರೆತಿಲ್ಲ. ನನ್ನ ತಂದೆಯವರಿಗೆ ನೀಡಿದ ಸಹಕಾರವನ್ನು ನನಗೂ ಕೊಡುವಂತೆ ಮನವಿ ಮಾಡಿದರು. ಮಾದಹಳ್ಳಿ ಉಕ್ಕಿನಕಂತೆ ಮಠದ ಸಾಂಬಸದಾಶಿವಸ್ವಾಮೀಜಿ ಸಾನಿಧ್ಯವಹಿಸಿ ಜಿ.ಟಿ.ದೇವೇಗೌಡ ಮತ್ತು ಹರೀಶ್‌ಗೌಡರಿಗೆ ಆಶೀರ್ವಾದಿಸಿದರು.

ಸಮಾರಂಭದಲ್ಲಿ ಕರ್ನಾಟಕ ರಾಜ್ಯ ಸಹಕಾರ ಸಂಘಗಳ ಪತ್ತಿನ ಮಹಾ ಮಂಡಳಿ ಅಧ್ಯಕ್ಷೆ ಕೆ.ಲಲಿತಾ ದೇವೇಗೌಡ, ಜೆಡಿಎಸ್ ಮುಖಂಡರಾದ ಸಿ.ಟಿ.ರಾಜಣ್ಣ, ದೇವರಾಜ ಒಡೆಯರ್, ಹರವೆ ಶ್ರೀಧರ್, ರಂಜಿತಾ ಚಿಕ್ಕಮಾದು, ಎಂ.ಬಿ.ಸುರೇಂದ್ರ, ಅಸ್ವಾಳು ಕೆಂಪೇಗೌಡ, ಪ್ರಭು, ಸತೀಶ್ ಪಾಪಣ್ಣ, ಕಿರಂಗೂರು ಬಸವರಾಜ್, ಸುಭಾಷ್ ಮುದಗನೂರು, ಕಲ್ಲಹಳ್ಳಿ ಶಿವಣ್ಣ, ಸುರೇಶ್, ಉಮೇಶ್, ರವಿಗೌಡ, ಶ್ರೀನಿವಾಸ್, ಕೂಸಪ್ಪ, ಪುಟ್ಟಲಿಂಗಪ್ಪ ರಾಜು ಸೇರಿದಂತೆ ಹಲವು ಮುಖಂಡರು ಸಹಸ್ರಾರು ಸಂಖ್ಯೆಯಲ್ಲಿ ವೀರಶೈವ ಸಮುದಾಯವರು ಭಾಗವಹಿಸಿದ್ದರು.



ತಿ.ನರಸೀಪುರ ತಾಲೂಕಿನ ಬನ್ನೂರು ಪಟ್ಟಣದ ರತ್ನಮಹಲ್ ಚಿತ್ರಮಂದಿರದ ಮುಂಭಾಗದ ಮೈದಾನದಲ್ಲಿ ಸೋಮವಾರ ನಡೆದ ಕಾಂಗ್ರೆಸ್ ಪ್ರಜಾಧ್ವನಿ ಯಾತ್ರೆ ಸಮಾವೇಶದಲ್ಲಿ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಅವರಿಗೆ ಮೈಮುಲ್ ನಿರ್ದೇಶಕ ಆರ್.ಚೆಲುವರಾಜು ವೆಂಕಟೇಶ್ವರನ ವಿಗ್ರಹ ನೀಡಿ ಸನ್ಮಾನಿಸಿದರು. ಈ ವೇಳೆ ಶಾಸಕ ಡಾ.ಯತೀಂದ್ರ, ಮಾಜಿ ಸಚಿವ ಹೆಚ್.ಸಿ.ಮಹದೇವಪ್ಪ, ತಿ.ನರಸೀಪುರ ಕ್ಷೇತ್ರದ ಕಾಂಗ್ರೆಸ್ ಟಿಕೆಟ್ ಆಕಾಂಕ್ಷಿ ಸುನೀಲ್ ಬೋಸ್ ಇನ್ನಿತರರಿದ್ದರು.

ವಕೀಲೆ ಪ್ರೇಮಕುಮಾರಿಗೆ ಬಿಜೆಪಿ ಟಿಕೆಟ್ ನೀಡಲು ಮನವಿ

ತಿ.ನರಸೀಪುರ, ಫೆ.20– ವಕೀಲೆ ಪ್ರೇಮಕುಮಾರಿ ಅವರಿಗೆ ತಿ.ನರಸೀಪುರ ಕ್ಷೇತ್ರದಿಂದ ಸ್ಪರ್ಧಿಸಲು ಬಿಜೆಪಿ ವರಿಷ್ಠರು ಅವಕಾಶ ನೀಡಬೇಕೆಂದು ದಲಿತ ಸಂಘರ್ಷ ಸಮಿತಿ ಸಂಚಾಲಕ ಕೌಲಂದೆ ಪಿ.ಶಿವಕುಮಾರ್ ಮನವಿ ಮಾಡಿದರು.



ಪಟ್ಟಣದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ತಾಲೂಕಿನ ಹೆಮ್ಮಿಗೆ ಗ್ರಾಮದ ಸೊಸೆಯಾಗಿರುವ ಪ್ರೇಮಕುಮಾರಿಯವರು ಬಿಜೆಪಿ ಸಿದ್ಧಾಂತಗಳನ್ನು ಮೆಚ್ಚಿ ಕಾಂಗ್ರೆಸ್ ತೊರೆದು ಬಿಜೆಪಿ ಸೇರ್ಪಡೆಯಾಗಿದ್ದಾರೆ. 1993ರಿಂದಲೂ ತಾಪಂ, ಜಿಪಂ, ಜಿಲ್ಲಾ ಕಾಂಗ್ರೆಸ್ ಕಾರ್ಯದರ್ಶಿ ಹಾಗೂ ಮೈಸೂರು ಗ್ರಾಮಾಂತರ ಕಾರ್ಯದರ್ಶಿ ಹುದ್ದೆಯನ್ನು ಯಶಸ್ವಿಯಾಗಿ ನಿರ್ವಹಿಸಿ ಜನಪರ ಕಾರ್ಯಕ್ರಮಗಳ ಮೂಲಕ ತಾಲೂಕಿನ ಜನರ ಮೆಚ್ಚುಗೆಗೆ ಪಾತ್ರರಾಗಿದ್ದಾರೆ. ಸ್ವತಃ ವಕೀಲರಾಗಿರುವ ಇವರು ಮಹಿಳೆಯರಿಗೆ ಉಚಿತ ಕಾನೂನು ಸೇವೆ ನೀಡುವ ಮೂಲಕ ಮಹಿಳಾ ಸಬಲೀಕರಣಕ್ಕೆ ಒತ್ತು ನೀಡುತ್ತಾ ಬಂದಿದ್ದಾರೆ. ಕ್ಷೇತ್ರದಲ್ಲಿ ಹಲವು ಯುವಕರು, ಮಹಿಳೆಯರಿಗೆ ವಿವಿಧ ಹುದ್ದೆಗಳನ್ನು ಕೊಡಿಸುವ ಮೂಲಕ ಸಹಾಯ ಮಾಡಿದ್ದಾರೆ. ರಾಜಕೀಯ ಹಿನ್ನೆಲೆ ಹೊಂದಿರುವ ಪ್ರೇಮಕುಮಾರಿ ಮುಂಬರುವ ಚುನಾವಣೆಯ ಬಿಜೆಪಿ ಪ್ರಬಲ ಟಿಕೆಟ್ ಆಕಾಂಕ್ಷಿಯಾಗಿದ್ದು, ಕ್ಷೇತ್ರದ ಜನರ ಒತ್ತಾಯವೂ ಅವರಿಗೆ ಟಿಕೆಟ್ ನೀಡಬೇಕೆನ್ನುವುದೇ ಆಗಿದೆ ಎಂದರು.

ಪ್ರಸಾದ್ ಅನುಯಾಯಿ!: ಪ್ರೇಮಕುಮಾರಿ ಸಂಸದ ಶ್ರೀನಿವಾಸಪ್ರಸಾದ್ ಕಟ್ಟಾ ಬೆಂಬಲಿಗರು. ಕಾಂಗ್ರೆಸ್ ಬಿಟ್ಟು ಬಂದ ನಂತರ ಸತತವಾಗಿ ಪ್ರಸಾದ್‌ರೊಂದಿಗೆ ಗುರುತಿಸಿಕೊಂಡು ಎಲ್ಲಾ ಕಾರ್ಯಕ್ರಮಗಳಲ್ಲಿ ಭಾಗವಹಿಸುತ್ತಾ ಪಕ್ಷಕ್ಕೆ ತಮ್ಮದೇ ಆದ ಕೊಡುಗೆ ನೀಡಿದ್ದಾರೆ. ಪ್ರಸಾದ್ ಬೆಂಬಲದಿಂದ ಅವರು ಪಕ್ಷದ ಟಿಕೆಟ್‌ಗೆ ಮನವಿ ಸಲ್ಲಿಸಿದ್ದಾರೆ. ಪ್ರಧಾನಿ ಮೋದಿ ಜನಪರ ಕಾರ್ಯ ಮೆಚ್ಚಿ ಬಿಜೆಪಿ ಸೇರ್ಪಡೆಗೊಂಡಿರುವ ಅವರ ಜನಪರ ಕಾಳಜಿ ಮೆಚ್ಚಿ, ಸ್ಥಳೀಯರಾಗಿರುವ ಅವರಿಗೆ ಪಕ್ಷ ಟಿಕೆಟ್ ನೀಡಿದಲ್ಲಿ ಅವರ ಗೆಲುವಿಗೆ ಅಭಿಮಾನಿಗಳು, ಕಾರ್ಯಕರ್ತರು ಶ್ರಮಿಸಿ ಮತ್ತೊಮ್ಮೆ ಕ್ಷೇತ್ರದಲ್ಲಿ ಬಿಜೆಪಿ ಬಾವುಟ ಹಾರಿಸಲು ಶಕ್ತಿ ಮೀರಿ ಕೆಲಸ ಮಾಡುತ್ತೇವೆ ಎಂದರು. ಪತ್ರಿಕಾಗೋಷ್ಠಿಯಲ್ಲಿ ಉಮೇಶ್, ನವೀನ್, ಸುರೇಶ್, ಚರಣ್ ಸೇರಿದಂತೆ ಮತ್ತಿತರರಿದ್ದರು.

ಸಚಿವರು ಸಿದ್ದರಾಮಯ್ಯ ವಿರುದ್ಧದ ಹೇಳಿಕೆ ಹಿಂಪಡೆಯಲಿ

ಇಲ್ಲದಿದ್ದರೇ ಉಗ್ರ ಹೋರಾಟ: ಹೆಚ್.ಡಿ.ಗಣೇಶ್ ಎಚ್ಚರಿಕೆ



ಪಿರಿಯಾಪಟ್ಟಣ, ಫೆ.20– ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ಅವಹೇಳನಕಾರಿ ಹೇಳಿಕೆ ನೀಡಿರುವ ಸಚಿವ ಡಾ.ಅಶ್ವತ್ ನಾರಾಯಣ್ ಕೂಡಲೇ ಕ್ಷಮೆಯಾಚಿಸಿ, ತಮ್ಮ ಹೇಳಿಕೆ ಹಿಂಪಡೆಯಬೇಕು. ಇಲ್ಲದಿದ್ದರೇ ಉಗ್ರ ಹೋರಾಟ ಮಾಡುವುದಾಗಿ ಕುರುಬ ಸಮಾಜದ ತಾಲೂಕು ಅಧ್ಯಕ್ಷ ಹೆಚ್.ಡಿ.ಗಣೇಶ್ ಎಚ್ಚರಿಕೆ ನೀಡಿದರು.

ಪಟ್ಟಣದ ಕನಕ ಭವನದಲ್ಲಿ ನಡೆದ ಕುರುಬ ಸಮಾಜ ಮುಖಂಡರ ಸಭೆಯಲ್ಲಿ ಮಾತನಾಡಿದ ಅವರು, ಮಾಜಿ ಸಿಎಂ ಸಿದ್ದರಾಮಯ್ಯ ಎಲ್ಲಾ ವರ್ಗದ ಜನರ ನಾಯಕ. ಅವರ ಜನಪ್ರಿಯತೆ ಸಹಿಸದ ಸಚಿವ ಅಶ್ವತ್ ನಾರಾಯಣ್ ಜೀವ ಬೆದರಿಕೆಯ ಹೇಳಿಕೆ ನೀಡಿರುವುದನ್ನು ಕುರುಬ ಸಮಾಜ ಖಂಡಿಸಲಿದೆ. ಸಿದ್ದರಾಮಯ್ಯ ಬಗ್ಗೆ ಮಾತನಾಡಲು ಅಶ್ವಥ್ ನಾರಾಯಣ್‌ಗೆ ಯಾವುದೇ ನೈತಿಕ ಹಕ್ಕಿಲ್ಲ. ಯಾವ ಉದ್ದೇಶವಿಟ್ಟುಕೊಂಡು ಮಾತನಾಡಿದ್ದಾರೆ ಎಂಬುದನ್ನು ರಾಜ್ಯದ ಜನತೆ ಮುಂದೆ ಬಹಿರಂಗಪಡಿಸಿ ಕ್ಷಮೆಯಾಚಿಸಬೇಕು. ಇಲ್ಲವಾದಲ್ಲಿ ಕುರುಬ ಸಮಾಜ ಹಾಗೂ ಎಲ್ಲಾ ವರ್ಗದವರ ಸಹಕಾರದೊಂದಿಗೆ ಉಗ್ರ ಹೋರಾಟ ಹಮ್ಮಿಕೊಳ್ಳುವುದಾಗಿ ತಿಳಿಸಿದರು.

ರಾಮನ ಹೆಸರೇಳಿ ಅಧಿಕಾರಕ್ಕೆ ಬಂದ ಬಿಜೆಪಿ ಪಕ್ಷದವರು ರಾವಣನ ರೀತಿ ಆಡಳಿತ ನಡೆಸುತ್ತಿದ್ದು, ದೇಶಕ್ಕೆ ಅಗೌರವದಿಂದ ವರ್ತಿಸುತ್ತಿದ್ದಾರೆ. ಮುಖ್ಯಮಂತ್ರಿಗಳು ಕೂಡಲೇ ಸಚಿವ ಅಶ್ವಥ್ ನಾರಾಯಣ್‌ರನ್ನು ಸಂಪುಟದಿಂದ ವಜಾ ಮಾಡುವಂತೆ ಒತ್ತಾಯಿಸಿದರು.

ಈ ವೇಳೆ ತಾಪಂ ಮಾಜಿ ಸದಸ್ಯ ಆರ್. ಎಸ್.ಮಹದೇವ್, ಮಲ್ಲಿಕಾರ್ಜುನ್, ಕುರುಬ ಸಮಾಜ ಯುವ ಘಟಕ ಅಧ್ಯಕ್ಷ ಲೋಹಿತ್, ಮುಖಂಡರಾದ ಚಿಕ್ಕೇಗೌಡ, ರೇವಣ್ಣ, ಎಸ್.ಬಿ.ಮಹದೇವ್, ಟಿ.ಶೇಷಗಿರಿ, ಸ್ವಾಮಿ, ಜವರೇಗೌಡ, ಶಿವಣ್ಣ, ಚಂದ್ರು, ನಾಗರಾಜ್, ಶಿವಕುಮಾರ್, ವೆಂಕಟೇಶ್, ಮಂಜುನಾಥ್ ಹಾಗೂ ಕುರುಬ ಸಮಾಜದ ತಾಲೂಕು ಸಂಘದ ಪದಾಧಿಕಾರಿಗಳು ಇದ್ದರು.

ಕಂಪಲಾಪುರ ಗ್ರಾಪಂಗೆ ಶೀಲಾ ಅಧ್ಯಕ್ಷೆ



ಕಂಪಲಾಪುರ, ಫೆ.20– ಇಲ್ಲಿನ ಗ್ರಾಪಂ ನೂತನ ಅಧ್ಯಕ್ಷೆಯಾಗಿ ಕೆ.ಆರ್.ಶೀಲಾ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಈ ಹಿಂದಿನ ಅಧ್ಯಕ್ಷೆ ಮಮತ ಅವರ ರಾಜೀನಾಮೆಯಿಂದ ತೆರವಾದ ಸ್ಥಾನಕ್ಕೆ ಇಂದು ಚುನಾವಣೆ ನಿಗದಿಯಾಗಿತ್ತು. ಅಧ್ಯಕ್ಷ ಸ್ಥಾನಕ್ಕೆ ಶೀಲಾ ಅವರನ್ನು ಹೊರತುಪಡಿಸಿ ಬೇರೆ ಯಾರೂ ನಾಮಪತ್ರ ಸಲ್ಲಿಸದ ಕಾರಣ ಅವಿರೋಧ ಆಯ್ಕೆಯನ್ನು ಚುನಾವಣಾಧಿಕಾರಿಯೂ ಆದ ಕ್ಷೇತ್ರ ಶಿಕ್ಷಣಾಧಿಕಾರಿ ಬಸವರಾಜ್ ಘೋಷಿಸಿದರು.

ಒಟ್ಟು 17 ಸದಸ್ಯ ಬಲದ ಗ್ರಾಪಂನಲ್ಲಿ ಕಾಂಗ್ರೆಸ್ ಬೆಂಬಲಿತ 12, ಜೆಡಿಎಸ್ ಬೆಂಬಲಿತ 5 ಮಂದಿ ಆಯ್ಕೆಯಾಗಿ ಕಾಂಗ್ರೆಸ್ ಬೆಂಲಿತರು ಅಧಿಕಾರದ ಚುಕ್ಕಾಣಿ ಹಿಡಿದಿದ್ದರು. ಈ ವೇಳೆ ಗ್ರಾಪಂ ಉಪಾಧ್ಯಕ್ಷ ಕೆ.ಎನ್.ರಾಮಲಿಂಗಂ, ಪಿಡಿಓ ಎಸ್.ಆರ್. ಪರಮೇಶ್, ಕಾರ್ಯದರ್ಶಿ ಆರ್.ಪಿ.ಸುಷ್ಮಾ, ಸುಮಿತ್ರಾ, ಸದಸ್ಯರಾದ ರವಿ, ಚಂದ್ರು, ಶ್ರೀಪತಿ, ಮಂಜು, ಸೋಮು, ಸಣ್ಣತಮ್ಮಯ್ಯ, ಮಮತಾ, ರಾಣಿ, ಸುಮ, ಜಾನಕಿ, ಉದ್ಯಮಿ ಕೆ.ಪಿ.ನಿಂಗರಾಜ್, ಯ.ಸ್ವಾಮಿಗೌಡ, ಕಾಂಗ್ರೆಸ್ ಮುಖಂಡ ಪ್ರಕಾಶ್ ಗೌಡ, ಐ.ಎಸ್. ಗೋಪಿ, ಕೆ.ಪಿ.ಕುಮಾರ್, ಸುರೇಶ್, ರಮೇಶ್, ತಮ್ಮಯ್ಯ, ಶಿವು, ರವಿ, ಕೃಷ್ಣೇಗೌಡ, ಮಹೇಶ, ಕೀರಾ ಸೇರಿದಂತೆ ನೂರಾರು ಕಾರ್ಯಕರ್ತರು, ಗ್ರಾಮಸ್ಥರು ಹಾಜರಿದ್ದರು.

ಅಂಬೇಡ್ಕರ್, ಬಾಬೂಜಿ ತಳ ಸಮುದಾಯದ ಕಣ್ಣುಗಳು

ಸಫಾಯಿ ಕರ್ಮಚಾರಿ ಆಯೋಗದ ಅಧ್ಯಕ್ಷ ಎಂ.ಶಿವಣ್ಣ ಬಣ್ಣನೆ

ಸರಗೂರು, ಫೆ.20– ಸಂವಿಧಾನ ಶಿಲ್ಪಿ ಡಾ.ಬಿ.ಆರ್. ಅಂಬೇಡ್ಕರ್, ಹಸಿರು ಕ್ರಾಂತಿ ಹರಿಕಾರ ಡಾ.ಬಾಬು ಜಗಜೀವನ್ ರಾಂ ಅವರು ತಳ ಸಮುದಾಯದ ಎರಡು ಕಣ್ಣುಗಳು ಎಂದು ಸಫಾಯಿ ಕರ್ಮಚಾರಿ ಆಯೋಗದ ಅಧ್ಯಕ್ಷ ಎಂ.ಶಿವಣ್ಣ ಬಣ್ಣಿಸಿದರು.

ತಾಲೂಕಿನ ಬಿ.ಮಟಕೆರೆ ಎಸ್ಸಿ ಕಾಲೋನಿ ಗ್ರಾಮದಲ್ಲಿ ನಡೆದ ಡಾ.ಬಾಬು ಜಗಜೀವನ್‌ರಾಂ ಅವರ ಪುತ್ಥಳಿ ಅನಾವರಣ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.


ತಳ ಸಮುದಾಯದ ಏಳಿಗೆಗಾಗಿ ದುಡಿದ ಮಹನೀಯರಲ್ಲಿ ಡಾ.ಅಂಬೇಡ್ಕರ್, ಡಾ.ಬಾಬು ಜಗಜೀವನ್ ರಾಂ ಅವರು ಮೊದಲಿಗರು. ಅಂಬೇಡ್ಕರ್ ಸಂವಿಧಾನ ನೀಡುವ ಮೂಲಕ ಶಿಕ್ಷಣ, ಆರೋಗ್ಯ ಸೇರಿದಂತೆ ಮೂಲಭೂತ ಹಕ್ಕುಗಳನ್ನು ನೀಡಿದರೆ, ಡಾ.ಬಾಬು ಜಗಜೀವನ್‌ರಾಂ ಅವರು ದೇಶದಲ್ಲಿ ಆಹಾರ ಸಮಸ್ಯೆ ಉಲ್ಬಣಿಸಿದಾಗ ಆಧುನಿಕ ಕೃಷಿ ಪದ್ಧತಿ ಅಳವಡಿಸಿಕೊಂಡು ಹಸಿರುಕ್ರಾಂತಿ ಮೂಲಕ ಆಹಾರದ ಸಮಸ್ಯೆ ನಿವಾರಿಸಿದರು. ಹೀಗಾಗಿ ಇವರಿಬ್ಬರೂ ಆದಿಕರ್ನಾಟಕ, ಆದಿ ಜಾಂಬವ ಸಮುದಾಯದ ಎರಡು ಕಣ್ಣುಗಳು ಎಂದು ಅಭಿಪ್ರಾಯಪಟ್ಟರು.



ಜಿಲ್ಲೆಯಲ್ಲೇ ಇದೇ ಮೊದಲ ಬಾರಿಗೆ ಗ್ರಾಮದಲ್ಲಿ ಸಮುದಾಯದ ಬಂಧುಗಳು ಬಾಬು ಜಗಜೀವನ್ ರಾಂ ಅವರ ಪುತ್ಥಳಿ ಅನಾವರಣಗೊಳಿಸಿರುವುದು ಸಂತಸ ತಂದಿದೆ. ಅವರ ಆದರ್ಶಗಳನ್ನು ಎಲ್ಲರೂ ಅಳವಡಿಸಿಕೊಳ್ಳಬೇಕು. ಆ ಮೂಲಕ ಶಿಕ್ಷಣ ಪಡೆದು ಜೀವನ ಉಜ್ವಲಗೊಳಿಸಿಕೊಳ್ಳಬೇಕು. ಸಂವಿಧಾನ ನೀಡಿದ ಮೀಸಲಾತಿಯಿಂದ ಅಧಿಕಾರ ಅನುಭವಿಸಿದ್ದು, ಎಲ್ಲರೂ ಮೀಸಲಾತಿಯಿಂದ ಅಭಿವೃದ್ಧಿ ಹೊಂದುತ್ತಿದ್ದೇವೆ. ಹೀಗಾಗಿ ಬಾಬು ಜಗಜೀವನ್‌ರಾಂ ಅವರ ಪುತ್ಥಳಿ ಪಕ್ಕದಲ್ಲೇ ಅಂಬೇಡ್ಕರ್ ಪುತ್ಥಳಿ ನಿರ್ಮಿಸಬೇಕು ಎಂದು ಸಲಹೆ ನೀಡಿದರು.


ಬಿಎಸ್‌ಪಿ ರಾಜ್ಯ ಪ್ರಧಾನ ಕಾಯದರ್ಶಿ ನಾಗೇಂದ್ರ ಮಾತನಾಡಿ, ಬಾಬೂಜಿ ತಳ ಸಮುದಾಯದಲ್ಲಿ ಹುಟ್ಟಿ ಉನ್ನತ ಶಿಕ್ಷಣ ಪಡೆದು ಅತ್ಯುನ್ನತ ಹುದ್ದೆ ಏರಿದರು. ಇಂಥವರ ಪುತ್ಥಳಿ ಪಕ್ಕದಲ್ಲಿ ಮಕ್ಕಳಿಗೆ ಅನುಕೂಲವಾಗುವ ನಿಟ್ಟಿನಲ್ಲಿ ಗ್ರಂಥಾಲಯ ತೆರೆಯಿರಿ. ಮಕ್ಕಳ ಶಿಕ್ಷಣಕ್ಕೆ ಹೆಚ್ಚು ಒತ್ತು ನೀಡಿ, ಅವರನ್ನು ಜ್ಞಾನಿಗಳಾಗಿ ಮಾಡುವ ಮೂಲಕ ಅವರ ಬದುಕು ಹಸನುಗೊಳಿಸಲು ಕ್ರಮವಹಿಸಿ ಎಂದರು. ಕಾರ್ಯಕ್ರಮದಲ್ಲಿ ಜೆಡಿಎಸ್ ಮುಖಂಡ ಜಯಪ್ರಕಾಶ್ ಚಿಕ್ಕಣ್ಣ ಮಾತನಾಡಿದರು. ಶಾಸಕ ಅನಿಲ್ ಚಿಕ್ಕಮಾದು ತಾಯಿ ನಾಗಮ್ಮ, ಪುರಸಭೆ ಸದಸ್ಯೆ ಶಾಂತಮ್ಮ, ಗ್ರಾಪಂ ಸದಸ್ಯರಾದ ವಿನೋದ, ಶ್ರೀನಿವಾಸ್, ಬೆಟ್ಟಸ್ವಾಮಿ, ಡಾ.ಬಾಬುಜಗಜೀವನ್‌ರಾಂ ವಿಚಾರ ವೇದಿಕೆ ತಾಲೂಕು ಅಧ್ಯಕ್ಷ ಸಿ.ತಿಮ್ಮಯ್ಯ, ಕೆ. ನಾಗಣ್ಣ, ಪಿ.ನಾಗರಾಜು, ತಾಪಂ ಮಾಜಿ ಉಪಾಧ್ಯಕ್ಷ ವೈಕುಂಠಯ್ಯ, ಆದಿ ಕರ್ನಾಟಕ ಮಹಾಸಭಾದ ಅಧ್ಯಕ್ಷ ಶಿವಣ್ಣ, ಮಲ್ಲೇಶ್, ಮುಖಂಡರಾದ ಗುಣಪಾಲ್, ಪರಶಿವಮೂರ್ತಿ, ಅಭಿಕುಮಾರ್, ಹರಿದಾಸ್, ಸೋಮು ಪಟೇಲ್, ಕೆ.ಟಿ.ಹರೀಶ್, ಹನು, ನಾಗರಾಜು, ಉದಯಕುಮಾರ್, ಮಣಿಕಂಠ, ಬಾಬುಜಗಜೀವನ್‌ರಾಂ ಸಂಘದ ಅಧ್ಯಕ್ಷ ಡಿ.ಜಯಕುಮಾರ್, ಉಪಾಧ್ಯಕ್ಷ ಶಿವರಾಜು, ಮಾಜಿ ಉಪಾಧ್ಯಕ್ಷ ಎಚ್.ಕೃಷ್ಣ, ಖಜಾಂಚಿ ಎಂ.ಜೆ.ಆನಂದ ಕುಮಾರ, ಎಂ.ಕೃಷ್ಣ, ನೇಮಿರಾಜು, ಜೆ.ಮಹೇಶ್ ಸೇರಿದಂತೆ ಸಂಘದ ಪದಾಧಿಕಾರಿಗಳು ಹಾಜರಿದ್ದರು.

ಮನು ನಿಧನ



ಹುಣಸೂರು, ಫೆ.20– ತಾಲೂಕಿನ ಬಿಳಿಕೆರೆ ಬ್ಲಾಕ್ ಕಾಂಗ್ರೆಸ್ ಮಾಜಿ ಅಧ್ಯಕ್ಷ ಬಸವರಾಜು ಅವರ ಪುತ್ರ ಮನು(32) ನಿಧನರಾದರು. ಮೃತರು ತಂದೆ, ತಾಯಿ ಇಬ್ಬರು ಸಹೋದರರು, ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಮೃತರ ಜಮೀನಿನಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಸ್ವಾಮಿ ನಾಯಕ



ಹುಣಸೂರು, ಫೆ.20– ತಾಲೂಕಿನ ಮರಳಯ್ಯನಕೊಪ್ಪಲು ನಿವಾಸಿ, ಮೈಸೂರು ವಿದ್ಯಾವರ್ಧಕ ಕಾಲೇಜಿನ ಉಪನ್ಯಾಸಕ ಸ್ವಾಮಿ ನಾಯಕ (45) ನಿಧನರಾದರು. ಮೃತರು ಬಿಳಿಕೆರೆ ಪ್ರಥಮ ದರ್ಜೆ ಕಾಲೇಜಿನ ಅತಿಥಿ ಉಪನ್ಯಾಸಕಿ ಶಶಿಕಲಾ ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಸ್ವಗ್ರಾಮದಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ದಂಡವಿಲ್ಲದೆ ಹೆಚ್ಚುವರಿ, ಅನಧಿಕೃತ ತಂಬಾಕು ಮಾರಾಟಕ್ಕೆ ಕೇಂದ್ರದ ಸಮ್ಮತಿ

ತಮ್ಮ ಮನವಿಗೆ ಸ್ಪಂದಿಸಿದ್ದಕ್ಕೆ ಕೇಂದ್ರ ವಾಣಿಜ್ಯ-ಕೈಗಾರಿಕಾ ಸಚಿವ ಪಿಯೂಷ್ ಗೋಯಲ್ ಅವರಿಗೆ ಸಂಸದ ಪ್ರತಾಪ್ ಸಿಂಹ ಧನ್ಯವಾದ



ಮೈಸೂರು,ಫೆ.20(ಪಿಎಂ)– ನೋಂದಾಯಿತ ಬೆಳೆಗಾರರು ಉತ್ಪಾದಿಸಿದ ಹೆಚ್ಚುವರಿ ತಂಬಾಕು ಮತ್ತು ನೋಂದಾಯಿಸದಿರುವ ಬೆಳೆಗಾರರು ಉತ್ಪಾದಿಸಿದ ಅನಧಿಕೃತ ತಂಬಾಕನ್ನು ಯಾವುದೇ ದಂಡವಿಲ್ಲದೆ, 2022–23ರ ಬೆಳೆ ಹಂಗಾಮಿಗೆ ಕರ್ನಾಟಕದಲ್ಲಿ ಹರಾಜು ಮೂಲಕ ಮಾರಾಟಕ್ಕೆ ಕೇಂದ್ರ ಸರ್ಕಾರ ಅನುಮತಿ ನೀಡಿದೆ.

ಪ್ರಕಟಣೆಯಲ್ಲಿ ಸಂಸದ ಪ್ರತಾಪ್ ಸಿಂಹ ಈ ವಿಷಯ ತಿಳಿಸಿದ್ದು, ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವಾಲಯಕ್ಕೆ ಈ ಸಂಬಂಧ ಹಲವು ಬಾರಿ ಮನವಿ ಸಲ್ಲಿಸಿದ್ದೆ. ಮನವಿಗೆ ಸಕಾರಾತ್ಮಕವಾಗಿ ಸ್ಪಂದಿಸಿರುವ ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವ ಪಿಯೂಷ್ ಗೋಯಲ್ ಅವರಿಗೆ ಧನ್ಯವಾದ ಅರ್ಪಿಸುವುದಾಗಿ ಸಂಸದರು ತಿಳಿಸಿದ್ದಾರೆ.

2022–23ರ ಬೆಳೆ ಹಂಗಾಮಿನಲ್ಲಿ ಕರ್ನಾಟಕ ದಲ್ಲಿ ಕಡಿಮೆ ಬೆಳೆ ಉತ್ಪಾದನೆಯನ್ನು ಪರಿಗಣಿಸಿ ನೋಂದಾಯಿತ ಬೆಳೆಗಾರರು ಉತ್ಪಾದಿಸುವ ಹೆಚ್ಚುವರಿ ತಂಬಾಕನ್ನು ಮತ್ತು ನೋಂದಾಯಿಸದ ಬೆಳೆಗಾರರು ಉತ್ಪಾದಿಸುವ ಅನಧಿಕೃತ ತಂಬಾಕನ್ನು ಯಾವುದೇ ದಂಡವಿಲ್ಲದೆ, ಮಾರಾಟ ಮಾಡಲು ಸಚಿವ ಪಿಯೂಷ್ ಗೋಯಲ್ ಅನುಮತಿ ನೀಡಲು ಪರಿಗಣಿಸಿದ್ದಾರೆ.

ಕರ್ನಾಟಕದಲ್ಲಿ ಈ ಬೆಳೆ ಹಂಗಾಮಿನಲ್ಲಿ 40,207 ರೈತರು 60,782 ಹೆಕ್ಟೇರ್ ಪ್ರದೇಶದಲ್ಲಿ ಎಫ್‌ಸಿವಿ ತಂಬಾಕು ಬೆಳೆದಿದ್ದಾರೆ. 2022ರ ಜೂನ್ ಮತ್ತು ಜುಲೈ ತಿಂಗಳ ನಿರಂತರ ವ್ಯಾಪಕ ಮಳೆಯಿಂದ ಕರ್ನಾಟಕದಲ್ಲಿ ಎಫ್‌ಸಿವಿ ತಂಬಾಕಿನ ಒಟ್ಟು ಉತ್ಪಾದನೆಯು, ತಂಬಾಕು ಮಂಡಳಿ ನಿಗದಿಪಡಿಸಿದ 100 ಮಿಲಿಯನ್ ಕೆಜಿ ಬೆಳೆ ಗಾತ್ರಕ್ಕೆ ಬದಲಾಗಿ ಕೇವಲ 59.78 ಮಿಲಿಯನ್ ಕೆಜಿಗಳಷ್ಟು ಮಾತ್ರ ಆಗಿದೆ.

ಹೆಚ್ಚುವರಿ ಎಫ್‌ಸಿವಿ ತಂಬಾಕು ಮಾರಾಟಕ್ಕೆ ಯಾವುದೇ ದಂಡ ವಿಧಿಸದ ನಿರ್ಧಾರವು ಈ ಬೆಳೆ ಋತುವಿನಲ್ಲಿ ಕಡಿಮೆ ಉತ್ಪಾದನೆಯಿಂದ ಉಂಟಾದ ನಷ್ಟವನ್ನು ಹೊಂದಿಸಲು ಕರ್ನಾಟಕದ ರೈತರಿಗೆ ಸಹಾಯವಾಗುತ್ತದೆ. ಇದರಿಂದ ಎಫ್‌ಸಿವಿ ತಂಬಾಕಿನ ಕಡಿಮೆ ಉತ್ಪಾದನೆ ಮತ್ತು ಕಡಿಮೆ ಗಳಿಕೆಯಿಂದ ರೈತರಿಗೆ ಉಂಟಾಗಿರುವ ಆರ್ಥಿಕ ನಷ್ಟ ಸರಿದೂಗಿಸಲು ಸಹಾಯವಾಗುತ್ತದೆ. ಜೊತೆಗೆ ಬೆಳೆಗಾರರಿಗೆ ತಮ್ಮ ಜೀವನೋಪಾಯವನ್ನು ಮುಂದುವರಿಸಲು ಹೆಚ್ಚು ಸಹಾಯ ಆಗಲಿದೆ ಎಂದು ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವಾಲಯ ಪ್ರಕಟಣೆಯಲ್ಲಿ ತಿಳಿಸಿದೆ.



ದೆಹಲಿಯ ಗಣರಾಜ್ಯೋತ್ಸವ ಪರೇಡ್‌ನಲ್ಲಿ ಪಾಲ್ಗೊಂಡ ಎನ್‌ಸಿಸಿ ಕೆಡೆಟ್‌ಗಳು, ಪ್ರಶಸ್ತಿ ಪುರಸ್ಕೃತ ಪತ್ರಕರ್ತರಿಗೆ ಸುತ್ತೂರು ಶ್ರೀಗಳ ಅಭಿನಂದನೆ





ಮೈಸೂರು, ಫೆ.20(ಎಸ್‌ಪಿಎನ್)–ಗಣರಾಜ್ಯೋತ್ಸವ, ರಾಷ್ಟ್ರಮಟ್ಟದ ಶಿಬಿರ ಮತ್ತು ಸ್ಪರ್ಧೆಯಲ್ಲಿ ಭಾಗವಹಿಸಿದ್ದ ಮೈಸೂರು ವಿಭಾಗದ 83 ಮಂದಿ ಎನ್‌ಸಿಸಿ ಕೆಡೆಟ್‌ಗಳು ಹಾಗೂ ವಿವಿಧ ಪ್ರಶಸ್ತಿಗೆ ಭಾಜನರಾಗಿರುವ ಹಿರಿಯ ಪತ್ರಕರ್ತರನ್ನು ಸುತ್ತೂರು ಮಠದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಸೋಮವಾರ ಅಭಿನಂದಿಸಿದರು.

ಮೈಸೂರು ಚಾಮುಂಡಿಬೆಟ್ಟದ ತಪ್ಪಲಿನಲ್ಲಿರುವ ಸುತ್ತೂರು ಶಾಖಾಮಠದಲ್ಲಿ ಜೆಎಸ್‌ಎಸ್ ಮಹಾವಿದ್ಯಾಪೀಠದ ವತಿಯಿಂದ ಆಯೋಜಿಸಿದ್ದ ಸಮಾರಂಭದಲ್ಲಿ ಮೊದಲಿಗೆ ಮೈಸೂರು ವಿವಿ ನಿವೃತ್ತ ಪ್ರಾಧ್ಯಾಪಕಿ ಪ್ರೊ.ಆರ್. ಇಂದಿರಾ, ಪತ್ರಕರ್ತರಾದ ರಮೇಶ್ ನಾಯಕ್, ಮುಳ್ಳೂರು ರಾಜು, ಕೆ.ಪಿ.ನಾಗರಾಜು, ಛಾಯಾಗ್ರಾಹಕ ನಾಗೇಶ್ ಪಾಣತ್ತಲೆ ಅವರನ್ನು ಅಭಿನಂದಿಸಲಾಯಿತು.

ನಂತರ ನವದೆಹಲಿಯ ಗಣರಾಜ್ಯೋತ್ಸವ ಪಥಸಂಚಲನದಲ್ಲಿ ಭಾಗವಹಿಸಿದ್ದ ವಿವಿಧ ಕಾಲೇಜಿನ ಎನ್‌ಸಿಸಿ ಕೆಡೆಟ್‌ಗಳಾದ ಎಸ್.ಎಂ. ಹೃತ್ವಿಕ್, ಯು. ಜಯಶ್ರೀ, ಜೆ.ರಕ್ಷಿತ್, ಡಿ.ಐಶ್ವರ್ಯ, ಎಂ.ಎಸ್. ಸೂರ್ಯ, ಎನ್.ಎಂ. ಅಮೂಲ್, ಡಿ.ಪವನ್‌ಕುಮಾರ್, ಎಲ್.ವೇದಪ್ರಭ, ಪಿ.ಸುಭಾಷ್, ಎಂ.ಮಹೇಂದ್ರ, ಎಸ್.ಸುದೀಪ್, ಸಂಜಯ ಕುಮಾರ್, ಆದಿತ್ಯ ಟಂಕಸಾಲಿ ಅವರನ್ನು ಅಭಿನಂದಿಸಲಾಯಿತು.

ಅಲ್ಲದೆ, ಬಿ.ಶಶಾಂಕ. ಆರ್.ಶುಭಶ್ರೀ, ಎಂ.ಸೋನಶ್ರೀ, ಆರ್.ಎಸ್.ಯಕ್ಷೇಶ್, ನಂದೀಶ್‌ರಾಜೇ ಅರಸ್, ನವೀನ್‌ಕುಮಾರ್, ಲೆನ್ಸನ್ ಶೈನ್.ಡಿ.ಅಲ್ವಿಡಿಯ, ದಿಯಾ ಗಣೇಶ್, ಹೆಚ್.ಪಲ್ಲವಿ, ಮಿಥಿನ್ ಆರ್.ಚಿದಾನಂದ, ಭವಾನಿ, ಡಿ.ರಫೆಸ್, ಎಂ. ಜೀತ, ಪ್ರಣವ್ ಆರ್.ಕೌಶಿಕ್, ಚೈತಾಲಪುಡಿ ಯತೀಂದ್ರ ರೆಡ್ಡಿ, ವಿ.ದರ್ಶನ, ಪಿ.ರಾಬಿಸನ್, ಎಸ್.ಶರಣ್ಯ, ಆರ್.ಪವನ್, ಬಿ.ನಾರಾಯಣ್, ಸುಮಂತ್‌ಗೌಡ, ಎಂ.ಆರ್.ಶಿವರಾಂ, ಶಿವಪ್ರಸಾದ್, ಎಸ್.ಕಾರ್ತಿಕ್, ಕೆ.ಆರ್.ದರ್ಶನ್, ಎಂ.ಆರ್.ರಕ್ಷಿತ್. ಜೆ.ಗೆಹಾನ್, ಓಂಕಾರ್ ಭಾರತಿ, ಧನ್ಯಶ್ರೀ, ಪಿ.ಹೇಮೇಶ್ ರಜುತ್, ಎಸ್.ಕೀರ್ತನಾ, ಬಿ.ಮಮತಾ, ಜವೇರಿಯ ಸುಲ್ತಾನ, ಆರ್.ಕಾವ್ಯ, ಶಂಕರಮ್ಮ, ಕೆ.ಎಸ್.ದೀಪ್ತಿ ಪೂಮಮ್ಮ ಸಿ.ಬಿ.ಸಮಂತ, ಎಸ್.ಸುನಿತಾ, ಆರ್.ಪುಣ್ಯ, ಶುಭಂ ಕೆ.ಗಡಿ, ಎಸ್.ಮಹೇಶ್, ಎಂ.ದೀಪಿಕಾ, ದಿತಿನ್ ಎಸ್. ದೇವಯ್ಯ, ಹೆಚ್.ಎಸ್.ವೇದವತಿ, ಸ್ಫೂರ್ತಿ ಅಗ್ನಿಹೋತ್ರಿ, ಗೌತಮ್ ಗೌಡ, ಶ್ರೀಕೃಷ್ಣರಾವ್ ಸೇರಿದಂತೆ ಒಟ್ಟು 83 ಮಂದಿ ಗಣ್ಯರಾಜ್ಯೋತ್ಸವ ಪಥಸಂಚಲನ, ತಲ್ ಸೈನಿಕ್ ರ್ಯಾಲಿ, ಪ್ರಧಾನಮಂತ್ರಿ ರ್ಯಾಲಿ, ವಾಯು ಸೈನಿಕ್ ರ್ಯಾಲಿಯಲ್ಲಿ ಭಾಗವಹಿಸಿದ್ದ ಎನ್‌ಸಿಸಿ ಕೆಡೆಟ್‌ಗಳನ್ನು ಅಭಿನಂದಿಸಲಾಯಿತು. ಇದೇ ವೇಳೆಯಲ್ಲಿ ಎನ್‌ಸಿಸಿಗೆ ಹೆಚ್ಚಿನ ಪ್ರೋತ್ಸಾಹ ನೀಡಿದ ಜೆಎಸ್‌ಎಸ್ ಸಂಸ್ಥೆಗೆ ಬೆಸ್ಟ್ ಇನ್‌ಸ್ಟಿಟ್ಯೂಷನ್ ಅವಾರ್ಡ್, ಬೆಸ್ಟ್ ಚೀಫ್ ಮಿನಿಸ್ಟರ್ ಕಮಾಂಡೇಷನ್ ಅವಾರ್ಡ್‌ಗಳು ಲಭಿಸಿವೆ.

ಕೆಡೆಟ್‌ಗಳನ್ನು ಅಭಿನಂದಿಸಿ ಮಾತನಾಡಿದ ಸುತ್ತೂರು ಮಠದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಅವರು, ವಿದ್ಯಾರ್ಥಿ ದಿಸೆಯಲ್ಲಿ ಓದಿನ ಜೊತೆಗೆ ಪಠ್ಯೇತರ ಚಟುವಟಿಕೆಗಳಾದ ಎನ್‌ಸಿಸಿಯಲ್ಲಿ ತೊಡಗಿಸಿಕೊಂಡು ಇಂದಿನ ವೇದಿಕೆಯಲ್ಲಿ ಅಭಿನಂದನೆಗೊಳ್ಳುತ್ತಿರುವುದು ಉತ್ತಮ ಬೆಳವಣಿಗೆ. ವಿದ್ಯಾರ್ಥಿ ದಿಸೆಯಲ್ಲಿ ಶಿಸ್ತು, ಸಂಯಮ ಹಾಗೂ ಮಾನವೀಯ ಮೌಲ್ಯಗಳನ್ನು ಮೈಗೂಡಿಸಿಕೊಳ್ಳಲು ಎನ್‌ಸಿಸಿ ಚಟುವಟಿಕೆ ಉತ್ತಮ ವೇದಿಕೆ ಎಂದರಲ್ಲದೆ, ಎನ್‌ಸಿಸಿಯಲ್ಲಿ ತೊಡಗಿಸಿಕೊಂಡಿರುವ ವಿದ್ಯಾರ್ಥಿಗಳು ಗಣ್ಯರಾಜ್ಯೋತ್ಸವ ಪಥಸಂಚಲನದಲ್ಲಿ ಭಾಗವಹಿಸಿ ದೇಶ–ವಿದೇಶಿಗರ ಗಮನ ಸೆಳೆದು, ಮೈಸೂರಿನ ಕೀರ್ತಿ ಹೆಚ್ಚಿಸಿದ್ದಾರೆ ಎಂದರು.

ಈ ವೇಳೆ ಎನ್‌ಸಿಸಿ ಮೈಸೂರು ವಿಭಾಗದ ಗ್ರೂಪ್ ಕಮಾಂಡರ್ ಕರ್ನಲ್ ಆರ್.ಆರ್. ಮೆನನ್, ಮೈಸೂರು 14ನೇ ಕರ್ನಾಟಕ ಬೆಟಾಲಿಯನ್ ಕಮಾಂಡಿಂಗ್ ಆಫೀಸರ್ ಕರ್ನಲ್ ಮನೀಷ್ ಪ್ರಸಾದ್, ಎನ್‌ಸಿಸಿ ಅಧಿಕಾರಿ ಎಸ್.ಹರ್ಷಕುಮಾರ್, ಡಾ.ಎಲ್.ವಿನಯ್‌ಕುಮಾರ್, ಕಾಲೇಜು ಶಿಕ್ಷಣ ವಿಭಾಗದ ಆರ್.ಮೂಗೇಶಪ್ಪ, ಹಿರಿಯ ಪತ್ರಕರ್ತರಾದ ಸಿ.ಕೆ.ಮಹೇಂದ್ರ, ಕೂಡ್ಲಿ ಗುರುರಾಜ್ ಉಪಸ್ಥಿತರಿದ್ದರು.

ಹಸಿರು ನಮ್ಮ ಉಸಿರು

ಪ್ಲಾಸ್ಟಿಕ್ ಬಳಕೆ ನಿಷೇಧಿಸಿ ಪರಿಸರವನ್ನು ಕಾಪಾಡಿ




ಮಹೇಶ್ ಜೆ.ಕೆ (ಮಿಲ್ಟ್ರಿ)

ಇವರು ದಿ: 10.02.2023 ಶುಕ್ರವಾರ ದೈವಾಧೀನರಾಗಿದ್ದು, ತತ್ಸಂಬಂಧ ಮೃತರ ಉತ್ತರ ಕ್ರಿಯಾದಿ ಭೂಶಾಂತಿ ಕಾರ್ಯವನ್ನು ದಿ: 21.02.2023 ಮಂಗಳವಾರ ಬೆಳಗ್ಗೆ 11 ಗಂಟೆಗೆ ಶ್ರೀ ಮರುಳೇಶ್ವರ ದೇವಸ್ಥಾನ, ಕಾವೇರಿ ಶಾಲೆಯ ಹತ್ತಿರ, ಕುವೆಂಪುನಗರ, ಮೈಸೂರು ಇಲ್ಲಿ ಏರ್ಪಡಿಸಿರುವುದರಿಂದ ಆಹ್ವಾನ ಪತ್ರಿಕೆ ತಲುಪದವರು ಇದನ್ನೇ ಆಹ್ವಾನವೆಂದು ತಿಳಿದು ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿ ಕೋರಬೇಕಾಗಿ ವಿನಂತಿ

ದುಃಖತಪ್ತರು: ಕುಟುಂಬವರ್ಗದವರು ಹಾಗೂ ಸ್ನೇಹಿತರು.

ಉತ್ತರ ಕ್ರಿಯಾದಿ ಭೂಶಾಂತಿ ಆಹ್ವಾನ ಪತ್ರಿಕೆ



ಶ್ರೀ ಬಿ.ಕೆ.ನಾಗಲಿಂಗಪ್ಪನವರು

(ಲೇ ಕೆಂಪೇಗೌಡರ ಮಗ)

ಇವರು ದಿ: 12.02.2023 ಭಾನುವಾರ ದೈವಾಧೀನರಾಗಿದ್ದು, ತತ್ಸಂಬಂಧ ಮೃತರ ಉತ್ತರ ಕ್ರಿಯಾದಿ ಭೂಶಾಂತಿ ಕಾರ್ಯವನ್ನು ದಿ: 22.02.2023 ಬುಧವಾರ ಬೆಳಗ್ಗೆ 11.30 ಗಂಟೆಗೆ ಕನಕಪುರ ತಾ॥, ಕಸಬಾ ಹೋ॥, ಬೂದಿಗುಪ್ಪೆ ಗ್ರಾಮದ ತೋಟದಲ್ಲಿ ಏರ್ಪಡಿಸಿರುವುದರಿಂದ ಆಹ್ವಾನ ಪತ್ರಿಕೆ ತಲುಪದವರು ಇದನ್ನೇ ಆಹ್ವಾನವೆಂದು ತಿಳಿದು ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿ ಕೋರಬೇಕಾಗಿ ವಿನಂತಿ

ದುಃಖತಪ್ತರು: ಶ್ರೀಮತಿ ವಿಜಯಾಂಭ ಹೆಚ್.ಎಸ್ ಮತ್ತು ಮಕ್ಕಳು, ಅಳಿಯ, ಮೃತರ ಸಹೋದರಿಯರು ಹಾಗೂ ಕುಟುಂಬವರ್ಗದವರು

ಜಗತ್ತಿನ ಶ್ರೇಷ್ಠರಲ್ಲಿ ಅಗ್ರ ಗಣ್ಯರು ಸರ್ವಜ್ಞರು

ಶಾಸಕ ಎಲ್.ನಾಗೇಂದ್ರ ಸ್ಮರಣೆ



ಮೈಸೂರು, ಫೆ.20– ಜಗತ್ತಿನ ಸರ್ವ ಶ್ರೇಷ್ಠರಲ್ಲಿ ಒಬ್ಬರಾದ ಸಂತಕವಿ ಸರ್ವಜ್ಞ ಮಹಾ ಜ್ಞಾನಿಯಾಗಿದ್ದರು ಮತ್ತು ಸರ್ವವನ್ನು ತಿಳಿದವನೇ ಸರ್ವಜ್ಞ ಎಂದು ಶಾಸಕ ಎಲ್. ನಾಗೇಂದ್ರ ತಿಳಿಸಿದರು.

ಜಿಲ್ಲಾಡಳಿತ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ನಗರದ ಕಲಾಮಂದಿರದಲ್ಲಿ ಹಮ್ಮಿಕೊಂಡಿದ್ದ ಸಂತಕವಿ ಶ್ರೀ ಸರ್ವಜ್ಞ ಜಯಂತಿಯನ್ನು ಉದ್ಘಾಟಿಸಿ ಮಾತನಾಡಿದ ಅವರು, ಮೈಸೂರಿನಲ್ಲಿ ಅತ್ಯಂತ ಅದ್ಧೂರಿಯಾಗಿ ಸರ್ವಜ್ಞ ಜಯಂತಿಯನ್ನು ಆಚರಿಸುತ್ತಿರುವುದು ಬಹಳ ಸಂತೋಷದ ವಿಷಯ ಎಂದರು.

16ನೇ ಶತಮಾನದಲ್ಲಿ ಹಾವೇರಿ ಜಿಲ್ಲೆಯ ಮಾಸೂರು ಗ್ರಾಮದಲ್ಲಿ ಜನಿಸಿದ ಸರ್ವಜ್ಞರು ಸಾವಿರಕ್ಕೂ ಹೆಚ್ಚು ತ್ರಿಪದಿಗಳನ್ನು ಹಾಗೂ 7,070ಕ್ಕೂ ಹೆಚ್ಚು ವಚನಗಳನ್ನು ರಚಿಸಿರುವ ಮಾಹಿತಿ ದೊರಕಿದೆ. ಸರ್ವಜ್ಞರ ವಚನ ಹಾಗೂ ತ್ರಿಪದಿಗಳು ಇಂದಿಗೂ ಪ್ರಸ್ತುತವೆನಿಸುತ್ತವೆ. ಸಮಾಜದ ಬದಲಾವಣೆಯಲ್ಲಿ ಅವರ ತ್ರಿಪದಿ ಮತ್ತು ವಚನಗಳ ಪ್ರಭಾವ ಬಹಳ ಪರಿಣಾಮಕಾರಿಯಾಗಿದೆ ಎಂದು ತಿಳಿಸಿದರು.

ಕುಂಬಾರ ಸಮುದಾಯದ ಈ ವೃತ್ತಿಯನ್ನು ಬೆಳೆಸಿ ಮತ್ತು ಗೌರವಿಸಿ ಅದರೊಟ್ಟಿಗೆ ಶಿಕ್ಷಣಕ್ಕೂ ಹೆಚ್ಚಿನ ಮಹತ್ವವನ್ನು ನೀಡಿ ಎಂದರು.

ಮೈಸೂರು ಬಣ್ಣ ಮತ್ತು ಅರಗು ಕಾರ್ಖಾನೆಯ ಅಧ್ಯಕ್ಷ ರಘು ಕೌಟಿಲ್ಯ ಮಾತನಾಡಿ, ಕುಂಬಾರರ ಚಕ್ರ ಆಧುನಿಕ ವೈಜ್ಞಾನಿಕತೆಯ ತಳಹದಿ. ಕೌಶಲ್ಯ ಭರಿತ ಕುಂಬಾರನ ಈ ಕೆಲಸ ಸಮಾಜಕ್ಕೆ ಒಂದು ಅತ್ಯುತ್ತಮ ಕೊಡುಗೆ. ಇಷ್ಟು ಅದ್ಧೂರಿಯಾಗಿ ಸರ್ವಜ್ಞರ ಜಯಂತಿಯನ್ನು ಆಚರಿಸುವ ಮೂಲಕ ಕುಂಬಾರರ ಸ್ವಾಭಿಮಾನ, ಒಗ್ಗಟ್ಟು ಮತ್ತು ಸಂಘಟನೆಯ ಶಕ್ತಿಯನ್ನು ಸಮಾಜಕ್ಕೆ ತೋರಿದ್ದೀರಿ ಎಂದರು.

ಮುಖ್ಯ ಭಾಷಣಕಾರರಾಗಿ ಆಗಮಿಸಿದ್ದ ಮಹೇಶ್ ಹರವೆ ಮಾತನಾಡಿ, 1520 ರಲ್ಲಿ ಮಾಳಿ ಮತ್ತು ಮಾಳ ಎಂಬ ಕುಂಬಾರ ಸಮುದಾಯದಲ್ಲಿ ಜನಿಸಿದ ಸರ್ವಜ್ಞರ ಬಗ್ಗೆ ಕೇಳಿ ಅರಿಯದವರು ಯಾರು ಇಲ್ಲ. ಇಂದು 504ನೇ ಸರ್ವಜ್ಞ ಜಯಂತಿಯ ಸಂಭ್ರಮಾಚರಣೆಯ ಹಾದಿಯಲ್ಲಿದ್ದೇವೆ. ಆಧುನಿಕ ಸಮಾಜದವರು ಸರ್ವಜ್ಞರ ವಚನಗಳ ಬೆಳಕಿನಲ್ಲಿ ತಮ್ಮ ವಿವೇಕವನ್ನು ಅರಳಿಸಿಕೊಳ್ಳುತ್ತಾರೆ ಎಂದು ತಿಳಿಸಿದರು.

ಸಮಾಜಕ್ಕೆ ಹಿಡಿದ ಕನ್ನಡಿಯಂತೆ ಸರ್ವಜ್ಞ ಸಮಾಜದ ಅಂಕುಡೊಂಕುಗಳನ್ನು ತಮ್ಮ ತ್ರಿಪದಿ ಹಾಗೂ ವಚನಗಳ ಮೂಲಕ ತಿದ್ದಲು ಯತ್ನಿಸಿದರು. ಸರ್ವಜ್ಞ ಯಾವುದೇ ಸಮಾಜಕ್ಕೆ ಸೀಮಿತವಾದವರಲ್ಲ. ಪ್ರಬುದ್ಧ ಚಿಂತನೆಗಳ ಮೂಲಕ ತನ್ನಂತೆ ಇತರರನ್ನು ಕಾಣುವ ಮನಸ್ಥಿತಿ ಹಾಗೂ ಪ್ರಾಕೃತಿಕ ಧರ್ಮವನ್ನು ಹೊಂದಿದ್ದರು ಎಂದು ತಿಳಿಸಿದರು.

ಆಧ್ಯಾತ್ಮಿಕ ಮತ್ತು ವೈಚಾರಿಕ ಪ್ರಭಾವುಳ್ಳ ಸರ್ವಜ್ಞರನ್ನು ನಮ್ಮವನಲ್ಲ ಎನ್ನಲು ಯಾರಿಂದಲೂ ಸಾಧ್ಯವಿಲ್ಲ. ಜಾತಿ ಧರ್ಮ ಮೇಲು ಕೀಳು ಎಲ್ಲಾ ಭೇದಗಳನ್ನು ದಾಟಿ ಬದುಕಬೇಕೆಂದರೆ ಸರ್ವಜ್ಞನ ತ್ರಿಪದಿ ಮತ್ತು ವಚನಗಳು ದಾರಿದೀಪವಾಗಿವೆ. ಮನುಷ್ಯ ಮಹಾತ್ಮನಾಗುವ ಮೂಲಕ ದೇವರಾಗುತ್ತಾನೆ ಎಂಬ ಸರ್ವಜ್ಞರ ಆಶಯ ವಿಶಾಲ ಅರ್ಥವುಳ್ಳದ್ದು ಎಂದರು.

ಕಾರ್ಯಕ್ರಮದಲ್ಲಿ ಮೈಸೂರು ಮಹಾನಗರ ಪಾಲಿಕೆ ಮೇಯರ್ ಶಿವಕುಮಾರ್, ಉಪಮೇಯರ್ ಡಾ.ಜಿ ರೂಪ, ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಕೆ.ಎಂ. ಗಾಯತ್ರಿ, ಕುಂಬಾರ ಗುಂಡಯ್ಯ ಮಹಾಸಂಸ್ಥಾನ ಮಠದ ಶ್ರೀ ಬಸವ ಕುಂಬಾರಗುಂಡಯ್ಯ ಸ್ವಾಮೀಜಿಗಳು, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಜಂಟಿ ನಿರ್ದೇಶಕ ವಿ.ಎನ್. ಮಲ್ಲಿಕಾರ್ಜುನಸ್ವಾಮಿ, ಸಹಾಯಕ ನಿರ್ದೇಶಕ ಡಾ.ಎಂ.ಡಿ. ಸುದರ್ಶನ್, ತಾಲೂಕು ಮತ್ತು ಜಿಲ್ಲಾಮಟ್ಟದ ಕುಂಬಾರ ಸಂಘದ ಪದಾಧಿಕಾರಿಗಳು ಹಾಗೂ ಸರ್ವಜ್ಞ ವಿವಿಧೋದ್ದೇಶ ಸಹಕಾರ ಸಂಘದ ಪದಾಧಿಕಾರಿಗಳು ಉಪಸ್ಥಿತರಿದ್ದರು.

SITE FOR SALE
Ananda Sagara
38 x 40 - S/E Corner
Mob: 8792207164

CHANGE OF NAME

I, Chinnu, son of Pilla, residing at 1st Pakshirajapura Village, Ummathuru Post, Hanagodu Hobli, Hunsur Taluk, Mysore District-571105, have changed my name from Chinnu to Chinnu Pilla, on my own free will, in front of Notary H. Dinesh on 20-02-2023.

Sd/- Chinnu Pilla

11ನೇ ವರ್ಷದ ಪುಣ್ಯಸ್ಮರಣೆ



ಶ್ರೀಮತಿ ಪಾರ್ವತಮ್ಮ

ನೀವು ನಮ್ಮನ್ನಗಲಿ ಇಂದಿಗೆ 11 ವರ್ಷ ಕಳೆದರೂ ಸದಾ ನಿಮ್ಮ ನೆನಪಿನಲ್ಲಿರುವ

ದುಃಖತಪ್ತರು: ಪತಿ–ದಾಸನಾಯಕ ಮಗ–ವಿಜಯಕುಮಾರ್, ಸೊಸೆ–ರಾಣಿ.ಎಸ್, ಮೊಮ್ಮಕ್ಕಳು, ಗಗನ.ವಿ, ಶ್ರೀನಿವಾಸ .ಹೆಚ್.ವಿ ಹಿನಕಲ್, ಮೈಸೂರು

7ನೇ ವರ್ಷದ ಪುಣ್ಯಸ್ಮರಣೆ



ಎನ್.ರಾಘವನ್ (ವಾಸು) ಪ್ರಾಧ್ಯಾಪಕರು

ನೀವು ನಮ್ಮನ್ನಗಲಿ ಇಂದಿಗೆ 7 ವರ್ಷ ಕಳೆದರೂ ಸದಾ ನಿಮ್ಮ ನೆನಪಿನಲ್ಲಿರುವ

ದುಃಖತಪ್ತರು: ತಾಯಿ ಗೌರಮ್ಮ, ಮಕ್ಕಳಾದ, ಕಾರ್ತಿಕ್, ಕೋಮಲಹಂಸ

ವಧು–ವರರ ಅನ್ವೇಷಣೆ
ಕನ್ನಡ ಸ್ಮಾರ್ಥ ಬ್ರಾಹ್ಮಣ ಸಮುದಾಯದ ವಧು–ವರರ ಅಂತರ್ಜಾಲ ತಾಣ.
http://www.hoysalakarnatakabrahmins.com
ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ :
ಸುಮ ಗೋಪಾಲಕೃಷ್ಣ, ದೂರವಾಣಿ : 9886908152

ಬೇಕಾಗಿದ್ದಾರೆ
ಡಿ.ಜಿ.ಎಫ್ ಗೋಲ್ಡ್ ಮತ್ತು ಡೈಮಂಡ್ ಜ್ಯುಯಲ್ಲರಿಗೆ, ಕೆಲಸಕ್ಕೆ ಹುಡುಗರು ಮತ್ತು ಹುಡುಗಿಯರು ಬೇಕಾಗಿದ್ದಾರೆ.
10,000/- Basic Salary
+ 10,000/- Incentive
8884171888

WANTED
SALES Staff : Male/female
1. Readymade Women's Wear (M/F): 3 nos. (2 Yrs Exp.)
2. Fancy and Silk Saree (M/F): 3 nos. (2 Yrs Exp.)
3. Kids (M/F) : 3 nos. (2 Years Experience)
4. Helper - (M/F) : 5 nos.
5. Security Guard : 2 nos.
Interview Timing - 11.30am to 2pm - 3.30pm to 6pm
Interview Date 21-02-2023 to 23-02-2023
Bhimji's 65, DD Urs Road, Mysore-1.
Ph: 0821-4192666

ಬೇಕಾಗಿದ್ದಾರೆ
ಕಂಪ್ಯೂಟರ್ ಆಫೀಸಿನಲ್ಲಿ, ಫ್ರಂಟ್ ಆಫೀಸ್ ಮತ್ತು ಅಕೌಂಟ್ಸ್ ನಿರ್ವಹಣೆಗಾಗಿ, ಬಿ.ಕಾಂ. ಮಾಡಿರುವ 25 ವರ್ಷದೊಳಗಿನ ಮಹಿಳಾ ಅಭ್ಯರ್ಥಿಗಳು ಬೇಕಾಗಿದ್ದಾರೆ. ಕಂಪ್ಯೂಟರ್ ಮತ್ತು ಅಕೌಂಟ್ಸ್‌ನಲ್ಲಿ ಅನುಭವವುಳ್ಳವರಿಗೆ ಹೆಚ್ಚಿನ ಆದ್ಯತೆ. ಸಂಪರ್ಕಿಸಿ:
Mob: 8073393505

ಬಿಜೆಪಿ–ಕಾಂಗ್ರೆಸ್ ಪೋಸ್ಟರ್ ವಾರ್‌ಗೆ ಬ್ರೇಕ್

ಮೈಸೂರು ಪಾಲಿಕೆಯಿಂದ ತೆರವು, ಮರೆ ಮಾಡುವ ಕಾರ್ಯ ಆರಂಭ



ಮೈಸೂರು, ಫೆ.20(ಎಸ್‌ಬಿಡಿ)– ಮೈಸೂರಿನಲ್ಲಿ ನಡೆದಿರುವ ಬಿಜೆಪಿ–ಕಾಂಗ್ರೆಸ್ ಪೋಸ್ಟರ್ ಜಟಾಪಟಿಗೆ ಬ್ರೇಕ್ ಹಾಕುವ ರೀತಿಯಲ್ಲಿ ಮಹಾನಗರ ಪಾಲಿಕೆ ಕ್ರಮ ಕೈಗೊಂಡಿದೆ.

ನಗರದ ವಿವಿಧೆಡೆ 'ಬಿಜೆಪಿಯೇ ಭರವಸೆ' ಹಾಗೂ ಸರ್ಕಾರದ ಸಾಧನೆಗಳ ಪೋಸ್ಟರ್ ಅಂಟಿಸಲಾಗಿದೆ. ಮತ್ತೊಂದೆಡೆ ಬಿಜೆಪಿ ಪೋಸ್ಟರ್‌ಗಳಿರುವ ಪಕ್ಕದಲ್ಲಿ ಕಾಂಗ್ರೆಸ್ ವತಿಯಿಂದ ಬುರುಡೆ ಭರವಸೆ ಸಾಕು ಎಂಬ ಪೋಸ್ಟರ್ ಅಂಟಿಸುವ ಅಭಿಯಾನ ನಡೆಸಲಾಗುತ್ತಿದೆ. ಇದರ ನಡುವೆ ಮೈಸೂರು ನಗರ ಪಾಲಿಕೆ ಪೋಸ್ಟರ್ ತೆರವು ಕಾರ್ಯಾಚರಣೆ ಆರಂಭಿಸಿದ್ದು, ಈ ಮೂಲಕ ಸಾರ್ವತ್ರಿಕ ಚುನಾವಣೆ ಹೊಸ್ತಿಲಲ್ಲಿ ಎರಡು ರಾಷ್ಟ್ರೀಯ ಪಕ್ಷಗಳ ಪೋಸ್ಟರ್ ಜಟಾಪಟಿಗೆ ಬ್ರೇಕ್ ಬಿದ್ದಂತಾಗಿದೆ.

ಬಣ್ಣ ಬಳಿಯಲಾಗುತ್ತಿದೆ: ಆರಂಭಿಕ ಕ್ರಮವಾಗಿ ಸರ್ಕಾರಿ ಕಟ್ಟಡದ ಗೋಡೆ, ಕಾಂಪೌಂಡ್‌ಗಳ ಮೇಲೆ ಅಂಟಿಸಿದ್ದ ಪೋಸ್ಟರ್ ತೆರವುಗೊಳಿಸಲಾಗಿದೆ. ಸ್ಟಿಕ್ಕರ್ ಮಾದರಿ ಪೋಸ್ಟರ್‌ಗಳಿಗೆ ಬಣ್ಣ ಬಳಿದು ಮುಚ್ಚಲಾಗುತ್ತಿದೆ. ಯಾವುದೇ ರಾಜಕೀಯ ಪಕ್ಷಗಳ ಪೋಸ್ಟರ್, ಬ್ಯಾನರ್, ಫ್ಲೆಕ್ಸ್‌ಗಳನ್ನು ಸರ್ಕಾರಿ ಜಾಗದಲ್ಲಿ ಅಳವಡಿಸಲು ಅವಕಾಶವಿಲ್ಲ. ಆದರೆ ಇತ್ತೀಚೆಗೆ ಎಲ್ಲೆಂದರಲ್ಲಿ ಪೋಸ್ಟರ್‌ಗಳು ಕಣ್ಣಿಗೆ ರಾಚುತ್ತಿದ್ದವು. ದಶಕಗಳ ಹಿಂದೆ ಕಂಡಕಂಡಲ್ಲಿ ಸಿನಿಮಾ ಪೋಸ್ಟರ್ ಅಂಟಿಸುತ್ತಿದ್ದ ಮಾದರಿಯನ್ನು ಅನುಸರಿಸಲಾಗುತ್ತಿತ್ತು. ಸದ್ಯ ಆರಂಭಿಕ ಹಂತದಲ್ಲೇ ಪಾಲಿಕೆ ಕಡಿವಾಣ ಹಾಕುವ ಪ್ರಯತ್ನ ನಡೆಸಿದೆ.

ರಾಜ್ಯ ಚುನಾವಣಾ ಆಯೋಗದ ಸೂಚನೆ ಮೇರೆಗೆ ಮೈಸೂರು ಮಹಾನಗರ ಪಾಲಿಕೆ ಆಯುಕ್ತ ಲಕ್ಷ್ಮಿಕಾಂತ ರೆಡ್ಡಿ, ರಾಜಕೀಯ ಪಕ್ಷಗಳಿಗೆ ಸಂಬಂಧಿಸಿದ ಪೋಸ್ಟರ್ ತೆರವಿಗೆ ಕ್ರಮ ವಹಿಸಿದ್ದಾರೆ. ಈ ಸಂಬಂಧ ನಿನ್ನೆಯೇ ಅಧಿಕಾರಿಗಳಿಗೆ ಸೂಚನೆ ನೀಡಿದ್ದು, ಅದರಂತೆ ಸರ್ಕಾರಿ ಆಸ್ತಿಯ ಮೇಲೆ ಅಂಟಿಸಲಾಗಿದ್ದ ಪೋಸ್ಟರ್ ತೆರವು ಮಾಡಿ, ಬಣ್ಣ ಬಳಿಯಲಾಗಿದೆ. ಮುಂದಿನ ದಿನಗಳಲ್ಲಿ ಸಾರ್ವಜನಿಕ ಸ್ಥಳಗಳಲ್ಲಿರುವ ಎಲ್ಲಾ ಪೋಸ್ಟರ್, ಬ್ಯಾನರ್‌ಗಳನ್ನೂ ತೆರವುಗೊಳಿಸುವ ಚಿಂತನೆ ಇದೆ ಎನ್ನಲಾಗಿದೆ. ಆದರೆ ಈ ಬಗ್ಗೆ ಸ್ಪಷ್ಟನೆಗೆ ಪಾಲಿಕೆ ಆಯುಕ್ತರು ಲಭ್ಯವಾಗಲಿಲ್ಲ.

ಚಾಲಕರು ಬೇಕಾಗಿದ್ದಾರೆ
ಮೈಸೂರು ಪೇಂಟ್ಸ್ ಅಂಡ್ ವಾರ್ನಿಷ್ ಅಧ್ಯಕ್ಷರ ಕಾರಿಗೆ ಹೊರಗುತ್ತಿಗೆ ಆಧಾರದ ಮೇಲೆ ಬೇಕಾಗಿದ್ದಾರೆ.
ಸರ್ಕಾರ ನಿಗದಿಪಡಿಸಿದ ವೇತನ, ಇತರೆ ಸವಲತ್ತು ಕಲ್ಪಿಸಲಾಗುವುದು.
ಬೆಂಗಳೂರಿನ ಪೂರ್ಣ ಪರಿಚಯವಿರುವವರಿಗೆ ಆದ್ಯತೆ
ಅರ್ಜಿಯನ್ನು ಖುದ್ದಾಗಿ ಅಧ್ಯಕ್ಷರ ಆಪ್ತ ಶಾಖೆಗೆ ತಲುಪಿಸುವುದು.

WANTED
For Reputed Restaurant In Mysore
Chef - South Indian, North Indian Chinese, Tandoori, Dosa Master, Tea, Coffee and Juice Master
Helpers, Waiters, Captain's Cashier's
+918088865803

FLAT FOR SALE
2 BHK
at Lakshmipuram
8884410599/9880058053

SITES FOR SALE
1. 40X60 and larger dimensions at Mamta Enclave Vajamangala, near RR Wedding Bells.
2. 30X50 sites at South Avenue Layout, near H.D kote ring road junction
3. 3 BHK Apartment with private balcony for sale on KRS road near Venkateshwara temple
Contact +91 89719 83819

ಮೈಸೂರು ಮಿತ್ರ 43

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

-ಜಾಹೀರಾತು ವ್ಯವಸ್ಥಾಪಕರು

ಮೈಸೂರು ಜಿಲ್ಲಾ ಸಹಕಾರಿ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿ

ಮೆಗಾ ಡೈರಿ ಸಂಕೀರ್ಣ, ಬನ್ನೂರು ರಸ್ತೆ, ಆಲನಹಳ್ಳಿ ಅಂಚೆ, ಮೈಸೂರು – 570028.
ದೂರವಾಣಿ ಸಂಖ್ಯೆ:0821–2474475, ಫ್ಯಾಕ್ಸ್ ನಂ.0821–2474476,
ಇ–ಮೇಲ್ : purmymul@gmail.com

ಟೆಂಡರ್ ಪ್ರಕಟಣೆ (ಇ–ಟೆಂಡರ್ ಮುಖಾಂತರ ಮಾತ್ರ)

ಮೈಸೂರು ಜಿಲ್ಲಾ ಸಹಕಾರಿ ಹಾಲು ಒಕ್ಕೂಟಕ್ಕೆ ಗುತ್ತಿಗೆ ಕಾರ್ಮಿಕರುಗಳನ್ನು ಒದಗಿಸಲು ಅರ್ಹ ಟೆಂಡರ್‌ದಾರರಿಂದ ಇ–ಪ್ರೊಕ್ಯೂರ್‌ಮೆಂಟ್ ಮುಖೇನ ಟೆಂಡರನ್ನು ಆಹ್ವಾನಿಸಲಾಗಿದೆ. ಟೆಂಡರ್ ದಸ್ತಾವೇಜುಗಳನ್ನು ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪ್ಲಾಟ್ ಫಾರಂ ಅಡಿ www.eproc.karnataka.gov.in ನಲ್ಲಿ ಅಪ್‌ಲೋಡ್ ಮಾಡಬಹುದಾಗಿರುತ್ತದೆ. ವಿವರ ಈ ಕೆಳಗಿನಂತಿದೆ.

ಕ್ರ. ಸಂ	ಟೆಂಡರ್ ಪ್ರಕಟಣೆ ಸಂಖ್ಯೆ	ಸೇವೆಯ ವಿವರ	ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ
1	IFT No:100-293/ MYMUL/ PUR/2023	ಒಕ್ಕೂಟದ ನಂದಿನಿ ಹಾಲನ್ನು ಚೆನ್ನೈ ನಗರದಲ್ಲಿ ದಿನ ಪ್ರತಿ ಅಂದಾಜು 35000ಲೀ ಹಾಗೂ ಮೊಸರನ್ನು 2000ಲೀಟರ್‌ಷ್ಟು ಕೋ ಪ್ಯಾಕಿಂಗ್ ಮಾಡಿಸುವ ಬಗ್ಗೆ.	14.03.2023 ಸಂಜೆ 5.00 ಗಂಟೆಯವರೆಗೆ
2	KMF/2022-23 /IND10732	ಒಕ್ಕೂಟಕ್ಕೆ ಅಗತ್ಯವಿರುವ ಉರುವಲು ಸೌದೆಯನ್ನು ವಾರ್ಷಿಕ ದರ ಗುತ್ತಿಗೆ ಆಧಾರದಲ್ಲಿ ಖರೀದಿಸುವ ಬಗ್ಗೆ.	18.03.2023 ಸಂಜೆ 5.00 ಗಂಟೆಯವರೆಗೆ
3	KMF/2022-23/ IND10734	ಒಕ್ಕೂಟಕ್ಕೆ ಅಗತ್ಯವಿರುವ ಮುಸುಕಿನ ಜೋಳ, ಸಕ್ಕರೆ ಹಾಗೂ ವೆಟರ್ನರಿ ಹೆಮಟಾಲಾಜಿ ಅನಲೈಜರ್ ಸಿಸ್ಟಂ ಅನ್ನು ಖರೀದಿಸುವ ಬಗ್ಗೆ.	28.02.2023 ಸಂಜೆ 5.00 ಗಂಟೆಯವರೆಗೆ
4	IFT No.1029: ADMN: Tender:2023	ಒಕ್ಕೂಟದ ಮೆಗಾ ಡೈರಿಯಲ್ಲಿ ಅಳವಡಿಸಿರುವ ಪ್ಯಾಕಿಂಗ್ ಯಂತ್ರಗಳ ಚಾಲನೆ ಮತ್ತು ನಿರ್ವಹಣೆಗೆ ಸಂಬಂಧಿಸಿದ ಕೆಲಸಗಳನ್ನು ದ್ವೈವಾರ್ಷಿಕ ಅವಧಿಗೆ ತುಂಡು ಗುತ್ತಿಗೆ / ಸೇವಾ ಗುತ್ತಿಗೆ ಪಡೆಯಲು ಅರ್ಹ ಕಾರ್ಮಿಕ ಗುತ್ತಿಗೆದಾರರಿಂದ ಟೆಂಡರ್ ಆಹ್ವಾನಿಸಲಾಗಿದೆ.	24.02.2023 ಸಂಜೆ 6.00 ಗಂಟೆಯವರೆಗೆ

ಹೆಚ್ಚಿನ ಮಾಹಿತಿಗಾಗಿ ಖರೀದಿ ವಿಭಾಗದ ವ್ಯವಸ್ಥಾಪಕರನ್ನು (6366430803) ಸಂಪರ್ಕಿಸಬಹುದಾಗಿದೆ.

ಸಹಿ/–,ವ್ಯವಸ್ಥಾಪಕ ನಿರ್ದೇಶಕರು
ಮೈಸೂರು ಜಿಲ್ಲಾ ಸಹಕಾರಿ ಹಾಲು ಒಕ್ಕೂಟ ನಿ.,